ಕನ್ನಡ ವಿಶ್ವವಿದ್ಯಾಲಯ, ಹಂಪಿ

ತೈಲೂರು ವೆಂಕಟಕೃಷ್ಣ ಅವರ ಕೃತಿಗಳು

ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಅರ್ಪಿಸಿದ ನಿಬಂಧ

ಸಂಶೋಧಕರು

ಎ. ತಗಡಯ್ಯ

ನೋ. ಸಂ. : KRS-MKS 00456

ಮಾರ್ಗದರ್ಶಕರು

ಡಾ. ಬೋರೇಗೌಡ ಚಿಕ್ಕಮರಳಿ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

೨೦೦೯-೧೦

ಕನ್ನಡ ವಿಶ್ವವಿದ್ಯಾಲಯ, ಹಂಪಿ

ತೈಲೂರು ವೆಂಕಟಕೃಷ್ಣ ಅವರ ಕೃತಿಗಳು

ಕನ್ನಡ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಅರ್ಪಿಸಿದ ನಿಬಂಧ

ಸಂಶೋಧಕರು

ಎ. ತಗಡಯ್ಯ

ನೋ. ಸಂ. : KRS-MKS 00456

ಮಾರ್ಗದರ್ಶಕರು

ಡಾ. ಬೋರೇಗೌಡ ಚಿಕ್ಕಮರಳಿ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)

೨೦೦೯–೧೦

875

ಮಾರ್ಗದರ್ಶಕರ ಪ್ರಮಾಣ ಪತ್ರ

"**ತೈಲೂರು ವೆಂಕಟಕೃಷ್ಣ ಅವರ ಕೃತಿಗಳು**" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಶ್ರೀ ಎ. ತಗಡಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವ ವಿಶ್ವವಿದ್ಯಾಲಯಕ್ಕೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಮಂಡ್ಯ
ದಿನಾಂಕ: ೨೦-೦೮-೨೦೧೦

ಡಾ. ಬೋರೇಗೌಡ ಚಿಕ್ಕಮರಳಿ
ಆಯ್ಕೆ ಶ್ರೇಣಿ ಕನ್ನಡ ಉಪನ್ಯಾಸಕರು
ವಿಜಯ ಪ್ರಥಮದರ್ಜೆ ಕಾಲೇಜು
ಪಾಂಡವಪುರ

ಘೋಷಣಾ ಪತ್ರ

ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ೨೦೦೯-೧೦ನೇ ಸಾಲಿಗೆ ಕನ್ನಡ ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್. ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ತೈಲೂರು ವೆಂಕಟಕೃಷ್ಣ ಅವರ ಕೃತಿಗಳು"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ. ಬೋರೇಗೌಡ ಚಿಕ್ಕಮರಳಿಯವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲೀ ಯಾವುದೇ ಗ್ರಂಥ ಅಥವಾ ನಿಯತಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಬೇರೆ ಯಾವುದೇ ವಿಶ್ವವಿದ್ಯಾಲಯಕ್ಕೂ ಯಾವುದೇ ಪದವಿಗೂ ಸಲ್ಲಿಸಿರುವುದಿಲ್ಲ. ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಈ ನಿಬಂಧವನ್ನು ಸಲ್ಲಿಸುತ್ತಿದ್ದೇನೆ.

ಸ್ಥಳ: ಮಂಡ್ಯ

ದಿನಾಂಕ: ೨೦-೦೮-೨೦೧೦

(ಎ. ತಗಡಯ್ಯ)
ಎಂ.ಫಿಲ್. ವಿದ್ಯಾರ್ಥಿ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

'ತೈಲೂರು' ಎಂಬುದು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಒಂದು ಊರು. ಈ ಸ್ಥಳನಾಮ ವ್ಯಕ್ತಿನಾಮವಾಗಿ ಶ್ರೀ ಹೆಚ್. ವೆಂಕಟಕೃಷ್ಣೇಗೌಡ ಎಂಬ ಹೆಸರು 'ತೈಲೂರು ವೆಂಕಟಕೃಷ್ಣ' ಆಗಿ ಜನಮನಕ್ಕೆ ಹತ್ತಿರವಾಗಿದೆ. ಮೌನಭಾಷಿ, ಶ್ವೇತ ವಸ್ತ್ರಧಾರಿ, ಅಪಾರ ಕ್ಷೇತ್ರಾನುಭವಿ, ಉತ್ತಮ ಓದುಗ, ಆದರ್ಶ ಕೃಷಿಕ, ಮೇಲಾಗಿ ಚಿಂತಕ, ಶಿಕ್ಷಣ ಪ್ರೇಮಿ, ಸಾಹಿತಿ ಹೀಗೆ ಸರ್ವಗುಣ ಸಂಪನ್ನ ತೈಲೂರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಕಾದಂಬರಿಯು' ಅತ್ಯಂತ ಜನಪ್ರಿಯ ಹಾಗೂ ಪ್ರಭಾವಶಾಲಿಯಾದ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಈ ಸಾಹಿತ್ಯ ಪ್ರಕಾರವು ಜನಸಾಮಾನ್ಯರ ಆಶೋತ್ತರ, ಅಭಿರುಚಿ, ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಹೊಸಗನ್ನಡದಲ್ಲಿ ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದ ಭಾವಗೀತೆ, ಸಣ್ಣಕತೆ, ಜೀವನಚರಿತ್ರೆ, ಆತ್ಮಚರಿತ್ರೆ, ಪ್ರವಾಸ ಸಾಹಿತ್ಯ ನಂತರ ಸಂಶೋಧನಾ ಗ್ರಂಥಗಳು, ಸಂಪಾದಿತ ಗ್ರಂಥಗಳ ಆವಿಷ್ಕಾರ ಹೀಗೆ ಮೊದಲಾದ ಸಾಹಿತ್ಯದ ಪ್ರಕಾರಗಳು ಹುಟ್ಟಿದಂತೆ ಇಂಗ್ಲೀಷ್‌ನ 'ನಾವೆಲ್' ಎಂಬ ಪ್ರಕಾರ 'ಕಾದಂಬರಿ' ಎಂಬ ಹೆಸರಿನಿಂದ ಪ್ರಚುರವಾಯಿತು.

ಪ್ರತಿಯೊಂದು ಸಾಹಿತ್ಯವು ಕೂಡ ಅಂದಂದಿನ ಸಮಕಾಲೀನ ಜೀವನವನ್ನು ಪ್ರತಿಬಿಂಬಿಸುತ್ತದೆ. ಬರಿ ಬಿಂಬಿಸುವುದಷ್ಟೇ ಅಲ್ಲ, ಬದಲಾವಣೆಯ ಆಶಯವನ್ನು ಕೂಡ ಒಳಗೊಂಡಿರುತ್ತದೆ. ಇಂತಹ ಸಾಹಿತ್ಯ ಕೃತಿಗಳು ಅಂದಂದಿನ ಕಾಲಮಾನದ ಜನಜೀವನದ ಎಲ್ಲಾ ಮುಖಗಳನ್ನು ಒಳಗೊಂಡಿರುತ್ತದೆ. ಸಮಗ್ರವಾಗಿ ಅಲ್ಲದಿದ್ದರೂ ಕೆಲವೊಂದು ಅಂಶಗಳನ್ನು ಬರಿ ಉಲ್ಲೇಖಗಳಿಂದಲೋ ಇಲ್ಲವೇ ಅಲ್ಲಲ್ಲಿ ಕೃತಿಗಳಲ್ಲಿನ ಪಾತ್ರಗಳಿಂದಲೋ ವ್ಯಂಗ್ಯದಿಂದ ಇಲ್ಲವೇ ಮೌನವಾಗಿ ಎಲ್ಲವನ್ನು ಒಪ್ಪಿಕೊಳ್ಳುವುದರಿಂದಲೋ, ಒಟ್ಟಿನಲ್ಲಿ ಆಯಾ ಜನಜೀವನವನ್ನು, ಪ್ರಾದೇಶಿಕತೆಯನ್ನು ಪ್ರತಿಬಿಂಬಿಸುತ್ತವೆ ಇಪ್ಪತ್ತೊಂದನೇ ಶತಮಾನದ ಉತ್ತರಾರ್ಧದಲ್ಲಿ ತೈಲೂರು ವೆಂಕಟಕೃಷ್ಣರವರು ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಇದಕ್ಕಿಂತ ಮೊದಲು ಇವರು ಕೃಷಿಕರಾಗಿದ್ದು ನಂತರ ಇವರ ಸಣ್ಣ ಕತೆಗಳು ವಾರಪತ್ರಿಕೆಗಳಾದ ಸುಧಾ, ತರಂಗ, ಕರ್ಮವೀರ ಮುಂತಾದ ನಿಯತಕಾಲಿಕ ಪತ್ರಿಕೆಗಳಲ್ಲಿ ಅಂದು ಕಾಣಿಸಿಕೊಂಡಿವೆ. ಇವರು ನಿರಂತರ ಬರವಣಿಗೆಯಲ್ಲಿ ತೊಡಗಿಸಿಕೊಂಡವರು. ಈ ಅವಧಿಯಲ್ಲಿ ಅವರು ಅನೇಕ ವೃತ್ತಿಗಳಲ್ಲಿ, ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದ ತೈಲೂರರ ಅನುಭವ, ವೈಚಾರಿಕ ಜ್ಞಾನ, ವೈಶಾಲ್ಯದ ಗುಟ್ಟು ಇವರ ಸಾಹಿತ್ಯ ಕೃತಿಗಳಲ್ಲಿ ಒಡಮೂಡಿರುವುದು ಗಮನಾರ್ಹ ಸಂಗತಿ.

ತೈಲೂರರು ಸುಮಾರು ಎರಡು ದಶಕಗಳ ಕಾಲ ಸಾಹಿತ್ಯದಲ್ಲಿ ಸೇವೆ ಸಲ್ಲಿಸಿದ್ದರೂ ಯಾವುದೇ ಗುಂಪಿಗೆ ಸೇರಿಕೊಂಡಾಗಲಿ, ತಮ್ಮದೇ ಆದ ಗುಂಪು ಕಟ್ಟಿಕೊಂಡಾಗಲಿ ಬಾಳಿದವರಲ್ಲ. ತಾವಾಗಿ ಮುಂದೆ ಬಂದು ಹಕ್ಕು ಸ್ಥಾಪಿಸಿದವರೂ ಅಲ್ಲ, ಜೀವನದುದ್ದಕ್ಕೂ ಎದುರಾದ ಸಮಸ್ಯೆಗಳಿಂದ ದೂರ ಉಳಿದವರೂ ಅಲ್ಲ, ಕೃಷಿ, ಸಮಾಜಸೇವೆ, ಸಾಮಾಜಿಕ ಸೇವೆ ವಿಶೇಷವಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಕಾದಂಬರಿಗಳು, ಸಂಶೋಧನಾ ಗ್ರಂಥಗಳು, ಸಣ್ಣ ಕತೆಗಳು, ಲೇಖನಗಳು, ಮೊದಲಾದ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿ, ಮಂಡ್ಯ ಜಿಲ್ಲೆಯ ಗೆಝೆಟಿಯರ್ ಸಲಹಾ ಮಂಡಳಿಯ ಸದಸ್ಯರಾಗಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ಸಲ್ಲಿಸಿದ್ದಾರೆ. ತೈಲೂರರ ಮೊದಲ ಕಾದಂಬರಿ 'ಅಗ್ನಿಕುಂಡ'. ಇದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ಎನ್ನಬಹುದು. ಯಾವುದೇ ಲೇಖಕನೊಬ್ಬನ ಚೊಚ್ಚಲ ಕೃತಿಯೊಂದು ಈ ಬಗೆಯ ಗೌರವ ಹೆಗ್ಗಳಿಕೆಯನ್ನು ಪಡೆದಿರುವುದು ಅಪರೂಪದ ಘಟನೆ.

ಪ್ರಸ್ತುತ 'ಅಗ್ನಿಕುಂಡ' ಕಾದಂಬರಿ ಬರಗಾಲದ ಭೀಕರತೆಯಲ್ಲಿ ಬೆಂದು ಬಸವಳಿದ ಹಳ್ಳಿಯ ದಾರುಣ ಚಿತ್ರಣ ಎದೆಯಾಳವನ್ನು ಸೀಳಿದ ಅನುಭವ ನೀಡುತ್ತದೆ. ನಿಜಕ್ಕೂ ಹಳ್ಳಿಜನ ಅಗ್ನಿಕುಂಡದಲ್ಲಿ ಬಿದ್ದು ಬೆಂದ ಕಥೆ ಇದು. ಗ್ರಾಮೀಣ ಬದುಕಿನ ನೈಜ ಚಿತ್ರಣದೊಡನೆ ಜಾಗತೀಕರಣದ ಪ್ರಭಾವ ಮುದ್ರೆಯನ್ನು ಹಳ್ಳಿಗಳು ಮೈಗೂಡಿಸಿಕೊಂಡು ಅತಂತ್ರ ಸ್ಥಿತಿ ತಲುಪಿರುವ ಕಠೋರ ಸತ್ಯವನ್ನು ಕಂಡರಿಸಿರುವ ಲೇಖಕರ ವೈಜಾನಿಕ ಮತ್ತು ದಾರ್ಶನಿಕ ಚಿಂತನೆ ಹಾಗೂ ಅನುಭವ ಈ ಕೃತಿಯಲ್ಲಿ ಮಡುಗಟ್ಟಿ ನಿಂತಿರುವುದನ್ನು ಕಾಣಬಹುದು.

'ಸಮ್ಮಿಳನ' ಈ ಕಾದಂಬರಿಯಲ್ಲಿ ಬಡ ಅನಾಥ ಮಕ್ಕಳಿಗೆ (ಅದರಲ್ಲೂ) ಒಂದು ಆಶ್ರಯ, ಪ್ರೋತ್ಸಾಹ, ಉತ್ತೇಜನ ಸಿಕ್ಕಿದರೆ ಅವರು ಸಮಾಜದಲ್ಲಿ ಎಷ್ಟರ ಮಟ್ಟಿಗೆ ಮುಂದೆ ಬರುತ್ತಾರೆ ಮತ್ತು ಸಮಾಜದಲ್ಲಿ ಆರೋಗ್ಯವಂತ ವ್ಯಕ್ತಿಗಳಾಗಿ ಉತ್ತಮ ಸಮಾಜ ನಿರ್ಮಾಣ ಮಾಡಲು ಹೇಗೆ ಕಾರಣೀಭೂತರಾಗುತ್ತಾರೆ ಎಂಬ ಅಂಶವನ್ನು ಚಿತ್ರಿಸಿದ್ದಾರೆ.

ಪಾರ್ವತಿ (ರಕ್ತಾಭಿಷೇಕ), ಈ ಕಾದಂಬರಿಯಲ್ಲಿ, ಬಾಲ್ಯದಲ್ಲಿ ಅಥವಾ ಚಿಕ್ಕ ವಯಸ್ಸಿನಲ್ಲಿ ಮನಸ್ಸಿನ ಮೇಲೆ ಆದ ಪರಿಣಾಮ ಜೀವನದುದ್ದಕ್ಕೂ ಬೆಳೆದು ಬದುಕಿನ ಹೊಯ್ದಾಟದ ಒಂದು ಜೀವನ ಕಥೆಯಾಗಿ ಮಾರ್ಪಾಟಾಗಿದೆ. ಇದೊಂದು ಮನೋವಿಶ್ಲೇಷಣಾತ್ಮಕ ಕಾದಂಬರಿಯಾಗಿದೆ. ಮನಸ್ಸಿನ ಮಾರ್ಪಾಡಿಗೆ ಅನೇಕ

ಘಟನೆಗಳು ಒದಗಿಬಂದರೂ ಹಿತೈಷಿಗಳು, ಅಂತಃಕರುಣಿಗಳು ಆ ವ್ಯಕ್ತಿಯ ಬಾಳಚಿಕ್ಕ ವಯಸ್ಸಿನಲ್ಲಿ ಮನಸ್ಸಿನ ಮೇಲೆ ಆದ ಪರಿಣಾಮ ಜೀವನದುದ್ದಕ್ಕೂ ಬೆಳೆದು ಬದುಕಿನ ಹೊಯ್ದಾಟದ ಒಂದು ಜೀವನ ಕಥೆಯಾಗಿ ಮಾರ್ಪಾಟಾಗಿದೆ. ಇದೊಂದು ಮನೋವಿಶ್ಲೇಷಣಾತ್ಮಕ ಕಾದಂಬರಿಯಾಗಿದೆ. ಮನಸ್ಸಿನ ಮಾರ್ಪಾಡಿಗೆ ಅನೇಕ ಘಟನೆಗಳು ಒದಗಿಬಂದರೂ ಹಿತೈಷಿಗಳು, ಅಂತ:ಕರುಣಿಗಳು ಆ ವ್ಯಕ್ತಿಯ ಬಾಳ ಬೆಳಕಿಗೆ ಪ್ರಯತ್ನಿಸುತ್ತವೆ. ಮಾನಸಿಕ ಪೆಟ್ಟಿನಿಂದ ಬಳಲಿದ ಒಂದು ಹೆಣ್ಣಿನ ಚಿತ್ರಣವನ್ನು ಲೇಖಕರು ಕಲಾತ್ಮಕವಾಗಿ ಇಂದಿನ ಪರಿಸ್ಥಿತಿಗೆ ಅನುಗುಣವಾಗಿ ಚಿತ್ರಿಸಿದ್ದಾರೆ.

'ತೈಲೂರು'ರವರು ಸಾಹಿತ್ಯ ಕ್ಷೇತ್ರವಲ್ಲದೆ ಜಾನಪದ ಕ್ಷೇತ್ರ, ಸಾಂಸ್ಕೃತಿಕ ಕ್ಷೇತ್ರ, ಸಾಮಾಜಿಕ ಕ್ಷೇತ್ರ, ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. 'ಬದುಕು' ಇವರ ಜಾನಪದ ಸಂಪಾದಿತ ಗ್ರಂಥವಾಗಿದೆ. ಈ ಸಂಪಾದಿತ ಗ್ರಂಥದಲ್ಲಿ ಜಾನಪದದ ಹಾಡು, ಕುಣಿತ–ಮೆರೆತ, ಜಾತ್ರೆ, ಹಬ್ಬ ಹರಿದಿನ, ಕಾವ್ಯ, ಕಥೆ, ಗಾದೆ, ಒಗಟು, ಲಾವಣಿ, ನಂಬಿಕೆ, ಪುರಾಣ, ವೈದ್ಯಮಂತ್ರ ವಿದ್ಯೆ, ಕುಶಲಕೈಗಾರಿಕೆ ಇತ್ಯಾದಿ ಪ್ರಕಾರಗಳನ್ನು ಮತ್ತು ಪ್ರಸ್ತುತ ಮಂಡ್ಯ ಜಿಲ್ಲೆಯ ಜಾನಪದದ ಚಟುವಟಿಕೆಗಳನ್ನು ತಮ್ಮ ಗ್ರಂಥದಲ್ಲಿ ಮೂಡಿಸಿದ್ದಾರೆ. ನಶಿಸಿಹೋಗಿದ್ದ ಜನಪದ ರಂಗಭೂಮಿಯು ಮೆಲ್ಲಮೆಲ್ಲನೆ ಪುನ: ಗರಿಕೆದರಿಕೊಳ್ಳುವ ಪರಿಸ್ಥಿತಿಯನ್ನು ತಮ್ಮ ಕೃತಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ.

'ತೈಲೂರು'ರವರು ಗ್ರಾಮೀಣ ಪ್ರದೇಶದ ಕೌಟುಂಬಿಕ ಹಿನ್ನಲೆಯಲ್ಲಿ ಬೆಳೆದುಬಂದರೂ ಸಹ ಅಲ್ಲಿಯ ಸಮಾಜಕ್ಕೆ ಒಂದು ನೆಲೆ–ಬೆಲೆ ಬರುವ ಸಾಮಾಜಿಕ ಸ್ಥಿತಿಗತಿ ಮತ್ತು ಸ್ಥಾನಮಾನ ಹೆಚ್ಚಿಸಲು ತಮ್ಮ ಕೃತಿಗಳಲ್ಲಿ ಹಲವು ಉತ್ತಮ ಅಂಶಗಳನ್ನು ಚಿತ್ರಿಸುವುದನ್ನು ನಾವು ಕಾಣಬಹುದು.

ಇವುಗಳಲ್ಲದೆ ತೈಲೂರುರವರು ಇತಿಹಾಸ, ಶಾಸನ, ಸ್ಮಾರಕಗಳ ಬಗ್ಗೆ ಕುತೂಹಲಾಸಕ್ತಿ, ಜೀರ್ಣೋದ್ಧಾರಕ್ಕಾಗಿ ಸರ್ಕಾರದ ಗಮನ ಸೆಳೆದು ಜೀವಂತಿಕೆ ಪಡೆಯಲು ಕಾರಣಕರ್ತರು, ಪ್ರಾಚೀನ ಹಸ್ತಪ್ರತಿಗಳು ಕಾಲಗರ್ಭದಲ್ಲಿ ಲೀನವಾಗಿ ಹೋಗಿವೆ ಎನ್ನುವಾಗ ಮನೆಮನೆಗೆ ತಿರುಗಿ ಬೆಳಕು ಕಾಣಿಸಿದ ಅನ್ವೇಷಕ, ಜಾನಪದ ಕ್ಷೇತ್ರದಲ್ಲಿಯೂ ದುಡಿದವರು ಜನಪದ ಕಲಾವಿದರ ಒಡನಾಡಿ, ಇದಕ್ಕೆ ಅವರ 'ಬದುಕು' ಜಾನಪದ ಸಂಪಾದಿತ ಗ್ರಂಥ ಸಾಕ್ಷಿಯಾಗಿದೆ.

ತೈಲೂರುರವರು ಕನ್ನಡ ಸಾರಸ್ವತ ಲೋಕಕ್ಕೆ 'ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ' ಹಾಗೂ 'ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ' ಎಂಬೆರಡು ಅಪೂರ್ವ ಕೃತಿಗಳನ್ನು ನೀಡಿದ್ದಾರೆ.

'ಐತಿಹಾಸಿಕ ದಾಖಲೆಗಳು ಮೌನವಹಿಸಿದಾಗ ಸ್ಥಳನಾಮಗಳು

ಮಾತನಾಡುತ್ತವೆ' ಎಂಬ ಪ್ರಸಿದ್ಧೋಕ್ತಿ ಇದೆ. ಕಾಲಗರ್ಭದಲ್ಲಿ ಅಡಗಿಹೋದ ಎಷ್ಟೋ ಅಪೂರ್ವ ಸಂಗತಿಗಳನ್ನು ಸ್ಥಳನಾಮಗಳು ಉಳಿಸಿಕೊಂಡಿರುತ್ತವೆ. ಈ ನಿಟ್ಟಿನಲ್ಲಿ 'ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ'ದ ಕರ್ತೃ ಶ್ರೀ ತೈಲೂರು ವೆಂಕಟಕೃಷ್ಣರವರು ತಮ್ಮ ಜಿಲ್ಲೆಯ ಕೆಲವು ಊರುಗಳ ಹೆಸರುಗಳನ್ನು ತೆಗೆದುಕೊಂಡು ಒಂದೊಂದಾಗಿ ಅವುಗಳ ಹಿನ್ನೆಲೆ, ನಿಷ್ಪತ್ತಿ ಅವು ಧ್ವನಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಬಿಡಿಸಿ ಮಹತ್ವದ ಕೊಡುಗೆ ನೀಡಿದ್ದಾರೆ.

ಹೀಗಾಗಿ ಕನ್ನಡ ಸಾಂಸ್ಕೃತಿಕ ಕ್ಷೇತ್ರಕ್ಕೆ ಗ್ರಾಮೀಣ ಪ್ರದೇಶದಿಂದ ಬಂದು ತಮ್ಮದೇ ಆದ ಚಾಪು ಮೂಡಿಸಿರುವ ತೈಲೂರುರವರು ಸಾಹಿತ್ಯ, ಇತಿಹಾಸ, ಸಂಸ್ಕೃತಿ, ಜನಪದ ಇತ್ಯಾದಿ ಕ್ಷೇತ್ರಗಳಲ್ಲಿ ಆಸಕ್ತಿಯಿಂದ ತೊಡಗಿ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಇವರು ಈ ಎಲ್ಲಾ ಕ್ಷೇತ್ರಗಳಲ್ಲಿ ಅನೇಕ ರೀತಿಯಲ್ಲಿ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ. ಜಿಲ್ಲಾ ಸಾಹಿತ್ಯ ಪರಿಷತ್ತು, ಜಾನಪದ ಪರಿಷತ್ತುಗಳಿಗೆ ಅಧ್ಯಕ್ಷರಾಗಿ, ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾಗಿ ಮಂಡ್ಯ ಜಿಲ್ಲಾ ಗೆಝೆಟಿಯರ್ ಸಲಹಾ ಮಂಡಳಿಯ ಸದಸ್ಯರಾಗಿ, ಸರ್ಕಾರಗಳ ಇಲಾಖೆಗೆ ಸಹಕಾರಿಯಾಗಿ ಸಮಾಜಕ್ಕೆ, ಸಂಸ್ಕೃತಿಗೆ, ಉಪಕಾರಿ ಮನೋಭಾವನೆ ಹೊಂದಿರುವ ಸಮಾಜಮುಖಿ ಪರಿಸ್ಥಿತಿಯ ಚಿತ್ರಣಗಳನ್ನು ಉತ್ತಮವಾಗಿ ಮೂಡಿಸಿರುವುದು ಮತ್ತು ಪ್ರಾಮಾಣಿಕವಾಗಿ ಕ್ರಿಯಾಶೀಲವಾಗಿ ಅವರ ಉತ್ತಮ ಬರವಣಿಗೆಗಳು ಮತ್ತು ಕೃತಿಗಳು ಅರ್ಹವಾಗಿರುವುದರಿಂದ ಈ ನಿಬಂಧನೆಗೆ ಈ ಅಧ್ಯಯನವನ್ನು ಕೈಗೆತ್ತಿ ಕೊಂಡಿದ್ದೇನೆ.

ಒಂದು ಸಾಹಿತ್ಯ ಕೃತಿಯು ಏನಾಗಿದೆ ಎನ್ನುವುದಕ್ಕಿಂತ ಓದುಗನ ಅಂತರಂಗದಲ್ಲಿ ಅದು ಏನು ಪರಿಣಾಮ ಉಂಟುಮಾಡುತ್ತದೆ ಎನ್ನುವುದು ಹೆಚ್ಚು ಮುಖ್ಯವಾದುದು. ಒಂದು ಕೃತಿಗೆ ಎಷ್ಟು ಓದುಗರಿರುವರೊ ಅಷ್ಟು ಅರ್ಥಾವತಾರಗಳಿವೆ. ಓದುಗರಿಂದ ಪ್ರತ್ಯೇಕವಾದ ಅರ್ಥವೊಂದು ಇಲ್ಲವೇ ಇಲ್ಲ. ಗಟ್ಟಿಮುಟ್ಟಾದ ಕಥನದ ನೆರವಿನಿಂದ ಕಥೆ ಕಾದಂಬರಿಗಳೆರಡು ಓದುಗರೊಡನೆ ನಿರಂತರ ಸಂವಾದ ನಡೆದಾಗ ಮಾತ್ರ ಆ ಕೃತಿ ಉಳಿಯಲು ಸಾಧ್ಯವಾಗುತ್ತದೆ.

'ತೈಲೂರು ವೆಂಕಟಕೃಷ್ಣರವರ ಕೃತಿಗಳು' ಎಂಬ ಶೀರ್ಷಿಕೆಯಡಿಯಲ್ಲಿ ಈ ಅಧ್ಯಯನ ಕೈಗೊಳ್ಳಲಾಗಿದೆ. ತೈಲೂರು ಅವರ ಕೃತಿಗಳ ಅಧ್ಯಯನ ಇದಾಗಿದ್ದು ಇಲ್ಲಿ ಕಾದಂಬರಿಯ ಕಥಾವಸ್ತು, ಪಾತ್ರ ಚಿತ್ರಣ, ಸನ್ನಿವೇಶ, ವರ್ಣನೆ, ನಿರೂಪಣೆ, ಶೈಲಿ, ಲೇಖಕರ ಜೀವನ ದೃಷ್ಟಿಗಳನ್ನು ಮತ್ತು ಶಾಸನ, ಸಂಸ್ಕೃತಿ ಜೀವನಚಿತ್ರಣ, ದೇವಾಲಯಗಳು, ಅವಲೋಕನ, ಸಾಂಸ್ಕೃತಿಕ ಚಟುವಟಿಕೆಗಳು, ಸಮಾಜದೊಡಗಿನ ಸಂಬಂಧ, ಸ್ಥಳನಾಮಗಳು ಮತ್ತು ವೆಂಕಟಕೃಷ್ಣರವರ ವ್ಯಕ್ತಿತ್ವ ಈ ಎಲ್ಲಾ ಅಂಶಗಳನ್ನು ಸಮಗ್ರ ರೀತಿಯಲ್ಲಿ ಮಾಡುವ ಪ್ರಯತ್ನವನ್ನು, ಹೇಳುವ ದೃಷ್ಟಿಯಿಂದ ಕೈಗೊಂಡಿದ್ದೇನೆ.

ಅಧ್ಯಾಯ ೨

ತೈಲೂರು ವೆಂಕಟಕೃಷ್ಣ ಅವರ ಜೀವನ (ಬದುಕು-ಬರಹ)

ತೈಲೂರು ಎಂಬುದು ಒಂದು ಊರು. ಈ ಸ್ಥಳನಾಮ ವ್ಯಕ್ತಿನಾಮವಾಗಿ ಶ್ರೀ ಹೆಚ್. ವೆಂಕಟಕೃಷ್ಣೇಗೌಡ ಎಂಬ ಹೆಸರು 'ತೈಲೂರು ವೆಂಕಟಕೃಷ್ಣ' ಜನಮನಕ್ಕೆ ಹತ್ತಿರವಾಗಿದೆ. ಮೌನಭಾಷಿ, ಶ್ವೇತವಸ್ತ್ರಧಾರಿ, ಹಸನ್ಮುಖಿ, ಅಪಾರ ಕ್ಷೇತ್ರಾನುಭವಿ, ಉತ್ತಮ ಓದುಗ ಆದರ್ಶ ಕೃಷಿಕ ಮೇಲಾಗಿ ಚಿಂತಕ, ಶಿಕ್ಷಣಪ್ರೇಮಿ ಹೀಗೆ ಸರ್ವಗುಣಸಂಪನ್ನ ತೈಲೂರರು.

ತೈಲೂರು ವೆಂಕಟಕೃಷ್ಣರವರು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಶಿಂಷಾ ನದಿಯ ದಡದಲ್ಲಿರುವ ತೈಲೂರು ಎಂಬ ಗ್ರಾಮದಲ್ಲಿ ೨೫-೦೫-೧೯೪೮ರಲ್ಲಿ ಜನಿಸಿದರು. ತಂದೆ ಹೊನ್ನೇಗೌಡ, ತಾಯಿ ಚನ್ನಮ್ಮ, ಅವರದು ಸಾಮಾನ್ಯ ಕೃಷಿ ಕುಟುಂಬವಾದ್ದರಿಂದ ಉದ್ದಕ್ಕೂ ಬಡತನದಲ್ಲಿಯೇ ಬೆಳೆಯಬೇಕಾಯಿತು. ಅಹಿಂಸೆಯ ಮೂರ್ತಿಯಂತಿದ್ದ ಅವರ ತಂದೆಯ ಪ್ರಭಾವ ಮುಂದೆ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಲು ಕಾರಣವಾಯಿತು.

ಮಧ್ಯಮ ವರ್ಗದಿಂದ ಬಂದ ತೈಲೂರರು ಬಹುಕಷ್ಟದಿಂದಲೇ ಶಾಲಾ ಶಿಕ್ಷಣವನ್ನು ಪಡೆದವರು, ಇವರ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ತಮ್ಮ ಹುಟ್ಟೂರಾದ ತೈಲೂರಿನಲ್ಲಿಯೇ ನಡೆಯಿತು. ಪ್ರೌಢ ಶಿಕ್ಷಣ ಮಂಡ್ಯದ ಮೈಷುಗರ್ ಹೈಸ್ಕೂಲಿನಲ್ಲಿ ನಡೆಯಿತು. ಕಾಲೇಜು ಶಿಕ್ಷಣವನ್ನು ಅದರಲ್ಲೂ ವಿಜ್ಞಾನ ವಿಭಾಗದಲ್ಲಿ ಬಿ.ಎಸ್ಸಿ. ಪದವಿಯನ್ನು ಭಾರತೀ ನಗರದ ಭಾರತೀ ಕಾಲೇಜಿನಲ್ಲಿ ಪಡೆದರು. ಆ ವೇಳೆಗಾಗಲೆ ಗಾಂಧೀಜಿಯವರ 'ಸರಳ ಜೀವನ ಉದಾತ್ತ ವಿಚಾರ' ಎಂಬ ಆದರ್ಶ ವಿಚಾರಗಳು ಮತ್ತು ಸಾಹಿತ್ಯ ಪ್ರಕಾರಗಳನ್ನು ಅಭ್ಯಾಸ ಮಾಡಿಕೊಂಡು ಆ ಆದರ್ಶಗಳನ್ನು ಮೈಗೂಡಿಸಿಕೊಂಡು, 'ಹಳ್ಳಿಗಳ ಉದ್ಧಾರವೇ ರಾಷ್ಟ್ರದ ಉದ್ಧಾರ' ಎಂಬ ತತ್ವಚಿಂತನೆಯನ್ನಿಟ್ಟುಕೊಂಡು ಸ್ವತ: ತಮ್ಮ ಗ್ರಾಮಕ್ಕೆ ಮರಳಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು ಮತ್ತು ಗ್ರಾಮಾಂತರ ಜನರ ಬದುಕು ಹಸನಾಗಬೇಕು ಎಂಬ ಹಂಬಲವನ್ನಿರಿಸಿಕೊಂಡಿದ್ದ ಅವರು ಅದಕ್ಕಾಗಿ ಬಗೆಬಗೆಯ ಪ್ರಯತ್ನಗಳನ್ನು ನಡೆಸಿದರು.

ಇವರು ಹುಟ್ಟು ರೈತರು. ಒಕ್ಕಲುತನ ಇವರ ಕುಟುಂಬದ ವೃತ್ತಿ. ರೈತರಾಗಿ ಹುಟ್ಟಿ ಮಣ್ಣಿನಲ್ಲೇ ದುಡಿಯುವ ಸಂಕಲ್ಪವನ್ನು ಹೊಂದಿದ್ದ ಇವರು ಆಕಸ್ಮಿಕವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡರು. "ವ್ಯಕ್ತಿ ಉತ್ತಿ ಬಿತ್ತಿ ಕೃಷಿಕನಾಗಿ ಜೀವಿಸುವನು, ಭೂಮಿಯಲ್ಲಿ ಬಿತ್ತಿದ ಸಸಿ ಬೆಳೆದುದನ್ನು ಕಂಡು ಸಂತಸಪಡುವವನು, ಸಾಹಿತ್ಯ ಕ್ಷೇತ್ರದಲ್ಲಿಯೇ ವ್ಯಕ್ತಿಯ ಸ್ಥಿತಿ ಭಿನ್ನವಲ್ಲ" ಎಂಬಂತೆ ಯಾವುದೇ ಕೆಲಸಕ್ಕೆ ಸೇರಿದರೂ ಪೂರ್ಣ ಪ್ರಮಾಣದಲ್ಲಿ ಆ ಕಾರ್ಯದಲ್ಲಿ ತೊಡಗಿಕೊಳ್ಳುತ್ತಿದ್ದರು. ಇವರ ಸಮಕಾಲೀನ ಸಾಹಿತ್ಯ

ಕೃತಿಗಳ ಅಧ್ಯಯನ ತೀರಾ ಕಡಿಮೆಯಾದರೂ, ಇವರು ಬದುಕಿನಿಂದ ಪಡೆದದ್ದು, ಅನುಭವಿಸಿದ್ದು, ಗಳಿಸಿದ್ದು ಅಪಾರ. ಕನ್ನಡ ಸಾಹಿತ್ಯಕ್ಕೆ ಗ್ರಾಮೀಣರ ಬದುಕು, ಜನಜೀವನ, ಪ್ರಾದೇಶಿಕ ಸೊಗಡನ್ನು ಕೊಟ್ಟಿರುವಂತೆ ಅಲ್ಲಿನ ವಿಶಿಷ್ಟ ಭಾಷೆ, ಸಂಸ್ಕೃತಿ, ಗಾಂಧೀಯುಗದ ಆದರ್ಶಗಳು, ಮೌಲ್ಯಗಳು ಹಾಗೂ ಗಾಂಧೀ ಆನಂತರ ಕಂಡ ಸ್ಥಿತ್ಯಂತರಗಳನ್ನು ನೈತಿಕ ಮೌಲ್ಯಗಳ ಹಿನ್ನೆಲೆಯಲ್ಲಿ ವಿವೇಚಿಸುವುದರ ಮೂಲಕ ಉದಾತ್ತ ಜೀವನದೃಷ್ಟಿ ನೀಡಿದ್ದಾರೆ. ಇವರ ಸಾಹಿತ್ಯ ಕೃತಿಗಳಲ್ಲಿ ಸ್ವಸ್ಥ ಮನಸ್ಸೊಂದು ಮಾನವ ಸಮಾಜದ ಸ್ಥಾಪನೆಯ ಹಿತಕ್ಕಾಗಿ ಮಿಡಿಯುವುದನ್ನು ಅವರ ಕಾದಂಬರಿಗಳಲ್ಲಿ ಕಾಣುತ್ತೇವೆ.

ತೈಲೂರರು ಬದಲಾವಣೆ ಹೊಂದುತ್ತಿರುವ ಹಳ್ಳಿಗಳಲ್ಲಿನ, ಬೆಳೆಯುತ್ತಿರುವ ಪಟ್ಟಣಗಳಲ್ಲಿನ ಜೀವಂತ ಸಮಸ್ಯೆಗಳನ್ನು ಕಂಡಂತಹವರು. ಇವರಿಗೆ ಗ್ರಾಮಾಂತರ ಜನಜೀವನದ ಆಳದ ಸಂಕೀರ್ಣ ಮುಖಗಳೆಲ್ಲ ಕರಗತವಾಗಿರುವಂತೆ ತೋರುತ್ತದೆ. ಇವರ ವಸ್ತುನಿಷ್ಠತೆ, ಪ್ರಾಮಾಣಿಕತೆ, ನೈಜತೆ ಬೆರಗುಗೊಳಿಸುವಂತಹದ್ದು. ಇವರು ಕಂಡ, ಕೇಳಿ ಕಾಣಿಸುವ, ಕೇಳಿಸುವ ಜನ ಇಲ್ಲಿನವರು. ಮಂಡ್ಯ ಜಿಲ್ಲೆಯ ಹಸಿರು, ಚೆಲುವು, ಸಾಂಸ್ಕೃತಿಕ ಚಟುವಟಿಕೆಗಳು ಕೂಡಾ ಇವರ ಬರವಣಿಗೆಯಲ್ಲಿ ತಲೆಹಾಕಿವೆ.

ಓದುವ ಹವ್ಯಾಸವನ್ನು ಚಿಕ್ಕಂದಿನಲ್ಲಿಯೇ ಬೆಳೆಸಿಕೊಂಡಿದ್ದ ತೈಲೂರರು ವಿದ್ಯಾರ್ಥಿ ದೆಸೆಯಲ್ಲಿಯೇ ಬರವಣಿಗೆಯನ್ನು ಆರಂಭಿಸಿದರು. ಪ್ರೌಢಶಿಕ್ಷಣ ಪಡೆಯುವಾಗಲೇ ಅವರು ಬರೆದ ಮೊದಲ ಬರಹ 'ಬಸವಣ್ಣ'ನವರನ್ನು ಕುರಿತ ಚಿಕ್ಕ ಕವನ ಅವರ ಶಾಲೆಯಲ್ಲಿಯೇ ಪ್ರಕಟವಾಯಿತು. ವಿದ್ಯಾರ್ಥಿ ದೆಸೆಯಿಂದಲೇ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಂತಹವರು. ಎಂದೂ ನೈತಿಕ ಮೌಲ್ಯಗಳ ನೆಲೆಗಟ್ಟನ್ನು, ತಮ್ಮ ಜೀವನದೃಷ್ಟಿಯನ್ನೂ, ಗಾಂಧೀ ದರ್ಶನವನ್ನೂ, ಮಾನವೀಯ ಅನುಕಂಪವನ್ನು ತೊರೆದು ಅಗ್ಗದ ಜನಪ್ರಿಯತೆಗಾಗಿ ಬರೆಯಲಿಲ್ಲ. ಈ ದೃಷ್ಟಿಯಿಂದ ಇವರ ಕೃತಿಗಳು ಜೀವನಾನುಭವಗಳ ಮೂಸೆಯಲ್ಲಿ ಮೂಡಿಬಂದವು.

ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡುವ ಮುನ್ನ ಇವರು ಹಲವು ಸಣ್ಣ ಕತೆಗಳನ್ನು ರಚಿಸಿದರು. ಈ ಸಣ್ಣ ಕತೆಗಳು ಅಂದಿನ ದೈನಿಕ ಪತ್ರಿಕೆಗಳಾದ ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಮತ್ತು ವಾರಪತ್ರಿಕೆಗಳಾದ ಸುಧಾ, ತರಂಗ ಮುಂತಾದವುಗಳಲ್ಲಿ ಪ್ರಕಟಗೊಂಡಿವೆ. ಇಲ್ಲಿಯೂ ಸಹ ಕೃಷಿಕ ಸಮಾಜದ ಅವಸ್ಥೆಯನ್ನು ಸರಿಪಡಿಸುವ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಈ ಸಂದರ್ಭದಲ್ಲಿಯೇ ಇವರಿಗೆ ಸರ್ಕಾರಿ ನೌಕರಿ ದೊರೆತರೂ ಸಹಾ ಅದರ ಬಗ್ಗೆ ಚಿಂತಿಸದೆ, ತಮ್ಮ ತಂದೆಯ ಅಭಿಲಾಷೆಯಂತೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿದರು.

ಚಿಕ್ಕಂದಿನಲ್ಲಿಯೇ ಹಳ್ಳಿಯಲ್ಲಿಯೇ ಬೆಳೆದುದರಿಂದ ಇತರ ಮಕ್ಕಳ ಹಾಗೆ ಕೃಷಿ ಚಟುವಟಿಕೆಗಳಲ್ಲಿ ತೊಡಗುತ್ತಿದ್ದರು. ಫೋನ್, ಫ್ಯಾನ್, ವಿದ್ಯುಚ್ಛಕ್ತಿ ಸಂಪರ್ಕ ಇಲ್ಲದಿದ್ದರೂ

ಸಹಾ ಹಳ್ಳಿಯಲ್ಲಿ ಜನ ಬದುಕನ್ನು ಚೆನ್ನಾಗಿ ನಿರೂಪಿಸಿಕೊಂಡು ಬಾಳುತ್ತಿದ್ದರು. ಹೀಗೆ ಹಳ್ಳಿಯ ಸೊಗಡಿನಲ್ಲಿ ಬೆಳೆದ ತೈಲೂರರು ಸಾಹಿತ್ಯದ ಪ್ರಕಾರಗಳಲ್ಲಿ ಹಳ್ಳಿಯ ವಿಷಯವೇ ಚರ್ಚಿತವಾಗಬೇಕೆಂಬ ನಿಲುವನ್ನು ಇಟ್ಟುಕೊಂಡು ಕಾದಂಬರಿ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು.

೧೯೭೪ರಲ್ಲಿ ತೈಲೂರರು ನಶಿಸಿಹೋಗುತ್ತಿದ್ದ ಜನಪದ ಕಲೆಯನ್ನು ಮೇಲ್ದರ್ಜೆಗೆ ಕೊಂಡೊಯ್ಯಲು ಸ್ವಗ್ರಾಮ ತೈಲೂರಿನಲ್ಲಿ ಮದ್ದೂರು ತಾಲ್ಲೂಕು ಜನಪದ ಕಲಾಮೇಳವನ್ನು ಸಂಘಟಿಸಲು ಕಾರಣಕರ್ತರಾದರು. ಇದಕ್ಕೆ ಪ್ರೇರಣೆಯಾದದ್ದು ಪ್ರಸಿದ್ಧ ಜಾನಪದ ವಿದ್ವಾಂಸರಾದ ಶ್ರೀ ಹೆಚ್.ಎಲ್. ನಾಗೇಗೌಡರ 'ನನ್ನೂರು' ಕೃತಿ. ಈ ಕೃತಿಯಲ್ಲಿ ಚಿತ್ರಿತವಾಗಿರುವ ಕಾರ ಹುಣ್ಣಿಮೆ ಹಬ್ಬದಲ್ಲಿ ದನಗಳನ್ನು ಬೆದರಿಸುವ ಚಿತ್ರಣವು ತೈಲೂರು ಗ್ರಾಮದಲ್ಲಿ ನಿಂತುಹೋಗಿದ್ದ ಅಪ್ಪಟ ಗ್ರಾಮೀಣ ಕ್ರೀಡೆಯಾದ ಎತ್ತಿನಗಾಡಿ ಓಡಿಸುವ ಸ್ಪರ್ಧೆಯನ್ನು ಪುನರಾರಂಭಿಸಲು ತೈಲೂರರಿಗೆ ಸ್ಫೂರ್ತಿಯನ್ನು ತಂದುಕೊಟ್ಟಿತು.

೧೯೭೫ರಿಂದ ೧೯೮೫ರವರೆಗೆ ಇವರು ಜಾನಪದ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ಸಲ್ಲಿಸಿದ್ದಾರೆ. ಸ್ವಗ್ರಾಮದಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಜಾನಪದ ಆಟಗಳ ಸ್ಪರ್ಧೆಯನ್ನು ಏರ್ಪಡಿಸಿದರು. ಇದೇ ವೇಳೆಯಲ್ಲಿ ತೈಲೂರರು ಕರ್ನಾಟಕ ಜಾನಪದ ಪರಿಷತ್ತಿನ ಒಡನಾಟದಲ್ಲಿ ಸಕ್ರಿಯ ಪಾತ್ರವನ್ನು ವಹಿಸಿದ್ದಾರೆ. ತೈಲೂರರು ಶ್ರೀ ಹೆಚ್.ಎಲ್. ನಾಗೇಗೌಡರ ಮಾರ್ಗದರ್ಶನದಲ್ಲಿ ಜನಪದಗೀತ ಸಂಗ್ರಹಣ ಕಾರ್ಯದಲ್ಲಿ, ಜನಪದ ಕಲಾವಿದರ ಧ್ವನಿಸುರುಳಿಗಳ ಸಂಗ್ರಹ 'ಸಿರಿಗಂಧ' ಚಿತ್ರೀಕರಣದ ಸಹಾಯಕರಾಗಿ ಗಣನೀಯವಾದ ಸೇವೆ ಸಲ್ಲಿಸಿದ್ದಾರೆ.

ಹೀಗೆ ತೈಲೂರರು ೧೯೮೦ ರಿಂದ ೧೯೮೩ರವರೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿದ್ದ ಶ್ರೀ ಹೆಚ್.ಎಲ್. ನಾಗೇಗೌಡರ ಜೊತೆಗೆ ಮಡಿಕೇರಿ ಭಾಗದ 'ಪೊನ್ನಂಪೇಟೆ'ಯಿಂದ ಹಿಡಿದು ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನವರೆಗೂ ಸಹ ಜನಪದ ಕಲೆಗಳ ಸಂಗ್ರಹ ಕಾರ್ಯದಲ್ಲಿ ಸೇವೆ ಸಲ್ಲಿಸಿದ್ದಾರೆ. ೧೯೮೪ರಲ್ಲಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಏರ್ಪಡಿಸಿದ್ದ ಜಾನಪದ ಕ್ಷೇತ್ರಕಾರ್ಯಕರ್ತರ ಶಿಬಿರದಲ್ಲಿ ಮಂಡ್ಯ ಜಿಲ್ಲೆಯ ಪ್ರತಿನಿಧಿಯಾಗಿ ಪಾಲ್ಗೊಂಡು ತಮ್ಮದೇ ಆದ ಕಾರ್ಯಗಳನ್ನು ನಿರ್ವಹಿಸಿದ್ದಾರೆ.

೧೯೮೫ರಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಐದನೆಯ ವಾರ್ಷಿಕೋತ್ಸವ ಸಮಾರಂಭವನ್ನು ಮಂಡ್ಯದಲ್ಲಿ ಅದ್ದೂರಿಯಾಗಿ ನಡೆಸಿದರು. ಈ ವೇಳೆಯಲ್ಲಿ ತೈಲೂರರು ಮಂಡ್ಯ ಜಿಲ್ಲಾ ಜಾನಪದ ಪರಿಷತ್ತಿನ ಸಂಸ್ಥಾಪಕ ಕಾರ್ಯದರ್ಶಿಯಾಗಿದ್ದುದು ಹಾಗೂ ಕರ್ನಾಟಕ ಜಾನಪದ ಮೇಳವನ್ನು ಉತ್ತಮವಾಗಿ ಸಂಘಟಿಸಿದುದ್ದು ಅವರ ಸೇವೆಯನ್ನು ಸ್ಮರಿಸುವಂತದ್ದಾಗಿದೆ. ತದನಂತರ ೧೯೮೬ರಲ್ಲಿ ಮೇಲ್ಕಂಡ ಜಿಲ್ಲಾ ಜಾನಪದ

' ಪರಿಷತ್ತಿನ ಅಡಿಯಲ್ಲಿ ಮದ್ದೂರಿನಲ್ಲಿ 'ಅಖಿಲ ಕರ್ನಾಟಕ ಜನಪದ ಕಲಾಮೇಳ'ವನ್ನು ಸಂಘಟಿಸಿದರು. ಮಂಡ್ಯ ಜಿಲ್ಲೆಯ ಜನಪದ ಕಲಾವಿದರುಗಳನ್ನು ಮತ್ತು ಅವರ ಕಲೆಗಳನ್ನು ಪ್ರೋತ್ಸಾಹಿಸಿದರು. ಅವರುಗಳ ಬಗ್ಗೆ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದು ಸರ್ಕಾರದ ಗಮನ ಸೆಳೆದರು. ಈ ಲೇಖನಗಳು ನಾಡಿನ ಹೆಸರಾಂತ ದೈನಿಕ ಪತ್ರಿಕೆ ಪ್ರಜಾವಾಣಿಯ 'ಕರ್ನಾಟಕ ದರ್ಶನ' ಹಾಗೂ ಸಾಪ್ತಾಹಿಕ ಪುರವಾಣಿಗಳಲ್ಲಿ ಜನಪದ ಕಲಾವಿದರ ಮತ್ತು ಕಲೆಗಳ ಬಗ್ಗೆ ಚಿತ್ರಲೇಖನಗಳು ೧೯೮೯ರಲ್ಲಿ ಪ್ರಕಟವಾದವು. ಈ ಎಲ್ಲಾ ಕೀರ್ತಿಯೂ ತೈಲೂರರಿಗೆ ಸಲ್ಲಬೇಕಾಗಿದೆ.

'ಬದುಕು' ತೈಲೂರರ ಜಾನಪದ ಸಂಪಾದಿತ ಗ್ರಂಥವಾಗಿದೆ. ಈ ಸಂಪಾದಿತ ಗ್ರಂಥದಲ್ಲಿ ಜನಪದ ಹಾಡು, ಕುಣಿತ, ಮೆರೆತ, ಜಾತ್ರೆ, ಹಬ್ಬ, ಹರಿದಿನ, ಕಾವ್ಯ, ಕಥೆ, ಗಾದೆ, ಒಗಟು, ಒಡಪು, ನಂಬಿಕೆ, ಪುರಾಣ, ವೈದ್ಯ, ಮಂತ್ರವಿದ್ಯೆ, ಕುಶಲಕೈಗಾರಿಕೆ ಇತ್ಯಾದಿ ಪ್ರಕಾರಗಳನ್ನು ಪ್ರಸ್ತುತ ಮಂಡ್ಯ ಜಿಲ್ಲೆಯ ಜನಪದ ಕಲಾವಿದರ ಮತ್ತು ಕಲೆಗಳ ಚಟುವಟಿಕೆಗಳನ್ನು ತಮ್ಮ ಗ್ರಂಥದಲ್ಲಿ ಧಾರೆ ಎರೆದಿದ್ದಾರೆ. ಪ್ರಸ್ತುತ ಸಂದರ್ಭದ ಜಾಗತೀಕರಣ, ಆಧುನೀಕರಣ, ಉನ್ನತೀಕರಣದ ನಾಗಾಲೋಟದಲ್ಲಿ ನಶಿಸಿಹೋಗಿದ್ದ ಜಾನಪದ ರಂಗಭೂಮಿಯು ಮೆಲ್ಲಮೆಲ್ಲನೆ ಪುನಃ ಗರಿಗೆದರಿಕೊಳ್ಳುವ ಪರಿಸ್ಥಿತಿಯನ್ನು ತಮ್ಮ ಕೃತಿಯಲ್ಲಿ ಮೂಡಿಸಿರುವುದನ್ನು ಕಾಣಬಹುದಾಗಿದೆ.

ಇವುಗಳ ಜೊತೆಗೆ ತೈಲೂರರು ಸಣ್ಣಕತೆಗಳನ್ನು ೧೯೭೩ರಲ್ಲಿ ಬರೆಯಲು ಪ್ರಾರಂಭಿಸಿದರು. ಮೊದಮೊದಲು ಸಣ್ಣಕತೆಗಳು ದೈನಿಕ ಪತ್ರಿಕೆಗಳಲ್ಲಿ, ವಾರ ಪತ್ರಿಕೆಗಳಲ್ಲಿ ಮತ್ತು ಪಾಕ್ಷಿಕ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ೧೯೭೫-೮೫ರ ವೇಳೆಯಲ್ಲಿ ಈ ಸಣ್ಣಕತೆಗಳು 'ಬಾನುಲಿ' ಕಾರ್ಯಕ್ರಮಗಳಲ್ಲಿ ಪ್ರಸಾರವಾದವು. ಅವುಗಳಲ್ಲಿ ಮುಖ್ಯವಾಗಿ 'ಉಂಡುಹೋದರು-ಕೊಂಡುಹೋದರು,' ಚಂದ್ರಿ, ಚಲುವ ಎಂಬುವು ಮುಖ್ಯವಾಗಿವೆ. ಇದೊಂದು ಹಾಸ್ಯಪ್ರಧಾನವಾದ, ಹಳ್ಳಿಯಲ್ಲಿಯೇ ನಡೆಯುವ ಕಥಾವಸ್ತುವನ್ನು ಒಳಗೊಂಡಿದೆ. ಇದಕ್ಕೂ ಮುನ್ನ ೧೯೭೪ರಲ್ಲಿ ಸ್ವತಃ ಸ್ವಗ್ರಾಮದಲ್ಲಿ 'ಕನ್ನಡ ಯುವಕ ಸಂಘ'ವನ್ನು ಸ್ಥಾಪನೆ ಮಾಡಿ ಜನಪದ ಕಲೆಗಳನ್ನು ಮುಂದುವರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು ಮತ್ತು ಊರಿನಲ್ಲಿ ಗ್ರಂಥಾಲಯವನ್ನು ತೆರೆದು ಓದುಗರನ್ನು ಪ್ರೇರೇಪಿಸಿದರು.

ಚಿಕ್ಕಂದಿನಲ್ಲಿಯೇ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ಹಳ್ಳಿಯ ಜನಜೀವನವನ್ನು ಹತ್ತಿರದಲ್ಲಿಯೇ ಕಂಡಿದ್ದ ತೈಲೂರರಿಗೆ ಗ್ರಾಮಾಂತರ ಜನರ ಜೀವನದ ಬದುಕು ಹಸನಾಗಬೇಕು ಎಂಬ ಹಂಬಲವಿತ್ತು. ಕೃಷಿ ಸಾಹಿತ್ಯದ ಜೊತೆಗೆಸಾಹಿತ್ಯಕೃಷಿಯನ್ನು ಆರಂಭಿಸಿದರು. ೧೯೬೪-೬೫ರಲ್ಲಿ ಸ್ವತಃ ಬರಗಾಲದ ಅವಸ್ಥೆಯನ್ನು ಹಳ್ಳಿಯ ಜನರ

ಅನುಭವಿಸಿದ್ದನ್ನು ಕಣ್ಣಾರೆ ಕಂಡು, ಉತ್ತರ ಕರ್ನಾಟಕದಲ್ಲಿನ ಬರಗಾಲದ ಚಿತ್ರಣವನ್ನು ಪತ್ರಿಕೆಗಳಲ್ಲಿ ಸಂಗ್ರಹಿಸಿ, ಬರಗಾಲದಲ್ಲಿ ನೀಡುವ ಪರಿಹಾರದ ಶೋಷಣೆಯನ್ನು ಚಿತ್ರಣ ಮಾಡುವ ದೃಷ್ಟಿಯಿಂದ ಕಾದಂಬರಿ ಸಾಹಿತ್ಯ ಪ್ರಕಾರದಲ್ಲಿ ರಚನೆ ಮಾಡಿದರು. ಈ ಪ್ರಯತ್ನದ ಫಲವೇ 'ಅಗ್ನಿಕುಂಡ' ಎನ್ನುವ ಕಾದಂಬರಿ. ಈ ಕಾದಂಬರಿಯು ೧೯೭೪ರಲ್ಲಿ ಪ್ರಕಟವಾಯಿತು. ಪ್ರಸ್ತುತ ಕಾದಂಬರಿಯು ಬರಗಾಲದ ಭೀಕರತೆಯಲ್ಲಿ ಬೆಂದು ಬಸವಳಿದ ಹಳ್ಳಿಯ ದಾರುಣ ಚಿತ್ರಣ ಎದೆಯಾಳವನ್ನು ಸೀಳಿದ ಅನುಭವ ನೀಡುತ್ತದೆ. ನಿಜಕ್ಕೂ ಹಳ್ಳಿಜನ ಅಗ್ನಿಕುಂಡದಲ್ಲಿ ಬಿದ್ದು ಬೆಂದ ಕಥೆ ಇದು. ಗ್ರಾಮೀಣ ಬದುಕಿನ ನೈಜ ಚಿತ್ರಣದೊಡನೆ, ಜಾಗತೀಕರಣದ ಪ್ರಭಾವ ಮುದ್ರೆಯನ್ನು ಹಳ್ಳಿಗಳು ಮೈಗೂಡಿಸಿಕೊಂಡಿರುವ ಅತಂತ್ರ ಸ್ಥಿತಿ ತಲುಪಿರುವ ಕಠೋರ ಸತ್ಯವನ್ನು ಕಂಡರಿಸಿರುವ ಲೇಖಕರ ವೈಜ್ಞಾನಿಕ ಮತ್ತು ದಾರ್ಶನಿಕ ಚಿಂತನೆ ಹಾಗೂ ಅನುಭವ ಈ ಕೃತಿಯಲ್ಲಿ ಮಡುಗಟ್ಟಿ ನಿಂತಿರುವುದನ್ನು ಕಾಣಬಹುದು.

ಇದಲ್ಲದೆ 'ಸಮ್ಮಿಳನ' ಎನ್ನುವ ಸಾಮಾಜಿಕ ಕಾದಂಬರಿ ೧೯೭೫ರಲ್ಲಿ ಪ್ರಕಟವಾಯಿತು. ಈ ಕಾದಂಬರಿಯು ಸಾಮಾಜಿಕ ಪರಿಸ್ಥಿತಿಯ ಚಿತ್ರಣವೊಂದನ್ನು ಓದುಗರ ಕಣ್ಣ ಮುಂದೆ ತರುವಂತದ್ದಾಗಿದೆ. ಇಲ್ಲಿ ಲೇಖಕರು ಬಡವರ ಬವಣೆ, ಜೀವನದ ನಿರ್ಭರತೆ ಮತ್ತು ಕಷ್ಟಕಾರ್ಪಣ್ಯಗಳನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಅದರ ಜೊತೆಗೆ ಔದಾರ್ಯ ಮನೋಧರ್ಮವನ್ನುಳ್ಳ ಶ್ರೀಮಂತ ಮನೆತನದ ಚಿತ್ರಣವೊಂದನ್ನು ನಿರ್ಮಿಸಿ, ಅದಕ್ಕೂ ಕೊಳಚೆ ಪ್ರದೇಶದಲ್ಲಿ ಬೆಳೆದ ನಿರ್ಗತಿಕ ಮಕ್ಕಳಿಬ್ಬರನ್ನು ನಂಟುಹಾಕಿ ಆದರ್ಶ ಸಂಬಂಧವೊಂದನ್ನು ಬೆಳೆಸಿದ್ದಾರೆ. ಇಲ್ಲಿಯೂ ಲೇಖಕರು ಮಕ್ಕಳನ್ನು ಆದರ್ಶ ಕಲ್ಪನೆಯ ಬೆಳವಣಿಗೆಯಲ್ಲಿ ಚಿತ್ರಿಸಿದ್ದಾರೆ. ಈ ಕಾದಂಬರಿಯು ವಾಸ್ತವ ಸಮಾಜದ ಚಿತ್ರಣವನ್ನು ನಿರ್ಮಿಸಿಕೊಡುವುದರ ಜೊತೆಗೆ ಆದರ್ಶವನ್ನು ವ್ಯಕ್ತಪಡಿಸುವ ಅಂಶಗಳಿಂದ ಕೂಡಿರುತ್ತದೆ. ಕಾದಂಬರಿಯಲ್ಲಿ ಅಸಹಜತೆ ತೋರಿಬಂದರೂ ಸಹ ಕಲ್ಪನಾ ಸಾಮರ್ಥ್ಯವನ್ನು ತೋರಿಸಿಕೊಟ್ಟಿದ್ದಾರೆ. ತರುಣ ಬರಹಗಾರರಲ್ಲಿ ಇರಬಹುದಾದ ಹಲವು ಕೊರತೆಗಳನ್ನು ನಿವಾರಿಸಿಕೊಳ್ಳುವ ಸಾಮರ್ಥ್ಯವನ್ನು ವೆಂಕಟಕೃಷ್ಣರವರು ಹೊಂದಿದ್ದಾರೆ. ಪ್ರಸ್ತುತ ಕಾದಂಬರಿಯು ೨೦೦೬ರಲ್ಲಿ ಪರಿಷ್ಕರಣೆಯಾಗಿದೆ.

'ರಕ್ತಾಭಿಷೇಕ' ಎಂಬುದು ತೈಲೂರುರವರಿಂದ ರಚಿತವಾದ ಮತ್ತೊಂದು ಕಾದಂಬರಿ. ಈ ಕಾದಂಬರಿಯು ೧೯೭೮ರಲ್ಲಿ ಪ್ರಕಟವಾಯಿತು. ಈ ಕಾದಂಬರಿಯನ್ನು ೨೦೦೯ರಲ್ಲಿ ಪರಿಷ್ಕರಿಸಿ 'ರಕ್ತಾಭಿಷೇಕ' ಎಂಬುದರ ಬದಲಾಗಿ 'ಪಾರ್ವತಿ' ಎಂಬ ಶೀರ್ಷಿಕೆಯನ್ನು ನೀಡಲಾಗಿದೆ.

ಶ್ರೀ ತೈಲೂರುರವರು ತಮ್ಮ ಹರೆಯದ ವಯಸ್ಸಿನಲ್ಲಿ ಈ ಕಾದಂಬರಿಯನ್ನು ಬರೆದಿದ್ದರು. ಬಾಲ್ಯದಲ್ಲಿ ಮಾನಸಿಕವಾಗಿ ಪೆಟ್ಟು ಬಿದ್ದರೆ ಮುಂದೆ ಯಾವ ಪರಿಣಾಮ ಎದುರಿಸಬೇಕಾಗುತ್ತದೆ ಎಂಬುದಕ್ಕೆ ಈ ಕಾದಂಬರಿಯಲ್ಲಿ ಬರುವ 'ಪಾರ್ವತಿ'ಯೇ ಸಾಕ್ಷಿಯಾಗಿದ್ದಾಳೆ. ಮನಸ್ಸಿನ ಮಾರ್ಪಾಡಿಗೆ ಅನೇಕ ಘಟನೆಗಳು ಒದಗಿ ಬಂದರೂ, ಹಿತೈಷಿಗಳು ಅಂತಃಕರುಣಿಗಳು ಆ ವ್ಯಕ್ತಿಯ ಬಾಳ ಬೆಳಕಿನೆಡೆಗೆ ಪ್ರಯತ್ನಿಸುತ್ತವೆ. ಮಾನಸಿಕ ಪೆಟ್ಟಿನಿಂದ ಬಳಲಿದ ಒಂದು ಹೆಣ್ಣಿನ ಜೀವನಚಿತ್ರಣವನ್ನು ಕಲಾತ್ಮಕವಾಗಿ ಲೇಖಕರು ಚಿತ್ರಿಸಿದ್ದಾರೆ. 'ಪಾರ್ವತಿ'ಯ ಬಾಳಿನ ಕಥೆಯನ್ನು ಕೇಂದ್ರವಾಗಿಟ್ಟುಕೊಂಡು ಕಾದಂಬರಿಕಾರರು ಗ್ರಾಮ ಜೀವನದ ನಂಬಿಕೆಗಳನ್ನು, ನಡವಳಿಕೆಗಳನ್ನು, ವ್ಯಕ್ತಿ ಸ್ವಭಾವಗಳನ್ನೂ, ಸಮಾಜದ ಮೂಢ ಸಂಪ್ರದಾಯಗಳನ್ನೂ ಚಿತ್ರಿಸುತ್ತಾ ಕಥಾನಾಯಕಿಯ ಮನೋವಿಶ್ಲೇಷಣೆಯನ್ನು ವೈಜ್ಞಾನಿಕವಾಗಿ ವಿವರಿಸಲು ಪ್ರಯತ್ನ ಮಾಡಿದ್ದಾರೆ.

ತೈಲೂರರು ೧೯೮೫ರಲ್ಲಿ ಮಂಡ್ಯ ಜಿಲ್ಲಾ ಜಾನಪದ ಪರಿಷತ್ತಿನ ಸಂಸ್ಥಾಪಕ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ೧೯೮೬ರಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತಿನ ಮಂಡ್ಯ ಜಿಲ್ಲಾ ಪ್ರತಿನಿಧಿಯಾಗಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. ೧೯೯೨ರಲ್ಲಿ 'ಮಂಡ್ಯ ಜಿಲ್ಲಾ ಸಾಂಸ್ಕೃತಿಕ ಪರಂಪರೆ' ಎಂಬ ಸಂಶೋಧನಾ ಗ್ರಂಥವನ್ನು ಪ್ರಕಟಿಸಿದರು. ಮಂಡ್ಯ ಜಿಲ್ಲೆಯು ಸಂಸ್ಕೃತಿಯ ಕ್ಷೇತ್ರದಲ್ಲಿ ಸಾಧಿಸಿರುವುದನ್ನು ಸಂಕ್ಷಿಪ್ತವಾಗಿ, ಆದರೆ ಅಧಿಕೃತವಾಗಿ ಇಲ್ಲಿ ನಿರೂಪಿಸಲಾಗಿದೆ.

'ಸಂಸ್ಕೃತಿ' ಎಂಬ ಪದವನ್ನು ಅದರ ಮಾನವ ಶಾಸ್ತ್ರದ ಪಾರಿಭಾಷೆಯ ಅರ್ಥದಲ್ಲಿ ಗ್ರಹಿಸಿರುವ ಶ್ರೀಯುತರು ಮಂಡ್ಯ ಜಿಲ್ಲೆಯ ಶಾಸನಗಳ, ದೇವಾಲಯಗಳ, ಐತಿಹ್ಯಗಳ, ಜನಪದ ಕಲೆಗಳ, ಸಾಹಿತ್ಯ, ಧರ್ಮ, ಚಿತ್ರಕಲೆಗಳ ಬಹು ಸುಂದರವಾದ ಪಕ್ಷಿನೋಟವನ್ನು ಈ ಗ್ರಂಥದಲ್ಲಿ ಕೊಟ್ಟಿದ್ದಾರೆ. ಇಲ್ಲಿ ಎಲ್ಲಾ ಶಾಸನಗಳನ್ನು ಬಹು ಎಚ್ಚರಿಕೆಯಿಂದ ಗಮನಿಸಿರುವುದಲ್ಲದೆ, ಕರ್ನಾಟಕದ ವಾಸ್ತು ಪರಂಪರೆಯ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ದೇವಾಲಯಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಮಂಡ್ಯದ ಉದ್ದಗಲಕ್ಕೂ ಒಡಾಡಿ ಜಿಲ್ಲೆಯಲ್ಲಿ ಪ್ರಚಲಿತವಾಗಿರುವ ಬಗೆಬಗೆಯ ಐತಿಹ್ಯಗಳನ್ನು ಸಂಗ್ರಹಿಸಿಕೊಟ್ಟು ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಈ ಗ್ರಂಥವು ಮುಖ್ಯವಾಗಿ ಮಾಹಿತಿ ಕೃತಿಯಾದರೂ ಶಾಸನ, ದೇವಾಲಯ, ಧರ್ಮ, ಸಾಹಿತ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಮಾಹಿತಿಯು ಮುಖ್ಯವಾಗಿ ಬೇರೆ ಬೇರೆ ಆಮೂಲಗಳಿಂದ ಸಂಗ್ರಹಿಸಿದ್ದರೂ, ಐತಿಹ್ಯಗಳ ಸಂಗ್ರಹವು ಬಹುಶಃ ತೈಲೂರರ ಸ್ವಂತಿಕೆಯ ಕೆಲಸವಾಗಿ ನಿಲ್ಲುತ್ತದೆ. ಜಾನಪದ ಕಲೆಗಳ ಭಾಗವೂ ಬಹುಶಃ ಎಷ್ಟು ಹೊಸಮಾಹಿತಿಯನ್ನು ಹೊಂದಿದೆ.

[illegible]

ಶ್ರೀ ತೈಲೂರುರವರು ೧೯೯೨ರಿಂದ ೧೯೯೪ರವರೆಗೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಆಯೋಜಿಸಿಕೊಂಡ 'ಕರ್ನಾಟಕ ಗ್ರಾಮ ಕಲೆಗಳು ಮತ್ತು ಗ್ರಾಮ ದೇವತೆಗಳ ಮಾಹಿತಿ ಸಂಗ್ರಹ ಕಾರ್ಯ'ದಲ್ಲಿ ಮಂಡ್ಯ ಜಿಲ್ಲಾ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸಿದ್ದಾರೆ.

೧೯೯೫ ರಿಂದ ೧೯೯೮ರವರೆಗೆ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ೧೯೯೭ರಲ್ಲಿ ಮಂಡ್ಯ ಜಿಲ್ಲಾ ಜನಪದ ಕಲಾಮೇಳ ವನ್ನು ತಮ್ಮ ಅಧ್ಯಕ್ಷ ಪದವಿಯಲ್ಲಿ ಏರ್ಪಡಿಸಿದ್ದರು. ೧೯೯೮ರಲ್ಲಿ ಮಂಡ್ಯ ಜಿಲ್ಲೆಯಾದ್ಯಂತ 'ಸ್ಮಾರಕ ಉಳಿಸಿ; ಸಂಸ್ಕೃತಿ ಬೆಳೆಸಿ' ಕಾರ್ಯ ಯೋಜನೆಯನ್ನು ಹಮ್ಮಿಕೊಂಡು ನಿರಂತರವಾಗಿ ಶ್ರಮಿಸಿ, ಇದೇ ವೇಳೆಯಲ್ಲಿ ಮಂಡ್ಯ ಜಿಲ್ಲಾ ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಒಕ್ಕೂಟದ ಅಧ್ಯಕ್ಷರಾದರು.

೧೯೯೯ ರಿಂದ ೨೦೦೩ರವರೆಗೆ ಮಂಡ್ಯ ಜಿಲ್ಲಾ ಗೆಝೆಟಿಯರ್ ಸಲಹಾ ಮಂಡಳಿಯ ಸದಸ್ಯರಾಗಿ, ಮಂಡ್ಯ ಜಿಲ್ಲೆಯ ಪ್ರಾಕೃತಿಕ ಸಂಪತ್ತು, ಕೃಷಿ, ನೀರಾವರಿ ಬೆಳವಣಿಗೆ, ಕೈಗಾರಿಕಾ ಪ್ರಗತಿ ಬ್ಯಾಂಕಿಂಗ್ ವ್ಯವಸ್ಥೆ, ವಾಣಿಜ್ಯ ಮತ್ತು ಸಹಕಾರ ಸಂಘಟನೆ, ಸಾರಿಗೆ ಸಂಪರ್ಕ ಮಾಧ್ಯಮ, ನ್ಯಾಯಾಂಗ, ಶೈಕ್ಷಣಿಕ ಮುನ್ನಡೆ, ಸಾಮಾಜಿಕ-ಧಾರ್ಮಿಕ ಸ್ವರೂಪ, ಸಾಮಾಜಿಕ ಸೇವಾ ಸೌಲಭ್ಯ, ಕ್ರೀಡೆ, ಕಲೆ, ಸಾಹಿತ್ಯ, ಸಂಸ್ಕೃತಿ, ಸಾಂಸ್ಕೃತಿಕ ಇತಿಹಾಸದ ಜೊತೆಗೆ ಚಾರಿತ್ರಿಕ ಮಹತ್ವದ ಪ್ರವಾಸಿ ತಾಣಗಳು ಮುಂತಾದ ಅಸಂಖ್ಯಾತ ವಸ್ತು ವಿಷಯಗಳ ಬಗ್ಗೆ ಅಮೂಲಾಗ್ರವಾದ ಮಾಹಿತಿಯನ್ನು ಸಹ ಇತರ ಸದಸ್ಯರ ಜೊತೆಗೂಡಿ ಒದಗಿಸಿದ್ದಾರೆ.

ತೈಲೂರರು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರೂ ಸಂಶೋಧನಾ ಗ್ರಂಥಗಳ ಬಗ್ಗೆ ಹೆಚ್ಚು ಒಲವು ತೋರಿದ್ದಾರೆ. ೨೦೦೪ರಲ್ಲಿ 'ಮಂಡ್ಯ ಜಿಲ್ಲೆಯ ಸ್ಥಳ ನಾಮಗಳ ಅವಲೋಕನ' ಎಂಬ ಸಂಶೋಧನಾ ಗ್ರಂಥವನ್ನು ರಚಿಸಿದ್ದಾರೆ. ಈ ಗ್ರಂಥವು ಕನ್ನಡ ಸಾರಸ್ವತ ಲೋಕಕ್ಕೆ ಅವರು ನೀಡಿದ ಅಪೂರ್ವ ಕೃತಿಯೆನ್ನಬಹುದು.

'ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ' ಎಂಬ ಸಂಶೋಧನಾ ಗ್ರಂಥದಲ್ಲಿ ತೈಲೂರರು ಅಪಾರವಾದ ಶ್ರದ್ಧೆ ವಹಿಸಿದ್ದಾರೆ. ಈ ಕೃತಿ ಸಹಾ ಮಹಾಸಾಗರದಲ್ಲಿ ಒಂದು ಹನಿಯಿದ್ದಂತೆ, ಬರಿದಾಗದ ಅಮೃತ ಸುಧೆ ಇದ್ದಂತೆ. 'ಐತಿಹಾಸಿಕ ದಾಖಲೆಗಳು ಮೌನವಹಿಸಿದಾಗ ಸ್ಥಳನಾಮಗಳು ಮಾತನಾಡುತ್ತವೆ' ಎಂಬ ಪ್ರಸಿದ್ಧೋಕ್ತಿಯಂತೆ ಕಾಲಗರ್ಭದಲ್ಲಿ ಅಡಗಿಹೋದ ಎಷ್ಟೋ ಅಪೂರ್ವ ಸಂಗತಿಗಳನ್ನು ಸ್ಥಳನಾಮಗಳು ಉಳಿಸಿಕೊಂಡಿರುತ್ತವೆ. ಈ ನಿಟ್ಟಿನಲ್ಲಿ ಈ ಗ್ರಂಥದ ಪ್ರಕಟಣೆಗೆ ತೈಲೂರರು ತಮ್ಮ ಜಿಲ್ಲೆಯ ಊರುಗಳ ಹೆಸರುಗಳನ್ನು ತೆಗೆದುಕೊಂಡು ಒಂದೊಂದಾಗಿ ಅವುಗಳ ಹಿನ್ನೆಲೆ, ನಿಷ್ಪತ್ತಿ, ಅವು ಧ್ವನಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಬಿಡಿಸಿ ಉತ್ತಮವಾಗಿ ನಿರೂಪಿಸಿದ್ದಾರೆ.

ತೈಲೂರರು ಮಂಡ್ಯ ಜಿಲ್ಲೆಯಾದ್ಯಂತ 'ಸ್ಮಾರಕ ಉಳಿಸಿ ; ಸಂಸ್ಕೃತಿ ಬೆಳೆಸಿ' ಕಾರ್ಯಯೋಜನೆಯನ್ನು ಹಮ್ಮಿಕೊಂಡು ನಿರಂತರವಾಗಿ ಶ್ರಮಿಸಿದರು. ಶ್ರೀರಂಗಪಟ್ಟಣದಲ್ಲಿನ 'ವಸ್ತು ಸಂಗ್ರಹಾಲಯ' ಸ್ಥಾಪನೆಗೆ ಕಾರಣಕರ್ತರಾದರು. ೨೦೦೨ರಲ್ಲಿ ಮಂಡ್ಯ ಜಿಲ್ಲಾ ಸಾಕ್ಷರಜ್ಯೋತಿ ಸಲಹಾ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ

ಇದಲ್ಲದೆ ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಅಳಿಲು ಸೇವೆಯನ್ನು ಸಲ್ಲಿಸಿದ್ದಾರೆ. ೧೯೮೫ ರಿಂದ ೧೯೯೫ರವರೆಗೆ ಮಂಡ್ಯದ ಕಾವೇರಿ ಬಾಲಿಕಾ ಪ್ರೌಢಶಾಲೆಯ ಕಾರ್ಯದರ್ಶಿಯಾಗಿ, ಸ್ವತಃ ಸ್ವಗ್ರಾಮದಲ್ಲಿ ಬಿಡುವಿನ ವೇಳೆಯಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

೧೯೯೬ ರಿಂದ ೨೦೦೩ರವರೆಗೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (ಡಿ.ಪಿ.ಇ.ಪಿ.)ಯಡಿಯಲ್ಲಿ ಸದಸ್ಯರಾಗಿ ೨೦೦೩ರಿಂದ ಎಸ್.ಎಸ್.ಎ.(ಸರ್ವ ಶಿಕ್ಷಣ ಅಭಿಯಾನ) ಯೋಜನೆಯಡಿಯಲ್ಲಿ ಮಂಡ್ಯ ಜಿಲ್ಲೆಯ ಸಮಿತಿಯ ಸದಸ್ಯರಾಗಿ, ೨೦೦೫ ರಿಂದ ೨೦೦೮ರವರೆಗೆ ರಾಷ್ಟ್ರೀಯ ಹಸ್ತಪ್ರತಿ ಅಭಿಯಾನ (ಕೇಂದ್ರ ಸರ್ಕಾರ) ಯೋಜನೆಯಲ್ಲಿ (ಕೈಬರಹದ ದಾಖಲೆಗಳು, ಅವುಗಳು ಸುಮಾರು ೭೫ ವರ್ಷಗಳಿಂದ ತಾಳೆಗರಿ ಕಾಗದದ ಮೇಲೆ ಬರೆದಿರುವಂತಹವು, ನಮ್ಮ ದೇಶದ ಕಲೆ, ಸಾಹಿತ್ಯ, ವಿಜ್ಞಾನ, ತತ್ವ, ಐತಿಹಾಸಿಕ ಮಹತ್ವವನ್ನೊಳಗೊಂಡಂತಹವು) ಮಂಡ್ಯ ಜಿಲ್ಲಾ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಇದಲ್ಲದೆ ೨೦೦೬ರಿಂದ ೨೦೦೮ರವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ(ಕರ್ನಾಟಕ ಸರ್ಕಾರ) ಕರ್ತವ್ಯ ಸಲ್ಲಿಸಿದ್ದಾರೆ. ೨೦೦೬ರಿಂದ ಮಂಡ್ಯ ನಗರ ಕೇಂದ್ರ ಗ್ರಂಥಾಲಯದ ಪ್ರಾಧಿಕಾರ ಸದಸ್ಯರಾಗಿ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡು ಬರುತ್ತಿದ್ದಾರೆ.

ಪ್ರಸಕ್ತ ೨೦೧೦ನೇ ವರ್ಷದ ಈ ತಿಂಗಳ ಅಂತ್ಯದಲ್ಲಿ ಇವರ ಮತ್ತೊಂದು ಸಂಶೋಧನಾ ಗ್ರಂಥ. 'ಮಂಡ್ಯ ಜಿಲ್ಲೆಯ ದೇವಾಲಯಗಳು' ಒಂದು ಸಮೀಕ್ಷೆ ಎಂಬ ಗ್ರಂಥವು ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಇವರ ವತಿಯಿಂದ ಪ್ರಕಟಣೆಗೊಳ್ಳಲಿದೆ. ಪ್ರಸ್ತುತ ಸಂಶೋಧನಾ ಗ್ರಂಥದಲ್ಲಿ ದೇವಾಲಯಗಳ ಸಮೀಕ್ಷೆ ಎನ್ನುವ ವಿಷಯಕ್ಕೆ ಸಂಬಂದಿಸಿದಂತೆ ಹಲವು ಮಾಹಿತಿಗಳನ್ನು ಸ್ವತಃ ಖುದ್ದಾಗಿ ಭೇಟಿಕೊಟ್ಟ ಸಂಗ್ರಹಕಾರ್ಯದ ಬಗ್ಗೆ ತಿಳಿಸಿದ್ದಾರೆ.

ದೇವಾಲಯುಗಳು' ಎಂದರೆ ಯಾವುದೋ ಒಂದು ದೃಷ್ಟಿಯಿಂದ ನೋಡುವಂತಹದ್ದಲ್ಲ. ಆಯಾ ಕಾಲದಲ್ಲಿನ ಆಯಾ ಪ್ರದೇಶದ ಸಂಸ್ಕೃತಿ, ಧರ್ಮ, ನಾಗರೀಕತೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆ, ಸಂಗೀತ, ನೃತ್ಯ ಈ ಎಲ್ಲಾ ದೃಷ್ಟಿಯಿಂದ ನೋಡಬೇಕಾಗಿದೆ ಎಂಬ ದೃಷ್ಟಿಕೋನವನ್ನು ನೀಡಿದ್ದಾರೆ.

[illegible]

೨೦೧೦ರ ವರ್ಷದ ಆಗಸ್ಟ್ ತಿಂಗಳ ಅಂತ್ಯದಲ್ಲಿ ಅವರ ಮತ್ತೊಂದು ಕಾದಂಬರಿ 'ಹದ್ದು ಬಿದ್ದ ಹಳ್ಳಿ' ಎಂಬುದು ಪ್ರಕಟವಾಗುತ್ತಿದೆ. ಪ್ರಸ್ತುತ ಕಾದಂಬರಿಯು ಜಾಗತಿಕ ಇಕ್ಕಟ್ಟಿನಲ್ಲಿ ಹಳ್ಳಿಯ ಚಿತ್ರಣಗಳು, ಅವು ಹೇಗೆ ಸಂಕಷ್ಟಕ್ಕೆ ಸಿಲುಕುತ್ತವೆ ಮತ್ತು ಅವುಗಳಿಗೆ ಪರಿಹಾರ ರೂಪದಲ್ಲಿ ಈ ಕಾದಂಬರಿ ಹೊರಬರುತ್ತಿದೆ.

ಇತಿಹಾಸಕಾರರ ಅಭಿಪ್ರಾಯದಂತೆ "ಒಂದು ದೇಶದ ಹಿರಿಮೆ ಅಲ್ಲಿಯ ಕಲೆ ಮತ್ತು ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ". ಈ ನಿಟ್ಟಿನಲ್ಲಿ ತೈಲೂರರು ಮೊದಮೊದಲು ಶಾಸನಗಳ ಮಾಹಿತಿಯ ಬಗ್ಗೆ ಅಧ್ಯಯನ ಮಾಡಲು ಪ್ರಾರಂಬಿಸಿ ಹಾಳು ಬಿದ್ದ ಸ್ಮಾರಕಗಳ ಬಗ್ಗೆ ಗಮನವಹಿಸಿ ಸಮಾನಾಸಕ್ತರ ಜೊತೆಗೂಡಿ ಪ್ರಾಚೀನ ಸ್ಮಾರಕಗಳ ಒಕ್ಕೂಟವನ್ನು ಸ್ಥಾಪಿಸಿ ಸರ್ಕಾರಕ್ಕೆ ಮತ್ತು ಸ್ಥಳೀಯ ಜನಕ್ಕೆ ಸಂಪರ್ಕಸೇತುವೆಯಾಗಿ ಕಾರ್ಯ ನಿರ್ವಹಿಸಿಕೊಂಡು ಬಂದಿದ್ದಾರೆ. ಈ ನಿಟ್ಟಿನಲ್ಲಿ ೨೦೦೬ರಲ್ಲಿ ಎಫಿಗ್ರಾಫಿಯಾ ಆಫ್ ಕರ್ನಾಟಕ ಇನ್ ಮಂಡ್ಯ ಡಿಸ್ಟ್ರಿಕ್ಟ್ ೨೦೦೬-೨೦೦೭ರಲ್ಲಿ ಇವರ ಸಹಕಾರದೊಂದಿಗೆ ಸೇವೆ ಸಲ್ಲಿಸಿದ್ದಾರೆ.

ಶ್ರೀ ತೈಲೂರರು ಸೃಜನಶೀಲ ಲೇಖಕರು, ಉತ್ಸಾಹೀ ಯುವ ಸಂಘಟನಾಕಾರರು ಆಗಿದ್ದಾರೆ. ಶ್ರೀ ತೈಲೂರರ ಜಾನಪದ ಪ್ರೀತಿ ಮತ್ತು ಸಂಘಟನಾ ಶಕ್ತಿಯನ್ನು ಗೌರವಿಸುವುದರ ಕುರುಹಾಗಿ ಕರ್ನಾಟಕ ಜಾನಪದ ಪರಿಷತ್ತು ೨೦೦೩ರಲ್ಲಿ ಇವರಿಗೆ 'ವಿಶೇಷ ಪುರಸ್ಕಾರ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವುಗಳಲ್ಲದೆ ಜಿಲ್ಲಾ ಮಟ್ಟದ ಪುರಸ್ಕಾರ ಮತ್ತು ತಾಲ್ಲೂಕು ಮಟ್ಟದ ಪುರಸ್ಕಾರಗಳು ಶ್ರೀಯುತರಿಗೆ ಲಭಿಸಿವೆ.

ಅಧ್ಯಾಯ – ೩

ತೈಲೂರು ವೆಂಕಟಕೃಷ್ಣ ಅವರ ಕೃತಿಗಳು

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನೇಕ ಮಹಾನ್ ಕವಿಗಳು ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಪಂಪಪೂರ್ವದಿಂದ ಹಿಡಿದು ಆಧುನಿಕ ಕನ್ನಡ ಸಾಹಿತ್ಯ ಘಟ್ಟದವರೆಗೂ ಅನೇಕ ಕವಿಗಳನ್ನು ನಾವು ಸ್ಮರಿಸಬಹುದಾಗಿದೆ. ಅವರಲ್ಲಿ ಪಂಪ, ರನ್ನ, ಪೊನ್ನ ಕುಮಾರವ್ಯಾಸ, ಕುವೆಂಪು, ಬಿ.ಎಂ.ಶ್ರೀ. ಇತ್ಯಾದಿ ಕವಿಗಳ ಹೆಸರು ಇಂದು ಜನರ ಮನದಾಳದಲ್ಲಿ ಬೇರೂರಿವೆ.

ಅಂತೆಯೇ ನವ್ಯೋತ್ತರ ಕಾಲದಲ್ಲಿ ೨೦ನೇ ಶತಮಾನದ ಉತ್ತರಾರ್ಧ ಭಾಗದಲ್ಲಿ ಅನೇಕ ಕವಿಗಳು ಸಾಹಿತ್ಯ ಪ್ರಕಾರಗಳನ್ನು ರಚಿಸಿದ್ದಾರೆ. ಅವರು ತಮ್ಮ ಕೃತಿಗಳಲ್ಲಿ ದೇಶಾಭಿಮಾನ, ನಾಡು, ನುಡಿ ಸಂಸ್ಕೃತಿ, ಸಾಮಾಜಿಕ ಮೌಲ್ಯಗಳನ್ನು ಸಹಾ ಸಾಹಿತ್ಯ ಕ್ಷೇತ್ರಕ್ಕೆ ತೊಡಗಿರುವುದು ಒಂದು ಗಮನಾರ್ಹವಾದ ಸಂಗತಿ.

ಇಪ್ಪತ್ತೊಂದನೇ ಶತಮಾನದ ಉತ್ತರಾರ್ಧಭಾಗದಲ್ಲಿ ತೈಲೂರು ವೆಂಕಟಕೃಷ್ಣರವರು ಕನ್ನಡ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದು, ಗ್ರಾಮೀಣ ಜನರ ಜೀವನ, ಆರ್ಥಿಕ ಸ್ಥಿತಿಗಳನ್ನು ಚೆನ್ನಾಗಿ ಬಲ್ಲವರು ಚಿಕ್ಕಂದಿನಲ್ಲಿಯೇ ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದವರು, ಓದಿದ್ದು ವಿಜ್ಞಾನ ವಿಭಾಗವಾದರೂ ತೊಡಗಿದ್ದು ಮಾತ್ರ ಕೃಷಿ ಚಟುವಟಿಕೆಯಲ್ಲಿ ಆಕಸ್ಮಿಕವಾಗಿ ಸಾಹಿತ್ಯ ಕೃಷಿ ಪ್ರಾರಂಭಿಸಿದರು. ಆರೋಗ್ಯಪೂರ್ಣ ಚಿಂತನೆಗಳು, ಗಾಂಧಿ ಪ್ರೇರಿತ ತತ್ವಪ್ರತಿಪಾದನೆಗಳು, ಗ್ರಾಮೀಣ ಸೊಗಡಿನ ಚಿತ್ರಣಗಳು ಇವರ ಕೃತಿಯಲ್ಲಿ ಮೂಡಿಬಂದಿವೆ.

ಚಿಕ್ಕಂದಿನಲ್ಲಿಯೇ ಸಾಹಿತ್ಯದ ಬಗ್ಗೆ ಆಸಕ್ತಿಯನ್ನು ಹೊಂದಿದ್ದ ಕುವೆಂಪು, ಶಿವರಾಮಕಾರಂತರ, ರಾವ್ ಬಹದ್ದೂರ್ ಗ್ರಾಮಾಯಣ ಕಾದಂಬರಿಗಳು ಇವರ ಮೇಲೆ ಪ್ರಭಾವ ಬೀರಿದವು. ಹೀಗೆ ಹಳ್ಳಿಯ ಸೊಗಡಿನಲ್ಲಿ ಬೆಳೆದ ತೈಲೂರರು ಸಾಹಿತ್ಯದ ಪ್ರಕಾರಗಳಲ್ಲಿ ಹಳ್ಳಿಯ ವಿಷಯವೇ ಚರ್ಚಿತವಾಗಬೇಕೆಂಬ ನಿಲುವನ್ನು ಹೊಂದಿ ಕಾದಂಬರಿ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು.

ತೈಲೂರರು ರಚಿಸಿದ ಕಾದಂಬರಿಗಳು ಇಂತಿವೆ. ೧) 'ಅಗ್ನಿಕುಂಡ' ೨) ಸಮ್ಮಿಳನ ೩) ರಕ್ತಾಭಿಷೇಕ–ಪಾರ್ವತಿ.

'ಅಗ್ನಿಕುಂಡ' ಕಾದಂಬರಿಯು ೧೯೭೪ರಲ್ಲಿ, 'ಸಮ್ಮಿಳನ' ಕಾದಂಬರಿಯು ೧೯೭೫ರಲ್ಲಿ ಮತ್ತು ಹಿಂದೆ 'ರಕ್ತಾಭೀಷೇಕ' ಶೀರ್ಷಿಕೆಯನ್ನು ಬದಲಾಯಿಸಿ 'ಪಾರ್ವತಿ' ಎಂಬ ಶೀರ್ಷಿಕೆಯನ್ನು ನೀಡಲಾಗಿರುವ ಕಾದಂಬರಿ ೧೯೭೮ರಲ್ಲಿ ಪ್ರಕಟಗೊಂಡು ೨೦೦೯ರಲ್ಲಿ ಪರಿಷ್ಕರಿಸಿ 'ಪಾರ್ವತಿ' ಎಂಬ ಶೀರ್ಷಿಕೆ ನೀಡಲಾಗಿದೆ.

ತೈಲೂರರು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರೂ ಸಂಶೋಧನಾ ವಿಷಯದ ಬಗ್ಗೆ ಹೆಚ್ಚು

ಒಲವನ್ನು ತೋರಿದ್ದಾರೆ. ಈ ನಿಟ್ಟಿನಲ್ಲಿ ಅವರು ಎರಡು ಸಂಶೋಧನಾ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳೆಂದರೆ

೧) ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ – ೧೯೯೨

೨) ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ – ೨೦೦೪

ಇವುಗಳ ಜೊತೆಗೆ ತೈಲೂರರು ಸಾಂಸ್ಕೃತಿಕ ಚಟುವಟಿಕೆಗಳ ಸಂಘಟಕರಾಗಿ ಮತ್ತು ಲೇಖಕರಾಗಿ ಜಿಲ್ಲೆಯ ಜನಪದ ಕಲಾವಿದರ ಮತ್ತು ಕಲೆಗಳ ಬೆಳವಣಿಗೆಯ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ. ಈ ನಿಟ್ಟಿನಲ್ಲಿ 'ಬದುಕು' ಎಂಬ ಜಾನಪದ ಸಂಪಾದಿತ ಎಂಬ ಗ್ರಂಥವನ್ನು ಹೊರ ತಂದಿದ್ದಾರೆ. ಅಧ್ಯಯನದ ದೃಷ್ಟಿಯಿಂದ ಇವರ ಕೃತಿಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಅ) ಕಾದಂಬರಿಗಳು

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಾದಂಬರಿಯು ಅತ್ಯಂತ ಜನಪ್ರಿಯ ಹಾಗೂ ಪ್ರಭಾವಶಾಲಿಯಾದ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಈ ಕನ್ನಡ ಸಾಹಿತ್ಯ ಪ್ರಕಾರವು ಜನಸಾಮಾನ್ಯರ ಆಶೋತ್ತರ, ಅಭಿರುಚಿ, ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಹೊಸಗನ್ನಡದಲ್ಲಿ ಇಂಗ್ಲೀಷ್ ಸಾಹಿತ್ಯ ಪ್ರಭಾವದಿಂದ ಭಾವಗೀತೆ, ಸಣ್ಣಕತೆ, ಜೀವನಚರಿತ್ರೆ, ಆತ್ಮಚರಿತ್ರೆ, ಪ್ರವಾಸ ಸಾಹಿತ್ಯ ಮೊದಲಾದ ಸಾಹಿತ್ಯದ ಹೊಸ ಪ್ರಕಾರಗಳು ಹುಟ್ಟಿದಂತೆ ಇಂಗ್ಲೀಷ್‌ನ 'ನಾವೆಲ್' ಎಂಬ ಪ್ರಕಾರ ಕಾದಂಬರಿ ಎಂಬ ಹೆಸರಿನಿಂದ ಪ್ರಚುರವಾಯಿತು.

ಕಾದಂಬರಿ ರಚನೆ ಸಾಧ್ಯವಾಗುವುದು ಓದುಗರ ವೃತ್ತ ಸಾಕಷ್ಟು ಹಿರಿದಾಗಿದ್ದಾಗ, ಸಾಹಿತ್ಯದಲ್ಲಿ ತಮ್ಮ ಜೀವನವನ್ನು ಕಾಣುವ ಆಸಕ್ತಿ ಇರುವ ವರ್ಗ ಬೆಳೆದಾಗ ಕಾದಂಬರಿ ಬೆಳೆಯಬಲ್ಲದು. ಇಂತಹ ಸ್ಥಿತಿ ರೂಪಿತವಾದಾಗ ಓದುವವರ ಕುತೂಹಲವನ್ನು ತಣಿಸಿದವರು ಮುಖ್ಯವಾಗಿ ಇಬ್ಬರು ಬಿ. ವೆಂಕಟಚಾಯರು ಮತ್ತು ಗಳಗನಾಥರು.

ವೆಂಕಟಚಾರ್ಯರು ದೇವಿ ಚೌಧುರಾಣಿ, ಆನಂದಮಠ, ವಿಷವೃಕ್ಷ, ಬಂಕಿಮ ಚಂದ್ರ ಚರಿತೆ ಮುಂತಾದ ಕಾದಂಬರಿಗಳನ್ನು ಹೊರತಂದರು. ವೆಂಕಟಚಾರ್ಯ, ಗಳಗನಾಥ, ಎಂ.ಎಸ್. ಪುಟ್ಟಣ್ಣ ಇವರಿಂದ ಪ್ರಾರಂಭದಲ್ಲಿಯೇ ಕನ್ನಡ ಕಾದಂಬರಿ ಮನರಂಜನೆಯ ಸಾಧನವಾಗದೆ, ಜೀವನದಲ್ಲಿ ಗಂಭೀರವಾಗಿ ವೀಕ್ಷಿಸುವ ಕ್ರಿಯೆಯಾಯಿತು.

ಇಪ್ಪತ್ತನೆಯ ಶತಮಾನದ ನಾಲ್ಕನೆಯ ದಶಕದಿಂದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಬೆಳೆ ಹುಲುಸಾಯಿತು. ನವೋದಯ ಕಾಲದಲ್ಲಿ ಶಿವರಾಮಕಾರಂತರು, ರಂ.ಶ್ರೀ. ಮುಗಳಿ, ಕುವೆಂಪು ಮೊದಲಾದವರೂ ಪ್ರಗತಿಶೀಲಕಾಲದಲ್ಲಿ ಅ.ನ. ಕೃಷ್ಣರಾಯರು, ಚದುರಂಗ, ಶ್ರೀರಂಗರು, ಮುಂತಾದವರು 'ಕಾದಂಬರಿ' ಪ್ರಕಾರವನ್ನು ರಚಿಸಿದರು.

೧೯೨೦ರಿಂದ ೧೯೪೫ರವರೆಗಿನ ಇಪ್ಪತ್ತೈದು ವರ್ಷಗಳಲ್ಲಿ ಸುಮಾರು ಎಂಭತ್ತು ಕಾದಂಬರಿಗಳು ಪ್ರಕಟವಾದವು.

ಐತಿಹಾಸಿಕ, ಸಾಮಾಜಿಕ ಚಾರಿತ್ರಿಕ, ಮನಶಾಸ್ತ್ರೀಯ ಪೌರಾಣಿಕ ಮುಂತಾದ ಅಂಶಗಳು, ಹಾಸ್ಯ, ವಿಡಂಬನೆ, ಮತ್ತು ಕನ್ನಡ ನಾಡಿನ ಮತ್ತು ಭಾರತದ ಇತಿಹಾಸವನ್ನು ಬಳಸಿಕೊಂಡು ಕಾದಂಬರಿಗಳನ್ನು ರಚಿಸಿರುವುದನ್ನು ಕಾಣಬಹುದು.

ನವೋದಯ ಕಾದಂಬರಿಯ ಸಮಸ್ಯೆಗಳು ಬಹುಮಟ್ಟಿಗೆ ಕೌಟುಂಬಿಕ, ಪ್ರಗತಿಶೀಲ ಕಾದಂಬರಿಗಳು ಸಾಮಾಜಿಕ, ನವ್ಯ ಕಾದಂಬರಿಯ ಸಮಸ್ಯೆಗಳು ವೈಯಕ್ತಿಕವಾದವುಗಳಾಗಿವೆ. ನವ್ಯೇತರ ರಚನೆಗಳು ಸಂಖ್ಯೆಯಲ್ಲಿ ಮಾತ್ರವಲ್ಲದೆ ಗುಣಮಟ್ಟದಲ್ಲಿಯೂ ಓದುಗರಿಗೆ ಸಂತೋಷಕೊಡುವಂತಿವೆ.

ಈ ನಿಟ್ಟಿನಲ್ಲಿ ತೈಲೂರರು 'ಅಗ್ನಿಕುಂಡ' ಎಂಬ ಕಾದಂಬರಿಯಲ್ಲಿ ಬರಗಾಲದ ಭೀಕರತೆಯಲ್ಲಿ ಬೆಂದು ಬಸವಳಿದ ಮಣ್ಣಿನ ಮಕ್ಕಳ ನೈಜ ಚಿತ್ರಣವನ್ನು 'ಸಮ್ಮಿಳನ' ಎಂಬ ಸಾಮಾಜಿಕ ಕಾದಂಬರಿಯನ್ನು 'ಪಾರ್ವತಿ' ಎಂಬ ಮನೋವೈಜ್ಞಾನಿಕ ಕಾದಂಬರಿಯನ್ನು ರಚಿಸಿದ್ದಾರೆ. ಅಧ್ಯಯನದ ಹಿನ್ನಲೆಯಲ್ಲಿ ಈ ಕಾದಂಬರಿಗಳನ್ನು ಮುಂದೆ ವಿಸ್ತೃತವಾಗಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

i) ವಸ್ತು

ತ್ರೈಲೂರು ವೆಂಕಟಕೃಷ್ಣರವರ 'ಅಗ್ನಿಕುಂಡ' ಕಾದಂಬರಿ ಹೆಸರೇ ಸೂಚಿಸುವಂತೆ ಬರಗಾಲದ ಬವಣೆಯನ್ನು ಕುರಿತ ಹೊನ್ನಾಳಿ ಗ್ರಾಮದ ಮಣ್ಣಿನ ಮಕ್ಕಳ ನೈಜ ಚಿತ್ರಣದ ಕಥೆ. ೧೯೭೫ರಲ್ಲಿ ಪ್ರಕಟವಾದ ಈ ಕಾದಂಬರಿ ೧೯೬೪-೬೫ರಲ್ಲಿ ಬರಗಾಲದ ಅವಸ್ಥೆಯನ್ನು ಹಳ್ಳಿಯ ಜನರು ಅನುಭವಿಸಿದ್ದನ್ನು ಮತ್ತು ಉತ್ತರ ಕರ್ನಾಟಕದ ಪ್ರಾಂತ್ಯದಲ್ಲೂ ಉಂಟಾದ ಭೀಕರ ಬರಗಾಲದ ವ್ಯತ್ಯಯವನ್ನು ಚಿತ್ರಿಸುತ್ತದೆ. ಕಾದಂಬರಿಯುದ್ದಕ್ಕೂ ಹೊನ್ನಾಳಿ ಗ್ರಾಮದ ಜನರ ಜೀವನ ಬಳಲಿ ಬೆಂಡಾದಂತೆ ನಮ್ಮ ಕಣ್ಣ ಮುಂದೆ ಹಾದು ಹೋಗುವ ಅನುಭವ ನಮಗಾಗುತ್ತದೆ.

ಹೊನ್ನಾಳಿ ಗ್ರಾಮದ ಸ್ಥಿತಿಗತಿ, ಅಲ್ಲಿನ ಮನುಷ್ಯ ಸಂಬಂಧದ ಸ್ಥಾಪನೆ, ಮನುಷ್ಯ ಸಂಬಂಧದ ಅವನತಿ, ಸಾವು-ಬದುಕಿನ ಹೋರಾಟಗಳೇ ಇವರ ಕಾದಂಬರಿಯ ಜೀವವಾಗಿ ಮಿಡಿಯುತ್ತವೆ. ಮಲೆನಾಡಿನ ಕಣಿವೆಗಳ ನಡುವಿನಲ್ಲಿರುವ ಹೊನ್ನಾಳಿ ಗ್ರಾಮ, ಗೋವಿನಹಳ್ಳಿಯ ಗ್ರಾಮಗಳು ಪ್ರಾದೇಶಿಕ ಸತ್ಯವಷ್ಟೇ ಆಗಿರದೇ ಕಾದಂಬರಿಯಲ್ಲಿನ ಅನೇಕ ಘಟನೆಗಳಿಗೆ, ಸನ್ನಿವೇಶಗಳಿಗೆ ಹಾಗೂ ವ್ಯಕ್ತಿಗಳಿಗೆ ಕೇಂದ್ರಬಿಂದುವಾಗಿದ್ದು ಕಾದಂಬರಿಯು ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ.

ಶಾಂತಿ, ಸಂತೃಪ್ತಿ, ಸಮೃದ್ಧಿ, ಶ್ರದ್ಧೆ, ನೆಮ್ಮದಿಯ ಬೀಡಾಗಿ ಬಾಳಬೇಕಾಗಿದ್ದ ಗ್ರಾಮಗಳು ಇದಕ್ಕೆ ತದ್ವಿರುದ್ದವಾಗಿ ಸ್ವಾರ್ಥಕ್ಕೆ ವ್ಯಕ್ತಿಗಳ ಶೋಷಣೆಯಿಂದ ಮತ್ತು ಪ್ರಾಕೃತಿಕ ವಿಕೋಪಗಳಿಂದ ಅಲ್ಲಿನ ಬದುಕು ಹೇಗೆ ಕುಸಿಯುತ್ತದೆ ಎಂಬುದನ್ನು ಕಾದಂಬರಿ ಸಮರ್ಥವಾಗಿ ಚಿತ್ರಿಸುತ್ತದೆ. ಜೊತೆಗೆ ಹೊನ್ನಾಳಿ ಗ್ರಾಮದ ಮಣ್ಣಿನ ಮಕ್ಕಳ ದುರಂತ ಸ್ಥಿತಿಗೆ, ವಿಘಟನೆಗೆ ಕಾರಣವಾದ ಅಂಶಗಳನ್ನು ಕಾದಂಬರಿ ಹುಡುಕುತ್ತಾ ಹೋಗುತ್ತದೆ.

ಹೊನ್ನಾಳಿ, ಗೋವಿನಹಳ್ಳಿ ಗ್ರಾಮಗಳು ಒಂದು ಹಳ್ಳಿಯಾಗಿ ಉಳಿಯದೆ ಆ ಕಾಲದ ಭಾರತದ ಎಲ್ಲಾ ಹಳ್ಳಿಗಳಿಗೂ ಸಂಕೇತವಾಗುತ್ತದೆ. ನಮ್ಮ ಸಾಮಾಜಿಕ ವ್ಯವಸ್ಥೆ ಮತ್ತು ಹಳ್ಳಿಗಳ ಸಮಸ್ಯೆಯ ಕಡೆ ಸಮರ್ಥವಾದ ತೋರ್‌ಬೆರಳನ್ನು ಚಾಚಿದೆ. ಇಡಿಯ ಒಂದು ಜೀವನಕ್ರಮದ ಬಗ್ಗೆ ಬರಗಾಲದ ದುಷ್ಪರಿಣಾಮಗಳು, ಸಾಮಾಜಿಕ ಶಕ್ತಿಗಳು ಹೇಗೆ ಕಾರಣವಾಗುತ್ತವೆ ಎಂಬ ಅಂಶಗಳನ್ನು ತೋರಿಸುತ್ತವೆ. ೧೯೬೪-೬೫ನೇ ವರ್ಷದಲ್ಲಿ ಬಂದೆರಗಿದ ಬರಗಾಲದ ಭೀಕರತೆಯಲ್ಲಿ ಬೆಂದು ಬಸವಳಿದ ಮಣ್ಣಿನ ಮಕ್ಕಳ ಯಥಾವತ್ತಾದ ಜೀವನವನ್ನು ಚಿತ್ರಿಸುವ ಕಾದಂಬರಿಯ ಬಗ್ಗೆ ಲೇಖಕರ ಉದ್ದೇಶವನ್ನು ಸ್ಪಷ್ಟಪಡಿಸುತ್ತದೆ. ಹೊನ್ನಾಳಿ ಗ್ರಾಮದಲ್ಲಿ ನಡೆಯುವ ಎಲ್ಲಾ ಘಟನೆಗಳು ಒಂದರ ಹಿಂದೆ ಒಂದರಂತೆ ಓದುಗರ ಮುಂದೆ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಒಂದು ಜನಾಂಗದ ಸುಖ-ದುಃಖಗಳು, ಹಬ್ಬ ಹುಣ್ಣಿಮೆಗಳು, ಜಾತ್ರೆ-ಉತ್ಸವಗಳ ಸಂಭ್ರಮ ಸಡಗರ, ಅಲ್ಲಿ ಉದ್ಭವಿಸುವ ಕಾಲರಾ, ಪ್ಲೇಗ್, ಬರಗಾಲ, ಮೊದಲಾದವುಗಳಿಂದ ಉಂಟಾದ ದುಃಖದ ತೀವ್ರತೆ, ಅವು ಹೊನ್ನಾಳಿ

ಗ್ರಾಮದ ಮಣ್ಣಿನ ಮಕ್ಕಳ ಜನಜೀವನದ ಮೇಲೆ ಉಂಟು ಮಾಡಿದ ಪರಿಣಾಮ, ಕಳ್ಳತನ, ಮೋಸ ಮೊದಲಾದ ಕೃತ್ಯಗಳ ಭೀತಿ, ಬರಗಾಲದಲ್ಲಿ ಕೊಡತಕ್ಕಂತಹ ಪರಿಹಾರದಲ್ಲಿ ಹಣ ಕಬಳಿಸುವ ಲೋಭತನ, ಗುತ್ತಿಗೆದಾರರ ಸ್ವಾರ್ಥ, ಜೊತೆಗೆ ಕೆಲವರಲ್ಲಿರುವ ಊರಿನ ಅಭಿಮಾನ ಮೊದಲಾದ ಭಾವ ಪ್ರಪಂಚ ಅದ್ಭುತವಾಗಿ ಚಿತ್ರಿತವಾಗಿವೆ.

ಕಾದಂಬರಿಯು ನಮ್ಮನ್ನು ಗ್ರಾಮಗಳು ತಮ್ಮ ವ್ಯವಸ್ಥೆಯನ್ನು ಇನ್ನೂ ಬಹುಮಟ್ಟಿಗೆ ಉಳಿಸಿಕೊಂಡಿದ್ದ ಕಾಲಕ್ಕೆ ಕರೆದೊಯ್ಯುತ್ತವೆ. ಆದರೆ ಬಾಹ್ಯ ಮತ್ತು ಆಂತರಿಕ ಒತ್ತಡಗಳಿಂದಾಗಿ ಈ ವ್ಯವಸ್ಥೆ ಹೇಗೆ ಸಡಿಲವಾಗುತ್ತದೆ ಮತ್ತು ಕುಸಿಯುತ್ತ ಸಾಗಿದೆ ಎಂಬುದನ್ನು ತುಂಬಾ ಸಮರ್ಥವಾಗಿ ಚಿತ್ರಿಸಿದೆ.

ಹೊನ್ನಾಳಿ, ಕೊಳಗೇರಿ ಪ್ರದೇಶಗಳ ಅವನತಿಯ ಮೂಲ ಬರಗಾಲದ ಅವಸ್ಥೆಯ ಜೊತೆಗೆ ಅದರ ಸಾಮಾಜಿಕ ವ್ಯವಸ್ಥೆಯಲ್ಲಿ ಇದೆ. ಇವುಗಳ ಜೊತೆಗೆ ಹೊರಗಿನ ಪ್ರಭಾವಗಳು ಇನ್ನಷ್ಟು ತೀವ್ರವಾಗಿ ಕ್ಷಿಪ್ರವಾಗಿ ಕುಸಿಯುವಂತೆ ಮಾಡಿದೆ. ೧೯ನೇ ಶತಮಾನದ ಅಂತ್ಯದ ಭಾಗದಲ್ಲಿ ಚಾಲ್ತಿಯಲ್ಲಿದ್ದ ಸರಂಜಾಮಿ ಪದ್ಧತಿ ಮತ್ತು ಜಾತಿ ಪದ್ಧತಿಯಿಂದಾಗಿ ಅಲ್ಲಿಯ ವ್ಯವಸ್ಥೆ ಪಾಶ್ಚಾತ್ಯ ಸಂಸ್ಕೃತಿ ನಾಗರೀಕತೆಗಳ ಆಘಾತವನ್ನು ಎದುರಿಸಬೇಕಾಯಿತು. ಪಾಶ್ಚಾತ್ಯರ ಪ್ರಭಾವ ನಿಧಾನವಾಗಿ ನಗರಗಳಿಂದ ಹಳ್ಳಿಗಳನ್ನು ವ್ಯಾಪಿಸಿಕೊಳ್ಳುವ ಮುನ್ಸೂಚನೆಯನ್ನು ನೀಡಿದ್ದಾರೆ.

ಹೊನ್ನಾಳಿ ಗ್ರಾಮದಲ್ಲಿ ಬಲುಗಟ್ಟಿಗ ಎನಿಸಿದ್ದ ಹಿರಿಯ ತಲೆ, ಜನತೆಗೆ ದಾನ ಧರ್ಮಗಳನ್ನು ಮಾಡುವ ಮನೋಭಾವ ಹೊಂದಿದ್ದ ಆ ಊರಿನ ನಾಡಗೌಡ ಬೊಮ್ಮನಾಯಕನ ಕುಟುಂಬವನ್ನು ಆಧಾರವಾಗಿಟ್ಟು ಸುಮಾರು ಮೂರು ತಲೆಮಾರುಗಳ ಭಿನ್ನ ಭಿನ್ನ ಆಲೋಚನೆಗಳನ್ನು ಅಭಿವ್ಯಕ್ತಿಸಿರುವುದು ಈ ಕಾದಂಬರಿಯಲ್ಲಿ ಕಂಡುಬರುತ್ತಿದೆ. ಭಾರತದ ಪ್ರಮುಖ ಕೃಷಿ ಚಟುವಟಿಕೆಗಳಲ್ಲೊಂದಾದ ವ್ಯವಸಾಯ ಪದ್ಧತಿಯನ್ನು ಒಟ್ಟು ಬಿಡಲಾರದ ಪರಿಸ್ಥಿತಿಯಲ್ಲಿ ಪ್ರಕೃತಿ ವಿಕೋಪಗಳಿಂದ ದೂರವಾಗಿ ಆ ಗ್ರಾಮೀಣ ಜನರು ತಮಗೆ ಅರಿವಿಲ್ಲದಂತೆ ಜಾಗತೀಕರಣದ ಪ್ರದೇಶಕ್ಕೆ ಪರೋಕ್ಷವಾಗಿ ಅನುವು ಮಾಡಿಕೊಡುತ್ತಾರೆ ಎಂಬ ಮುನ್ಸೂಚನೆಯನ್ನು ನಿರೂಪಿಸಿರುವುದು ಈ ಕಾದಂಬರಿಯಲ್ಲಿ ಕಂಡುಬಂದಿದೆ. ಅಂದರೆ ೧೮ನೇ ಶತಮಾನದಲ್ಲಿ ಜರುಗಿದ ಹಸಿರು ಕ್ರಾಂತಿಯ ಪರಿಣಾಮದ ನಂತರ ತರುವಾಯ ಕೈಗಾರೀಕರಣ, ನಗರೀಕರಣ ಜಾಗತೀಕರಣ, ಉದಾತ್ತೀಕರಣ ಎನ್ನುವ ವಿದೇಶಿ ಸಂಸ್ಕೃತಿಯು ನಮ್ಮ ಹಳ್ಳಿಗೆ ವ್ಯಾಪಿಸುತ್ತಿದೆ ಎನ್ನುವ ಮುನ್ಸೂಚನೆಯನ್ನು ವ್ಯಕ್ತಪಡಿಸಿರುವುದು ಗಮನಾರ್ಹವಾದುದು ಬಹುಶಃ ಈ ಘಟನೆ ದ್ಯಾವನೂರು ಮಹದೇವ ಬರೆದಿರುವ ಜಾಗತೀಕರಣದ ಪ್ರಭಾವ ನಮ್ಮ ಜನರ ಜೀವನದ ಬದುಕನ್ನು ಹೇಗೆ ದುಸ್ತರಗೊಳಿಸುತ್ತವೆ ಮತ್ತು ಬದಲಾಯಿಸುತ್ತದೆ ಎಂಬ ಸಂಗತಿಗಳನ್ನು ಇಟ್ಟು ರಚಿಸಿರುವ 'ಡಾಂಬರು ಬಂದುದು' ಕಥೆಯನ್ನು ನೆನಪಿಗೆ ತರುವಂತದ್ದಾಗಿರುತ್ತದೆ.

[illegible]

ಸಮಾಜದಲ್ಲಿರುವ ಪ್ರತಿಷ್ಠಿತ ವರ್ಗ ಎಲ್ಲಾ ಸಂದರ್ಭಗಳನ್ನು ತಮ್ಮ ಸಂದರ್ಭಗಳನ್ನು ತಮ್ಮ ಸ್ವಾರ್ಥಸಾಧನೆಗಾಗಿ ಹೇಗೆ ಬಳಸಿಕೊಳ್ಳುತ್ತಾರೆಂಬುದನ್ನು ಕಾದಂಬರಿ ಚೆನ್ನಾಗಿ ಚಿತ್ರಿಸಿದೆ. ಮತ್ತು ಸರ್ಕಾರಿ ಅಧಿಕಾರಿಗಳ ದರ್ಪಯುತವಾದ ಅಧಿಕಾರ ಲಂಚಗುಳಿತನ, ಅವರು ಬಡವರನ್ನು ಶೋಷಿಸುವ ರೀತಿ ಇವೆಲ್ಲವೂ ಇಂದಿನ ಪರಿಸ್ಥಿತಿಗೆ ಕನ್ನಡಿ ಹಿಡಿದಂತಿದೆ. ಅದಕ್ಕೊಂದು ಉದಾಹರಣೆಯೆಂದರೆ ಬರಗಾಲದಿಂದ ಜನಸಾಮಾನ್ಯರು ಹೊಟ್ಟೆಗಿಲ್ಲದೆ ಸಂಕಟಕ್ಕೆ ಗುರಿಯಾಗಿರುವಾಗ ಅವರ ಹಸಿವನ್ನು ನೀಗಿಸಲು ಸರ್ಕಾರಿ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಇವರೆಲ್ಲರೂ ಮುಂದಾಗುತ್ತಾರೆ. ಆದರೆ ಇವರ ಉದ್ದೇಶ ಬಡವರ ಹಸಿವನ್ನು ನೀಗಿಸುವುದಿಲ್ಲ ಬದಲಾಗಿ ತತ್ಕಾಲೀನ ಪರಿಹಾರ ನೀಡಿ, ತಮ್ಮ ತಮ್ಮ ಸ್ವಾರ್ಥ ಸಾಧನೆಗಾಗಿ ಯಾರನ್ನು ಬೇಡಿದರೂ ಇಕ್ಕಟ್ಟಿಗೆ ಸಿಲುಕಿಸುವ ತನಗೆ ಅನುಕೂಲಕ್ಕೆ ತಕ್ಕಂತೆ ಬದಲಾಯಿಸುವುದು ರಾಜಕೀಯ ತಂತ್ರಗಾರಿಕೆಗಳು ಪ್ರಸ್ತುತ ಸಮಾಜದ ರಾಜಕಾರಣಿಗಳನ್ನು ನೆನಪಿಗೆ ತರುತ್ತದೆ.

ಈ ಕಾದಂಬರಿಯಲ್ಲಿ ಹಲವು ಕೇಂದ್ರಸ್ಥಾನಗಳನ್ನು ಗುರುತಿಸಬಹುದು. ಅವುಗಳೆಂದರೆ ಹೊನ್ನಾಳಿ ಗ್ರಾಮದ ಯಜಮಾನ ಮನೆತನದ ಬೊಮ್ಮನಾಯಕರ ಕುಟುಂಬ, ಸೀನಪ್ಪ, ಹಳ್ಳಿಯಲ್ಲಿನ ಸಾಮಾನುಗಳನ್ನು ಅಗ್ಗದ ದರದಲ್ಲಿ ಕೊಂಡುಕೊಳ್ಳಲು ಬರುವ ವ್ಯಾಪಾರಿ ವರ್ಗ ಗುತ್ತಿಗೆದಾರರು ಸರ್ಕಾರಿ ಅಧಿಕಾರಿಗಳು ಪತ್ರಕರ್ತರ ವರ್ಗ ಹಿಂದುಳಿದ ಜಾತಿಯ ಜನ, ದಲಿತರು ಹೊನ್ನಾಳಿ ಗ್ರಾಮದಿಂದ ವಲಸೆಹೋಗುವ ಜನರು, ಕಾಲದ ಗತಿಯನ್ನು ಸೂಚಿಸುವ ಬರಗಾಲ, ಅನ್ನಕ್ಕಾಗಿ ಹಾಹಾಕಾರ, ಅಧಿಕಾರಿಗಳ ಪೊಳ್ಳು ಭರವಸೆಗಳು ಇಲ್ಲಿಯ ಬದುಕಿಗೆ ಆಕಾರ ಕೊಡುತ್ತವೆ. ಕಳಸಾಪುರ, ಧನಗೂರು ಅಲ್ಲಿಯ ಮಠ, ಗ್ರಾಮಗಳೊಡನೆ ಹೊನ್ನಾಳಿಯ ಜನತೆ ಹೊಂದಿದ ಸಂಬಂದಗಳು ಇತ್ಯಾದಿ, ಈ ಗ್ರಾಮವನ್ನು ಹೊರಗಿನ ಜಗತ್ತಿನೊಡನೆ ಜೋಡಿಸುತ್ತವೆ.

ಯಾವುದೋ ಕಾರಣಕ್ಕಾಗಿ ಹೊನ್ನಾಳಿಯ ಜನತೆ ಬರಗಾಲದಿಂದ ಬೆಂದು ಬಸವಳಿಯಬೇಕಾಗಿದೆ ಎಂಬುದನ್ನು ಕಾದಂಬರಿ ಹೇಳಲು ಹವಣಿಸಿದೆ. ಬರಗಾಲಕ್ಕೆ ಮೊದಲಿಗೆ ಸಿಕ್ಕಿ ತತ್ತರಿಸುವ ಮಣ್ಣಿನ ಮಕ್ಕಳ ಬಗ್ಗೆ ಚಿಂತಿಸುವ ವಿಶ್ವ ಸೃಷ್ಟಿಯ ಪಂಚಭೂತಗಳಾದ ಗಾಳಿ, ನೀರು, ಆಕಾಶ, ಭೂಮಿ, ಬೆಂಕಿ ಇವುಗಳ ಮೇಲೆ ಅತ್ಯಾಚಾರಗಳನ್ನು ಮಾಡುತ್ತಿರುವ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ. ಸಿಡಿಮದ್ದಿನ ಪ್ರಸಂಗ, ಗೋಮಾಳಗಳ ಅತಿಕ್ರಮಣ, ಕಾಡಿನ ನಾಶ, ದನಕರುಗಳ ಸಾವು, ಮರಳಿನ ಲೂಟಿ, ಈ ಎಲ್ಲಾ ಪ್ರಸಂಗಗಳು ಕಾದಂಬರಿಯನ್ನು ಓದುವ ಓದುಗರಿಗೆ ತಂತಾನೆ ಮನದಟ್ಟಾಗುತ್ತದೆ.

ಈ ಕಾದಂಬರಿಯಲ್ಲಿ ಕೇಂದ್ರ ವ್ಯಕ್ತಿಯಾಗಿ ನಿಲ್ಲಬಲ್ಲ ವ್ಯಕ್ತಿ ಎಂದರೆ ಬೊಮ್ಮನಾಯಕರು, ಹೊನ್ನಾಳಿ ಗ್ರಾಮಕ್ಕೆ ಬಂದು ಆತ್ಮವಿದ್ದರೆ ಅದನ್ನು ಬೊಮ್ಮನಾಯಕರಲ್ಲಿಯೇ ಹುಡುಕಬೇಕಾಗುತ್ತದೆ. ಜೀವಮಾನದ ಕೊನೆಯವರೆಗೂ ಈ

ಹಳ್ಳಿಯ ಉದ್ಧಾರಕ್ಕೆ, ದಾನ ಧರ್ಮ ಮಾಡಲು ಹಿಂದುಮುಂದು ನೋಡದ, ಪ್ರತಿ ನಿತ್ಯ ಪ್ರವಾಹದ ವಿರುದ್ಧ ಈಜುತ್ತಿದ್ದ ಬೊಮ್ಮನಾಯಕರು ಹೊನ್ನಾಳಿ ಗ್ರಾಮದಲ್ಲಿ ಬಂದೆರಗಿದ ಬರಗಾಲದ ವಿಪತ್ತಿನ ಪ್ರವಾಹದ ವಿರುದ್ಧ ಜೀವನದ ಕೊನೆಕ್ಷಣದವರೆಗೂ ಈಜಿ ಕೈಸೋತು ಹೋಗುತ್ತಾರೆ. ಈ ಬರಗಾಲದಲ್ಲಿ ಉಂಟಾದ ವ್ಯತ್ಯಯ ಪರಿಸ್ಥಿತಿಯಲ್ಲಿ ಜೀವನ ಕೈಮೀರಿ ಹೋಗುತ್ತಿರುವುದನ್ನು ನೋಡಿದಾಗ ಅಂತಃ ಸತ್ವವನ್ನೇ ಪರಿಕ್ಷಿಸಲೆಂದು ನಿರ್ಮಿತವಾದ ದೇವರ ಮಾಯೆಯಿರಬೇಕೆಂದುಕೊಳ್ಳುತ್ತಾರೆ. ಬೊಮ್ಮನಾಯಕರ ದಿಟ್ಟತನ, ಸಹಕಾರ ಮನೋಭಾವನೆಯನ್ನು ಇಲ್ಲಿ ಗುರ್ತಿಸಬಹುದು. ನಂಜಿಯನ್ನು ತಮ್ಮ ಮನೆಯಲ್ಲಿಟ್ಟು ಆಶ್ರಯ ನೀಡಿದುದು ದೇವರ ಬಗೆಗಿನ ನಂಬಿಕೆ, ಪ್ರಾಣಿಗಳ ಬಗ್ಗೆ ಇರುವ ದಯೆ, ಊರಿನ ಜನರ ಹಿತರಕ್ಷಣೆ, ಇವೆಲ್ಲ ಗುಣಗಳು ಬೊಮ್ಮನಾಯಕರಲ್ಲಿರುವುದನ್ನು ಬಿಂಬಿಸುತ್ತದೆ.

ಗ್ರಾಮ ಸಮಾಜದ ಐಕ್ಯತೆ ಗಟ್ಟಿಯಾಗಬೇಕೆಂಬ ಗಾಂಧಿ ಪ್ರೇರಿತ ಚಿಂತನೆಗಳನ್ನು ಅನುಷ್ಠಾನಗೊಳಿಸದೇ ಇರುವುದರಿಂದ ಸಂಕಷ್ಟಕ್ಕೆ ಸಿಲುಕಿದ್ದೇವೆ ಎಂಬ ಆರೋಗ್ಯಪೂರ್ಣ ಚಿಂತನೆಗಳನ್ನು ಪ್ರತಿಪಾದಿಸಿರುವುದು ಮನನೀಯ. ಹೀಗಾಗಿ ಯಾವುದೇ ಲೇಖಕ ಹಳ್ಳಿಯ ಚಿತ್ರಣಕ್ಕೆ ಮೀಸಲಾಗಿರದೇ ಇವತ್ತಿನ ಬದುಕಿನ ಸವಾಲನ್ನು ಎದುರಿಸುವಂತಹ ಹಾಗೂ ಪರಿಹಾರವನ್ನು ಸೂಚಿಸುವಂತ ವಸ್ತು ನಿಷ್ಠ ಸಾಹಿತ್ಯ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ತೈಲೂರರು ರಚಿಸಿದ 'ಅಗ್ನಿಕುಂಡ' ಕಾದಂಬರಿ ಬಿಂಬಿತವಾಗಿರುವುದು ಗಮನಾರ್ಹವಾಗಿದೆ.

ii) ಸನ್ನಿವೇಶ ರಚನೆ

ಕ್ರಿಯೆಯ ಬೆಳವಣಿಗೆ ಪಾತ್ರವಿಕಾಸ ಮತ್ತು ಘಟನಾವಳಿಗಳ ಸಂವಿಧಾನಾತ್ಮಕ ಅಳವಡಿಕೆಯ ದೃಷ್ಟಿಯಿಂದ ತೈಲೂರರ ಕಾದಂಬರಿಗಳ ಸನ್ನಿವೇಶಗಳನ್ನು ಆಹ್ವಾನಿಸುವುದು ಅವಶ್ಯಕ. ಇದು ಒಟ್ಟಾರೆ ಕವಿಯ ಕಥನ ಕೌಶಲಕ್ಕೆ ಸಂಬಂಧಿಸಿದ ವಿಷಯ. 'ಅಗ್ನಿಕುಂಡ' ಕಾದಂಬರಿಯಲ್ಲಿ ಲೇಖಕರು ಗ್ರಾಮೀಣ ಜನಜೀವನದ ಬದುಕಿನ ಸಮಗ್ರ ಚಿತ್ರಣವನ್ನು ವಾಸ್ತವವಾಗಿ ನಿರೂಪಿಸಲು ಪ್ರಯತ್ನಿಸಿದ್ದಾರೆ. ಹೊನ್ನಾಳಿ ಗ್ರಾಮದಲ್ಲಿ ಸಿಡಿಲಿನಂತೆ ಬಂದೆರಗಿದ ಬರಗಾಲದ ದುರಂತ ಚಿತ್ರಣವೇ ಕಾದಂಬರಿ ವಸ್ತು ವಿಷಯವಾಗಿದೆ. ಇದನ್ನು ಚಿತ್ರಿಸುವ ಸಲುವಾಗಿ ಘಟನೆಗಳು ಒಂದರ ಹಿಂದೆ ಒಂದರಂತೆ ನಡೆಯುತ್ತವೆ. ಸಿಡಿ ಮದ್ದನ್ನು ಸಿಡಿಸುವ ಪ್ರಸಂಗ, ಮನೆಯ ವಸ್ತುಗಳ ಮಾರಾಟ, ಸಾವು ಬದುಕಿಗಾಗಿ ನಡೆಯುವ ಹೋರಾಟ, ದನಕರುಗಳ ಸಾವು, ಕಾಲರಾ, ಪ್ಲೇಗ್ ಮುಂತಾದ ಪ್ರಕೃತಿ ವಿಕೋಪಗಳು, ಸೃಷ್ಟಿಯ ಮೇಲಿನ ಅತ್ಯಾಚಾರಗಳು, ಬರಗಾಲದಲ್ಲಿ ಕೊಡತಕ್ಕ ಪರಿಹಾರದಲ್ಲಿ ಶೋಷಣೆ ನಡೆಸುವ ಗುತ್ತಿಗೆದಾರರ ಮೋಸತನದ ಪ್ರಸಂಗ, ಸರ್ಕಾರಿ ಅಧಿಕಾರಿಗಳ ಮತ್ತು ಪತ್ರಕರ್ತರ ಆಗಮನ ಅವರು ನೀಡಿದ ಭರವಸೆಗಳು, ಸಮ್ಮಿಳನ ಕಾದಂಬರಿಯಲ್ಲಿನ ಕೊಳಗೇರಿ ಪ್ರದೇಶದ ವರ್ಣನೆ, ಸಾಮಾಜಿಕ ಆಚರಣೆಗಳು, ಶ್ರೀಮಂತರ ಔದಾರ್ಯತೆ, ಗೋಪಾಲ ವೈದ್ಯವೃತ್ತಿಯನ್ನು ಆರಂಭಿಸಿದ್ದು ಕೊಳಚೆ ಪ್ರದೇಶದ ನಿರ್ಮೂಲನೆಗೆ ಸರ್ಕಾರ ಕೈಗೊಂಡ ಕ್ರಮಗಳ ಪ್ರಸ್ತಾಪ, ಸಮಾಜದ ಮೂಢ ಸಂಪ್ರದಾಯಗಳು, 'ಪಾರ್ವತಿಯ ಮನಸ್ಸಿನ ಮಾರ್ಪಾಟಿಗೆ ಮಾಡಿದ ಅನೇಕ ಘಟನೆಗಳು ಚಿಕ್ಕ ವಯಸ್ಸಿನಲ್ಲಿ ಮನಸ್ಸಿನ ಮೇಲೆ ಆದ ಪರಿಣಾಮಗಳು, ಅದು ಜೀವನದುದ್ದಕ್ಕೂ ಬೆಳೆದು ಬದುಕಿನ ಹೊಯ್ದಾಟದಲ್ಲಿ ನೆಲೆ ನಿಲ್ಲುವುದು. ಹೀಗೆ ಹತ್ತಾರು ಘಟನೆಗಳು ಇವರ ಕಾದಂಬರಿಯ ತುಂಬ ಹರಡಿಕೊಂಡಿವೆ. ಆದರೆ ಕೆಲವು ಘಟನೆಗಳನ್ನು ಮಾತ್ರ ಸನ್ನಿವೇಶ ರಚನೆಯ ಹಿನ್ನಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಸಿಡಿಮದ್ದನ್ನು ಸಿಡಿಸುವ ಪ್ರಸಂಗ, ಸಾವು-ಬದುಕಿಗಾಗಿ ನಡೆಯುವ ಹೋರಾಟ, ಕಾದಂಬರಿಯಲ್ಲಿ ಚಿತ್ರಣಗೊಂಡಿರುವ ಸಾವು ಬರಗಾಲದ ಪರಿಸ್ಥಿತಿಯನ್ನು ಅವಲೋಕಿಸಲು ಹೊನ್ನಾಳಿಗೆ ಅಧಿಕಾರಿಗಳು ಮತ್ತು ಪತ್ರಕರ್ತರು ಭೇಟಿ ನೀಡಿದ ಪ್ರಸಂಗ, ಚಿಕ್ಕವಯಸ್ಸಿನಲ್ಲಿ ಮನಸ್ಸಿನ ಮೇಲೆ ಆದ ಪರಿಣಾಮಗಳು, ಅದು ಜೀವನದುದ್ದಕ್ಕೂ ಬೆಳೆದು ನಿಲ್ಲುವ ಅನಿವಾರ್ಯತೆ, ಪಾರ್ವತಿಯ ಮನಸ್ಸಿನ ಪರಿವರ್ತನೆಗೆ/ಮಾರ್ಪಾಡಿಗೆ ಮಾಡಿದ ಅನೇಕ ಘಟನೆಗಳು ಪ್ರಮುಖವಾಗಿದ್ದು ಕಾದಂಬರಿಯಲ್ಲಿನ ಬಹುಪಾಲು ಪಾತ್ರಗಳೆಲ್ಲವು ಇಲ್ಲಿ ಪಾಲ್ಗೊಳ್ಳುತ್ತವೆ.

ಸಿಡಿಮದ್ದನ್ನು ಸಿಡಿಸುವ ಪ್ರಸಂಗ

ಸಿಡಿಮದ್ದನ್ನು ಸಿಡಿಸುವ ಬೋರೆದ್ಯಾವ್ರ ಬಂಡೆಯನ್ನು ಹೊಡೆದು ಹಾಕುವ ಕ್ರಮ ಕಾದಂಬರಿಯ ಒಂದು ಘಟನೆಯಾಗಿದೆ. ಇಂದು ಈ ಘಟನೆ ಪ್ರಸ್ತುತ ಗಣಿಗಾರಿಕೆ

ಮಾಡುವ ಪ್ರವೃತ್ತಿಯನ್ನು ನೆನಪಿಸುತ್ತದೆ. ಆ ಬಗ್ಗೆ ಬೊಮ್ಮನಾಯಕನ ಪ್ರತಿಕ್ರಿಯೆ ಪರಿಸರ ನಾಶ ಮತ್ತು ನಾಶದ ಬಗೆಗಿನ ವಿರೋಧವನ್ನು ಒಮ್ಮೆಗೆ ಹೊರಹೊಮ್ಮಿ ಸುತ್ತದೆ. ಮತ್ತು ವಿಧಿ, ದ್ಯಾವ್ರು ಎಂಬೆಲ್ಲಾ ನಂಬಿಕೆಗಳಿಂದ ದೂರ ಸರಿದು ಕಾಂಕ್ರೀಟು ಮತ್ತಿತರ ಆಧುನಿಕ ಮಾಯಾಜಾಲಗಳ ನಡುವೆ ನಾವು ಎಲ್ಲೋ ಕಳೆದುಹೋಗುತ್ತಿದ್ದೇವೆ ಎಂಬ ಅಂಶ ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ. ಈ ಘೋರಘಟನೆಯ ಬಗ್ಗೆ ಬೊಮ್ಮನಾಯಕನ ಪ್ರತಿಕ್ರಿಯೆಯನ್ನು ಲೇಖಕರು ಈ ಕೆಳಕಂಡಂತೆ ಪ್ರತಿಪಾದಿಸಿರುವುದು ಕಂಡುಬಂದಿದೆ.

'ಡಂ ಡಂ ಢಮಾರ್' ಎಂದು ಜೋರಾಗಿ ಕಿವಿ ತೂತಾಗುವಷ್ಟು ಸಿಡಿಮದ್ದಿನ ಶಬ್ದ ಕೇಳಿಬಂತು! ವಯಸ್ಸಾದ ಬೊಮ್ಮನಾಯಕ ಬೆಚ್ಚಿ ಬಿದ್ದ!! ಶಬ್ದದ ಗುಟ್ಟನ್ನು ಅರಿತ ಆತ ವೇದಾಂತಿಯಾದ.

"ಥತ್ ಅವರು ಎಕ್ಕುಟ್ಟೋಗ..........ಬೋರೇದ್ಯಾವ್ರ ಬಂಡೆನೆಲ್ಲ ಹೊಡದಾಕುದ್ರು ಬೆಣ್ಣೆ ಕರಗ್ದಂಗೆ ಕರಗೋಯ್ತು! ಅದೆಲ್ಗೆ ಹೊತ್ಗ ಹೋದಾರು!! ಊರ್ ತೋಪು, ಗೋಮಾಳನೆಲ್ಲ ನುಂಗಾಕಂಡ್ರು"[೧]...ಬೆಟ್ಟದ ಕೆಳಗಲ ಕಾಡು ಎಂಗಿತ್ತು? ಹಸ್ರುಮಯ ಎಂತೆಂಥ ಮರಗಳಿದ್ದೊ!! ಬೋಳ್ಸಾಕುದ್ರು, ಯಾಪಾಟಿ ಕಾಡಂದಿ ಇದ್ದೋ, ಎಲ್ಲಾ ಹೊಡ್ದು ಉರುಳುಸುದ್ರು, ನವುಲು, ಮೊಲ, ಹಕ್ಕಿ, ಎಲ್ಲಾ ತೀರ್ಸುದ್ರು..... "ದ್ಯಾವರು ಮಾಡಿದ್ದೆಲ್ಲ ಹಾಳ್ ಮಾಡುದ್ರು, ಮಳೆ ಬಾ ಅಂದ್ರೆ ಎಂಗ್ ಬತ್ತೈತೆ? ಬೆಟ್ಟಗುಡ್ಡ ಕಾಡು ಉಳಿಲಿ ಅಂತ ದ್ಯಾವರ್ನ ಕೂರುಸುದ್ರು, ಅದೂ ಬುಡಾಕಿಲ್ಲ ಅಂತಾರೆ ದರಿದ್ರ ಜನ......!"[೨]

ಈ ಕಾದಂಬರಿಯಲ್ಲಿ ಹಸಿರು ಸಂಪತ್ತು ನಾಶವಾಗಿ ಕಾಂಕ್ರಿಟ್ ಕಾಡುಗಳಾಗುತ್ತಿರುವ ಈ ಹೊತ್ತಿನಲ್ಲಿ ಹಲವಾರು ಗಿಡ-ಮರಗಳ ವಂಶ ವಿನಾಶದ ಅಂಚಿನಲ್ಲಿದೆ, ಹಳ್ಳಿಯಲ್ಲಿ ಪ್ರತಿಯೊಂದು ಗಿಡ-ಮರ ಬಳ್ಳಿಯ ಹಿಂದೆ ಇರುವ ನಂಬಿಕೆ, ಆಚರಣೆಗಳು, ಅವುಗಳೊಂದಿಗೆ ಬೆಸೆದುಕೊಂಡಿರುವ ಸಂಬಂಧಗಳು, ಅವುಗಳ ಹೆಸರು ಅವುಗಳೊಂದಿಗೆ ಈ ಘಟನೆಯ ಕಾರಣದಿಂದಾಗಿ ಕಣ್ಮರೆಯಾಗುವುದರ ಕುರಿತ ವಿಷಾದ ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ಸಾವು ಬದುಕಿಗಾಗಿ ನಡೆಯುವ ಹೋರಾಟ

ಸಾವು ಬದುಕಿಗಾಗಿ ನಡೆಯುವ ಹೋರಾಟ ಎದುರಾದಾಗ ಅಲ್ಲಿ ನಡೆಯುವ ಘಟನಾವಳಿಗಳು ಈ ಕಾದಂಬರಿಯಲ್ಲಿ ಸಾದೃಶ್ಯಗಳಾಗಿ ಅನಾವರಣಗೊಂಡಿವೆ.

ಹೊನ್ನಾಳಿ ಗ್ರಾಮಕ್ಕೆ ಬಂದೆರಗಿದ ಬರಗಾಲದ ಅವಸ್ಥೆಯಿಂದ ಅಲ್ಲಿಯ ಜನತೆ ಕಂಗೆಡುತ್ತದೆ. ತುತ್ತು ಅನ್ನಕ್ಕೂ ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮಳೆಹೊಯ್ದು ಕೆರೆ-ಕಟ್ಟೆಗಳು ತುಂಬಿ ಕೋಡಿ ಬಿದ್ದಾಗ ಎಲ್ಲವೂ ಸರಿಯಾಗುತ್ತಿತ್ತು. ಬರಗಾಲ ಅಪ್ಪಳಿಸಿದ ಮೇಲಂತೂ ಉಂಟಾದ ಅವಸ್ಥೆಗಳು, ಅವನ್ನು ಎದುರಿಸಿದ

ಪರಿಸ್ಥಿತಿಯನ್ನು ಅನಾವರಣ ಮಾಡಿರುವುದು ಬಿಂಬಿತವಾಗಿದೆ.

ಒಂದು ಕಾಲದಲ್ಲಿ ಊರಿನ ಯಜಮಾನ ಬೊಮ್ಮನಾಯಕ, ಮಳೆ ಬೆಳೆಯಾದ ಸಂದರ್ಭದಲ್ಲಿ ಕೊಡುಗೈ ದಾನಿಯಾಗಿದ್ದು, ಗೋ ಸಂಪತ್ತನ್ನು ಹೊಂದಿದ್ದು ಉತ್ತಮ ಜೀವನ ನಡೆಸುತ್ತಿದ್ದು, ಈತನು ಸಹ ಬರಗಾಲದ ಭೀಕರತೆಯ ಸುಳಿಯಲ್ಲಿ ಸಿಲುಕುತ್ತಾನೆ. ಈ ಅವಸ್ಥೆಯನ್ನು ಸರಿಯಾಗಿಸಲು ಮನೆಯಲ್ಲಿದ್ದ ಒಂದೊಂದು ವಸ್ತುವನ್ನು ಹೊತ್ತು ತಂದು ತಾಮ್ರದ ಹಂಡೆ, ಚೆಂಬು ಕಡಾಯಿ ಕಡಿಮೆ ಬೆಲೆಗೆ ಸೇಠುವಿಗೆ ಮಾರುವುದು ಮತ್ತು ಗೋವು ಗಳನ್ನು ಜಾತ್ರೆಯಲ್ಲಿ ಮಾರಾಟ ಮಾಡುವುದು, ಬಡಜನತೆ ಮಧ್ಯಾಹ್ನದ ಬಿಸಿ ಯೂಟದಲ್ಲಿ ಪಾಲು ಪಡೆಯಲು ಹವಣಿಸುವುದು, ತಮ್ಮ ಮನೆಯಲ್ಲದ ಕೋಳಿ ಹುಂಜಗಳನ್ನು ಮಾರಿದ್ದು, ಹನುಮನಾಯಕ ತನ್ನ ಮನೆಯಲ್ಲಿದ್ದ ಚಿನ್ನದ ಸರ ಕೊಟ್ಟಿದ್ದು, ಊರಿನ ಜನತೆ ಕಂಚು, ಬೆಳ್ಳಿ, ತಾಮ್ರದ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರುವುದು, ತಮ್ಮ ಸ್ಥಾನಮಾನಗಳನ್ನು ಮರೆತು ತುತ್ತು ಅನ್ನಕ್ಕಾಗಿ ಕೆಲಸಗಳಿಗಾಗಿ ದುಡಿಯುವುದು, ಹೆತ್ತ ಮಗುವನ್ನು ನಿರ್ದಯವಾಗಿ ಸಂತೆಯಲ್ಲಿ ಮಾರಾಟ ಮಾಡುವುದು ಕೊನೆಗೆ ಹನುಮನಾಯಕ ಪರಿಸ್ಥಿತಿಯ ನಿರ್ವಹಣೆಗೆ ತನ್ನ ಹೆಂಡತಿಯ ಕೊರಳಲ್ಲಿದ್ದ ತಾಳಿಯ ಬಗ್ಗೆ ಗಮನಹರಿಸುವುದು ಈ ಎಲ್ಲ ಘಟನೆಗಳು ಬರಗಾಲದಲ್ಲಿ ತಮ್ಮ ಜೀವನವನ್ನು ತಾತ್ಕಾಲಿಕವಾಗಿ ಸರಿಪಡಿಸಲು ತೊಳಲಾಡುವ ಪರಿಸ್ಥಿತಿಗಳು ಒಂದರ ಹಿಂದೆ ಮತ್ತೊಂದು ಸಾದೃಶವಾಗಿ ಬಿಂಬಿತವಾಗಿವೆ.

"ಇಷ್ಟೇನಾ ಮಾರಾಯ, ನಿಮ್ದು ವಸ್ತು?"[೩] ಉಳ್ದಿರೊ ಕುರಿ ಕೋಳಿ ಕೊಡ್ತೀವಿ, ಅಷ್ಟೆ. ಇದೇನ್ ಸಾಬು ಇಂಗೇಳ್ತಿಯ, "ಈ ಜೋಡೆತ್ಗೆ ನಂದಗಿರಿ ಜಾತ್ರೆಲಿ ಎಷ್ಟಾಗವೆ ಗೊತ್ತ? ಹೆಚ್ಗೆ ಮಾತಾಡದ್ರೆ ಒಂದ್ರುಪಾಯ್ಗೆ ಒಂದಿನಕ್ಕೆ ಒಂದ್ರುಪಾಯ್ ಬಡ್ಡಿ ಹಾಕ್ತೀನಿ ಕೊಟ್ಟಷ್ಟು ಈಸ್ಕೊಂಡೋಗು"[೪] ಹನುಮನಾಯಕ ಗುತ್ತಿಗೆದಾರನ ಬಳಿ ಬಂದು ದೈನ್ಯತೆಯಿಂದ ಕೆಲಸ ಕೇಳು ಪರಿ "ಸ್ವಾಮಿಯೋರ....... ನೀವು ದಯೆ ತೋರ್ಸುದ್ರೆ ನಾನು ಕೂಲಿ ಮಾಡಿ ಹೊಟ್ಟೆ ಹೊರದೇನು, ಗುತ್ತಿಗೆದಾರರ ನಿರ್ದಯೆ ಕೊಟ್ಟಾಗ ನೋಡ್ಕೊ ಹತ್ತೋ ಇಪ್ಪತ್ತೋ ನೀನ್ ಕೈ ಸೇರ್ತದೆ ಕೂಲಿ ಇಷ್ಟೇನಾ ಅಂತ ಕೇಳುದ್ರೆ ಹೋಗು ಅಂತಾರೆ, ಎಲ್ಲೋಯ್ತಿಯ? ಕೂಲಿ ಸಿಗ್ಬೇಕಲ್ಲ"[೫], "ಯಾವೂರಯ್ಯ? ಹೊನ್ನಾಳಿ ಸ್ವಾಮಿ ಏನಯ್ಯ ಈ ಮುದಿವಯಸ್ನಲ್ಲಿ ಯಾವುದಾರ ಗಂಜೀ ಮಠ ಸೇರ್ಕಂಡು ಹರಶಿವ ಅಂತ ಕಾಲ ತಳ್ಳೋದ್ಬುಟ್ಟು ಇಲ್ಲಿ ಕೆಲ್ಸ ಕೇಳ್ಕಂಡು ಬಂದಿದ್ದಿಯಲ್ಲ ನೀಯೇನ್ಕೆಲ್ಸ ಮಾಡ್ತಿಯಾ?"[೬]

ಬರಗಾಲದ ಅವಸ್ಥೆಯಲ್ಲಿ ತುತ್ತು ಅನ್ನಕ್ಕಾಗಿ ಸಂಸಾರ ನಡೆಸಲು ಹೆತ್ತ ಮಗುವನ್ನು ಸಹ ಮಾರಾಟ ಮಾಡುವ ಪ್ರಸಂಗವು ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ. ಅವರವರಲ್ಲಿಯೇ ಹರಾಜು ಕೂಗುವಂತಿದೆ. "ನಾನು ನೂರು ಕೊಡ್ತಿನಿ, ನಾನು ಇನ್ನೂರುಕೊಡ್ತಿನ, ಹೇ ಅವನ್ಗೆ ಕೊಡಬೇಡ, ನಂಗೆ ಕೊಡು ಇನ್ನೂರು ಆಯ್ತು ಕೊಟ್ಟು

ಬಿಡು, ಮಾಲು"[೭] ಏನೊ ನನ್ನೇ ಕೇಳ್ತಿಯಾ ಹರಾಜಿನಲ್ಲಿ ಕೊಂಡಿವ್ನಿ ಮತ್ತು ಹನುಮನಾಯಕ ಸರ, ಕರಿಮಣಿ ಹಳೆಯ ಕಾಲದ ಸವೆದ ಎರಡು ಕಾಸುಗಳನ್ನು ಮಾರಾಟಮಾಡಿ ದವಸ ಧಾನ್ಯಗಳನ್ನು ತರುವಂತಹದ್ದು ಈ ಕಾದಂಬರಿ ಎಲ್ಲಾ ಅಂಶಗಳು, ಎಚ್.ಕೆ. ಲಕ್ಕಪ್ಪಗೌಡರು ರಚಿಸಿರುವ 'ಹೊನ್ನಾರು' ಗ್ರಂಥದ ಭಾಗವಾದ 'ತ್ಯಾಗಮಯಿ' ಲೇಖನದಲ್ಲಿ ಕಂಡು ಬರುವ ಸನ್ನಿವೇಶಗಳಿಗೆ ಸಾದೃಶ್ಯತೆ ಹೊಂದುತ್ತದೆ.

'ಸಾವಿ'ನ ಚಿತ್ರಣ

ಹುಟ್ಟಿದ ಮನುಷ್ಯ ಒಂದಲ್ಲಾ ಒಂದು ದಿನ ಸಾಯಲೇಬೇಕು. 'ಸಾವು' ಎನ್ನುವುದು ಸಾಮಾನ್ಯವಾದ ಸಂಗತಿ, ಇದರಿಂದ ಯಾರು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಆದರೆ ಇವರ ಕಾದಂಬರಿಗಳಲ್ಲಿ ಸಾವು ಎನ್ನುವುದು ಅತಿಯಾಯಿತೇನೋ ಎನ್ನುವಷ್ಟರ ಮಟ್ಟಿಗೆ ವ್ಯಾಪಿಸಿಕೊಂಡಿದೆ. ಇದಕ್ಕೆ ಕಾರಣ ಸ್ಪಷ್ಟವಾಗಿ ಇರಬಹುದು. 'ಅಗ್ನಿಕುಂಡ' ಬರಗಾಲದಲ್ಲಿ ಬೆಂದು ಬಸವಳಿದ ಮಣ್ಣಿನ ಮಕ್ಕಳ ಬವಣೆಯನ್ನು ಚಿತ್ರಿಸುವ ಕಾದಂಬರಿಯಾಗಿರುವುದರಿಂದ 'ಸಾವು' ಆರಂಭದಿಂದ ಅಂತ್ಯದವರೆಗೂ ವಿಜೃಂಬಿಸುತ್ತಲೇ ಹೋಗುತ್ತದೆ. ಈ ಕಾದಂಬರಿಯಲ್ಲಿ ಮನುಷ್ಯ ಸಾವಿಗಿಂತ ಜಾನುವಾರುಗಳ ಸಾವಿನ ಚಿತ್ರಣ ನಿರಂತರವಾಗಿ ಕಂಡುಬರುತ್ತದೆ. ಮತ್ತೆ ಕೆಲವರು ಇಳಿ ವಯಸ್ಸಿನ ಕಾರಣದಿಂದಲೋ ಉಳಿದವರು ಹಿಂಸೆಯ ಕಾರಣದಿಂದಲೋ, ರೋಗರುಜಿನಗಳ ಕಾರಣದಿಂದಲೋ ಸಾವನ್ನಪ್ಪುತ್ತಾರೆ ಹೊನ್ನಾಳಿಯ ಒಡಲಿನಲ್ಲಿ ಗರ್ಭಧರಿಸಿರುವುದರಿಂದ ಅದರೊಳಗೆ ಪ್ರವೇಶಿಸುವ ಯಾರು ಸುಖಾಂತದಲ್ಲಿ ತಮ್ಮ ಜೀವನವನ್ನು ನೆಲೆಗೊಳಿಸಿಕೊಳ್ಳಲು ಆಗುವುದಿಲ್ಲ. ಅಜ್ಜಿಯ ಸಾವು, ಜಾನುವಾರುಗಳ ಸಾವು ಲೇಖಕರು ಅಜ್ಜಿಯ ಸಾವಿನ ಸನ್ನಿವೇಶವನ್ನು ಹೀಗೆ ಚಿತ್ರಿಸಿದ್ದಾರೆ. "ಅಪ್ಪಯ್ಯ ಅಪ್ಪಯ್ಯ, ಅಜ್ಜಿ ಸತ್ತೊಗವಳೆ"[೮] "ಗುಂಡಿನ ಸರದೊಂದಿಗೆ ಮುದುಕಿಯಾಗಿ ಹೋದಳು.

ತೆಪ್ಪನೆ ಭೂಮಿಯೊಳಗೆ ಒರಗಿ ಸೀತೆಯಂತೆ ಭೂಮಿ ಪಾಲಾದಳು 'ಸಿವಾ ಅಂತ ಕೈ ಮುಕ್ಕೋಬಿಡಿ, ಹೆಣ್ಣು ಮಣ್ಣು ಎಲ್ಲಾ ಅವಳೇ ಅವಳೇ ಎಲ್ಲಾ ನೊಡ್ಕೋತಾಳೆ'.

ಜಾನುವಾರುಗಳ ಸಾವಿನ ಸನ್ನಿವೇಶವು ಹೃದಯ ವಿದ್ರಾವಕವಾಗುವಂತೆ ಚಿತ್ರಿಸಿದ್ದಾರೆ. "ಬೆಳದಿಂಗಳು ಬೆಳಗಿತ್ತು, ಊರಿನ ಕೇರಿಗಳು ನಿರ್ಜೀವವಾಗಿದ್ದವು. ಅದ್ಯಾವುದೋ ಕೇರಿಯಲ್ಲಿ ಕೂಗು ಹಾಕುತ್ತಿದ್ದ ನಾಯಿಗಳ ಚೀತ್ಕಾರ ಕೇಳುಗರ ಎದೆಯನ್ನು ಸೀಳುವಂತಿತ್ತು! ಚಂದ್ರನ ಮಂದ ಬೆಳಕು ಮರಗಳ ಮೇಲೆ ಬಿದ್ದು ಅದರ ನೆರಳು ದೊಡ್ಡ ದೊಡ್ಡ ಅಸ್ಥಿಪಂಜರಗಳಂತೆ ಗೋಚರಿಸುತ್ತಿದ್ದವು! ಅಂಥಾ ಒಂದು ನೆರಳು ಬೆಳಕಿನ ಅಡಿಯಲ್ಲಿ ಕಂಡಲ್ಲಿನ ಬಂಡೆಯಂತೆ ಅದ್ಯಾವುದೋ ಬಿದ್ದು ಹೊರಳಾಡುವಂತಿತ್ತು!!"[೯] "ನನ್ನೆರಡು ಹಸ್ಗಳ ಬಸವನಳ್ಳಿ ತಾವು ಭೂಮ್ ತಾಯಿ ಹೊಟ್ಟೆಯೊಳಕ್ಕೆ ಸೇರ್ಸಿ ಮಣ್ಮಾಡಿ ಬಂದೆ,

ಹಟ್ಟೀಲಿ ಹುಟ್ಟಿ ಜೊತೆಯಾಗಿ ಬೆಳೆದ ಹಸ್ಗಳ ಜ್ಞಾಪ್ಕಕ್ಕೆ ಅವುಗಳ ಗಂಟೆಗಳ್ನ ಬಿಚ್ಕಂಡು ಬಂದೆ ಮೇವು ಮೆಲುಕು ನಿಲ್ಸಿ ತಣ್ಣಗಾದೋ.... ಅವುಗಳ ಋಣ ತೀರ್ಸಿ ಬಂದೆ."[೧೦] ಬೊಮ್ಮನಾಯಕರು ಸಾಕಿದ ಜಾನುವಾರುಗಳು ಸಹ ಬರಗಾಲದ ಬಿಸಿಲಿನ ಬೇಗೆಯಲ್ಲಿ ಮರಣ ಹೊಂದಿದ ಚಿತ್ರಣವನ್ನು ಈ ಕಾದಂಬರಿಯಲ್ಲಿ ಅವಲೋಕಿಸಬಹುದಾಗಿದೆ.

"ಕಾಲೆಳೆಯುತ್ತಾ ಸಾಗುತ್ತಿದ್ದ ಎಳಗೊಂತಿ ಆಕಳು ನಡೆಯಲಾರದೆ ನೆಲಕ್ಕೆ ಬಿದ್ದು ಹೊರಳಿತು ಎಷ್ಟೇ ಮೈದಡವಿ ಮಾಡಿದರೂ ಅದು ಏಳುವ ಚೈತನ್ಯವನ್ನು ಕಳೆದುಕೊಂಡಿತ್ತು. ದಾರಿ ದಾಹಕ್ಕೆ ತಂಬಿಗೆಯಲ್ಲಿ ತಂದಿದ್ದ ನೀರನ್ನು ಬಾಯಿಗೆ ಇಳಿ ಬಿಟ್ಟರು ಪರಿಸ್ಥಿತಿಯನ್ನು ಅರಿತ ನಾಯಿ ಆಕಳ ಮೈಯನ್ನು ಮೂಸಿನೋಡಿ ಬೊಗಳಿ ಅದರ ಬಾಲವನ್ನು ಮೆಲುವಾಗಿ ಕಚ್ಚಿ ಎಳೆಯಿತು"[೧೧]. ಆಕಳ ಸ್ಥಿತಿ ಇನ್ನೂ ಇಳಿಮುಖವಾಗಿ ಕೊಸರಿ ತಲೆಯನ್ನು ನೆಲಕ್ಕೆ ಇಳಿಬಿಟ್ಟಿತು. ಬಾಯಲ್ಲಿ ನೊದಲೆ ಕಟ್ಟಿತು. ಇನ್ನೂ ಅದರ ಕಥೆ ಮುಗಿದಂತೆ ಎಂದು ಎಲ್ಲರ ಅರಿವಿಗೂ ಬಂತು. ನಾಯಿಯೂ ಹಿಂಬಾಲಿಸಿತು ಇವರು ಓಡಿ ಬಂದುದನ್ನು ಕಂಡ ಕಾಗೆ ಹದ್ದುಗಳು ಇವರನ್ನು ಶಪಿಸುವಂತೆ ಕಾಕಾ.....ಕ್ಷೀ ಕ್ಷೀ. ಎಂದು ಸಮ್ಮಿಶ್ರವಾಗಿ ಧ್ವನಿ ಹೊರಡಿಸಿ ಹಾರಾಡಿದವು. ಹನುಮನ ಹೆಗಲ ಮೇಲೇರಿ ಕಾಲು ಇಳಿಬಿಟ್ಟು ಅಡ್ಡಡ್ಡ ಜೋತುಕೊಂಡಿದ್ದ ಎಳೆಗರು ಆತನ ಹೆಜ್ಜೆಯ ಏರಿಳಿತಕ್ಕೆ ಓಲಾಡುತ್ತಾ ತನ್ನ ನೀಲಿ ಗಣ್ಣುಗಳಿಂದ ಅವರತ್ತಲೇ ನೋಡಿ ತನ್ನ ಮುದ್ದಾದ ಬಾಯಿಂದ ಅಂಬ್ಯಾ-ಅಂಬ್ಯಾ ಎಂದು ಮುದ್ದಾಗಿ ಕೂಗಿತು.

"ಅಂಬೂ ಕೊಡುವವನೆ ಗೊಂಬೆ ಹಚ್ಚಡದವನೆ
ರಂಭೆ ತೊಡೆ ಮೇಲೆ ಮಲಗಿರುವ ಮಳೆದೇವ
ಅಂಬಾರದಿಂದ ಕರುಣೀಸು " [೧೨]

ಗಂಡನ ಉಗ್ರವರ್ತನೆ ಹೆಂಡತಿಯ ರಕ್ತದ ಮಡುವಿನಲ್ಲಿ ಪರ್ಯಾವಸನ ಗೊಂಡ ಚಿತ್ರಣವು 'ಪಾರ್ವತಿ' ಕಾದಂಬರಿಯಲ್ಲಿ ಬಿಂಬಿತವಾಗಿದೆ. ಸೌಮ್ಯ ಸ್ವಭಾವದ, ಭಕ್ತಿ ಪರವಶಳಾದ ಸಾಧ್ವಿ ಸಾವಿತ್ರಿಯು ಒಬ್ಬ ಕುಡುಕನನ್ನು ಮದುವೆಯಾಗಿ ಜೀವನ ನಡೆಸುತ್ತಿರುವಾಕೆ. ಗಂಡನ ಮಾನ ಮರ್ಯಾದೆಯ ಅಳಿವು-ಉಳಿವು ಹೆಂಡತಿಯ ಮೇಲೆ ಹೆಚ್ಚಿನ ಹೊರೆ ಬೀಳುವುದು ಸಹಜ. ಆ ವಿಪತ್ತುಗಳು ಸಾವಿತ್ರಿಯ ಜೀವನದಲ್ಲಿ ಬಂದಿರುವುದನ್ನು ಲೇಖಕರು ಬಿಂಬಿಸಿದ್ದಾರೆ. ಆ ವಿಪತ್ತಿನ ವಿಚಾರಣೆಗಾಗಿ ಗಂಡನನ್ನು ಸರಿದಾರಿಗೆ ತರಲು ಯೋಚಿಸಿ ಕಾಡಿಬೇಡುವ, ಕಣ್ಣೀರು ಹಾಕುವ ಸಾವಿತ್ರಿ, ಅವಳ ಬೇಡಿಕೆ ಗಂಡನ ವರ್ತನೆ ಕೊಂಚವು ಬದಲಾಗದೆ, ಅವನು ಸೇಡಿನ ಕಿಚ್ಚಿನಲ್ಲಿ ಬೇಯುತ್ತಾ, ಹೆಡೆಯೆತ್ತಿ ವಿಷ ಸರ್ಪದಂತೆ ಕುಳಿತು ದ್ವೇಷ ಕಾರುತ್ತಾ, ರೊಚ್ಚಿಗೆದ್ದು ಹೆಂಡತಿಯನ್ನು ಮನೆಬಿಟ್ಟು ಹೋಗುವಂತೆ ಆಜ್ಞಾಪಿಸುತ್ತಾ ಆಕೆಗೆ ಚಿತ್ರಹಿಂಸೆ ನೀಡುವ ಚಿತ್ರಣ ಇದರಿಂದ

ಮನನೊಂದ ಸಾವಿತ್ರಿ ಮಧ್ಯರಾತ್ರಿಯಲ್ಲೆ ಮನೆತೊರೆದು ಶಿವಲಿಂಗಕ್ಕೆ ಪ್ರಾಣಾರ್ಪಣೆ ಮಾಡಿದ ಸಾವಿನ ಸನ್ನಿವೇಶವನ್ನು ಚಿತ್ರಣ ಮಾಡಿರುವುದನ್ನು ಈ ಕಾದಂಬರಿಯಲ್ಲಿ ಅರಿಯಬಹುದಾಗಿದೆ.

"ಸಾವಿತ್ರಿ ಶಿವಲಿಂಗವನ್ನು ತಬ್ಬಿ ತನ್ನ ಶಿರಸ್ಸಿನಿಂದ ರಕ್ತವನ್ನು ಹರಿಸಿ ಲಿಂಗಕ್ಕೆ ಅಭಿಷೇಕ ಮಾಡಿ ಕೈಲಾಸವನ್ನೇ ಸೇರಿದ್ದಾಳೆ. ಅವಳ ಆತ್ಮ ಹಾರಿಹೋಗಿತ್ತು ಶಿವಲಿಂಗ ಈ ರೀತಿಯಾಗಿ ಆಕೆಯನ್ನು ತನ್ನಲ್ಲಿ ಐಕ್ಯ ಮಾಡಿಕೊಂಡಿದ್ದಾನೇನೋ!"[೧೩] ಹೀಗೆ 'ಸಾವು' ಎಂಬುದು ಇವರ ಕಾದಂಬರಿಯ ಬಹುಪಾಲು ಪಾತ್ರಗಳನ್ನು ಆವರಿಸಿಕೊಂಡಿರುವ ಮುಖ್ಯ ಘಟನೆಯಾಗಿದೆ.

ಬರಗಾಲದ ಪರಿಸ್ಥಿತಿಯನ್ನು ಅವಲೋಕಿಸಲು ಹೊನ್ನಾಳಿಗೆ ಗ್ರಾಮಕ್ಕೆ ಅಧಿಕಾರಿಗಳು ಮತ್ತು ಪತ್ರಕರ್ತರು ಬಂದ ಪ್ರಸಂಗ

'ಅಗ್ನಿಕುಂಡ' ಕಾದಂಬರಿಯ ಕಥಾವಸ್ತು ಬರಗಾಲದ ಬವಣೆಯಲ್ಲಿ ಬೆಂದು ಬಸವಳಿದ ಹೊನ್ನಾಳಿ ಗ್ರಾಮುದ ಮಣ್ಣಿನ ಮಕ್ಕಳ ಬದುಕಿನ ಚಿತ್ರಣವನ್ನು ಒಳಗೊಂಡಂತಹದ್ದು ಈ ಗ್ರಾಮದ ಪರಿಸ್ಥಿತಿಯನ್ನು ಅವಲೋಕಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಪತ್ರಕರ್ತರು ಆಗಮಿಸುತ್ತಾರೆ. ಇಲ್ಲಿ ಅಧಿಕಾರಿಗಳು ಪರಿಸ್ಥಿತಿಯ ಚಿತ್ರಣವನ್ನು ಕಲೆಹಾಕಿದ ಸಂದರ್ಭವನ್ನು ವಿವೇಚಿಸಲಾಗಿದೆ. ಹೊನ್ನಾಳಿ ಗ್ರಾಮಕ್ಕೆ ಬಂದ ಅಧಿಕಾರಿಗೆ ಪ್ರಾದೇಶಿಕ ಮಾತೃಭಾಷೆಯ ಅರಿವು ಇರಲಿಲ್ಲ. ಕನ್ನಡದ ಗಂಧವಿಲ್ಲದ್ದರಿಂದ ಕನ್ನಡದವರು ಅವರಿಗೆ ಹಿಂದಿ ಅಥವಾ ಇಂಗ್ಲೀಷ್ ಭಾಷೆಗೋ ತರ್ಜುಮೆ ಮಾಡಿ ಇಲ್ಲಿಯ ಪರಿಸ್ಥಿತಿಯನ್ನು ವಿವರಿಸಬೇಕಾದ ಸಂದರ್ಭವನ್ನು ಈ ಕಾದಂಬರಿಯಲ್ಲಿ ನೋಡಬಹುದಾಗಿದೆ.

ಈ ಕಾದಂಬರಿಯಲ್ಲಿ ಅಧಿಕಾರಿಗಳು ಮತ್ತು ಆ ಊರಿನ ಜನರ ನಡುವೆ ನಡೆದ ಸಂಭಾಷಣೆ ಚಿತ್ರಿತವಾಗಿದೆ. 'ಹ್ಯಾಗೈತೆ ನಿಮ್ಮ ಪರಿಸ್ಥಿತಿ' "ಹ್ಯಾಗೈತೆ ಅಂದ್ರೆ ಏನೇಳ್ಲಿ ಸ್ವಾಮಿ, ಅನ್ನ ಮೇವು ನೀರ್ಗೆ ಪರದಾಟ ಆಗೈತೆ. ಅಂಗೈ ಉಣ್ ನೊಡ್ಕೊಳ್ಳಕೆ ಕನ್ನಡಿ ಯಾಕೆ? ಹೆಂಡ್ತಿ ತಾಳಿ ಮಾರ್ಕಳಗಂಟ ಬಂದೀವಿ ಆಡೋ ಉಸ್ರೀಗೂ ಬರಗಾಲ ಬಂದುಟ್ರೆ ನಮ್ಗೆ ಮೋಕ್ಷ ಸಿಕ್ತಂಗಾಯ್ತದೆ"[೧೪] ನಿಮ್ಗೆ ಪರಿಹಾರ ಏನ್ ಸಿಕ್ಕಿದೆ? ಪರಿಹಾರ ಎಲ್ಲರಿಗೂ ಸಮನಾಗಿ ಸಿಕ್ಕೈತೆ ಅಂತ ಇಲ್ಲಿ ಸರ್ಕಾರ ಹೇಳ್ತದಲ್ಲ! .....ಉಂಡ್ರಷ್ಟೇ ನೀರ್ಬೇಕು, ಊಟವೇ ಇಲ್ವಲ್ಲ ಬುಡಿ ತಾಯಿ" ನಿಮ್ಮಲ್ಲಿ ಸಹಕಾರ ಸೊಸೈಟಿಗಳಿದ್ದವೇ? ಹೀಗೆ ಸಂಭಾಷಣೆಯ ಜೊತೆಗೆ ಅಧಿಕಾರಿಗಳು ಊರ ಜನತೆಯ ಜೊತೆಗೆ ಊರೊಳಗೆ ನಡೆದರು ಆ ಪರಿಸ್ಥಿತಿಯ ಚಿತ್ರಣ ಕಾದಂಬರಿಯಲ್ಲಿ ಬಿಂಬಿತವಾಗಿದೆ. "ಸುಡುಬಿಸಿಲು, ಕಾದಭೂಮಿ..... ಜಾತ್ರೆ ಹೊರಟಿತ್ತು, ಐನೋರ ಬೀದಿ, ವಕ್ಕಲಗೇರಿ, ಬೆಸ್ತಗೇರಿ.......ಹೀಗೆಕಸುಬಾಧಾರಿತ ಕೇರಿಗಳು ಕ್ರಮೇಣ ಜಾತಿ ಕೇರಿಗಳಾಗಿ

ಮಾರ್ಪಟ್ಟಾದವು."[೧೫] ಬಾವಿಗಳನ್ನು ಇಣುಕಿ ನೋಡಿದರು. ಪೂರಾ ಬತ್ತಿದ ಬಾವಿಗಳು! ಬಣಗುಡುವ ಗುಡಿಗಳು, ಗುಡಿಯ ಮುಂದಿನ ಕಂಬ, ಸತ್ತ ದನಕರುಗಳ ಅಸ್ಥಿಪಂಜರಗಳು ಇವೆಲ್ಲವುಗಳನ್ನು ಅಧಿಕಾರಿಗಳು ನೋಡಿ ಟಿಪ್ಪಣಿ ಬರೆದುಕೊಂಡು, ಇದರ ಜೊತೆಗೆ ಅನೇಕ ದೃಶ್ಯಾವಳಿಗಳನ್ನು ಕ್ಯಾಮಾರ ಮೂಲಕ ಸೆರೆಹಿಡಿದು ಸರ್ಕಾರಕ್ಕೆ ವರದಿ ಸಲ್ಲಿಸಿ, ಪರಿಹಾರ ದೊರಕಿಸಿಕೊಡುವ ಪ್ರಯತ್ನ ಮಾಡುವ ಚಿತ್ರಣ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಚಿಕ್ಕ ವಯಸ್ಸಿನಲ್ಲಿ ಮನಸ್ಸಿನ ಮೇಲೆ ಬೀರಿದ ಪರಿಣಾಮಗಳು,
ಮತ್ತು ಜೀವನದುದ್ದಕ್ಕೂ ಬೆಳೆದು ನಿಲ್ಲುವ ಅನಿವಾರ್ಯತೆ

ಬಾಲ್ಯದಲ್ಲಿ ಮಾನಸಿಕವಾಗಿ ಯಾವುದಾದರೂ ಪೆಟ್ಟು ಬಿದ್ದರೆ ಮುಂದೆ ಯಾವ ಪರಿಣಾಮ ಎದುರಿಸಬೇಕಾಗುತ್ತದೆ ಎಂಬುದಕ್ಕೆ ಈ ಕಾದಂಬರಿಯಲ್ಲಿ ಬರುವ 'ಪಾರ್ವತಿ' ಸಾಕ್ಷಿಯಾಗಿದ್ದಾಳೆ.

ಮನಃ ಪ್ರವೃತ್ತಿಗಳು ಮಾನವನ ವರ್ತನೆಯ ಮೇಲೆ ತಮ್ಮದೇ ಆದ ಪ್ರಭಾವವನ್ನು ಬೀರುತ್ತವೆ. ಕೆಲವು ವಿಶೇಷ ಮನಃ ಪ್ರವೃತ್ತಿಗಳು ವ್ಯಕ್ತಿಗಳ ಜೀವನದ ಕೆಲವುಕಾಲ ಸ್ಥಿರವಾಗಿರುವುದುಂಟು ಕ್ರಮೇಣ ಅವು ಬದಲಾವಣೆ ಹೊಂದುವ ಸಂಭವವೂ ಉಂಟು.

"ಅನುಕರಣಶೀಲತೆ ಮಕ್ಕಳ ಹುಟ್ಟುಗುಣ' ಒಮ್ಮೆ ಅವುಗಳ ಮನಪಟಲದ ಮೇಲೆ ಮೂಡಿದ ಮೂರ್ತಿಗಳನ್ನು ಅಳಿಸಿಹಾಕುವುದು ನಿಜಕ್ಕೂ ಕಷ್ಟದ ಕೆಲಸ, ಅವುಗಳ ಮೇಣದಂತಹ ಮನಸ್ಸು ಯಾವುದನ್ನೇ ಆಗಲೀ ಬಹುಬೇಗ ಗ್ರಹಿಸುತ್ತವೆ. ಮಕ್ಕಳಿಗೆ ಮುಗಿಯದ ಕುತೂಹಲ: ಕೇವಲ ವಿವರಣೆಗಳನ್ನಿತ್ತರೆ ಕೆಲವೊಮ್ಮೆ ಅವರ ಸಂದೇಹಗಳು ನಿವಾರಣೆ ಆಗುವುದಿಲ್ಲ ಈ ಎಲ್ಲ ಅಂಶಗಳು ಈ ಕಾದಂಬರಿಯಲ್ಲಿ ಬಿಂಬಿತವಾಗಿವೆ.

'ಪಾರ್ವತಿ' ಎಂಬ ಚಿಕ್ಕವಯಸ್ಸಿನ ಹುಡುಗಿ ಈ ಕಾದಂಬರಿಯ ಕೇಂದ್ರ ಬಿಂದು ಈಕೆಗೆ ಜನಿಸುವಾಗಲೇ ಮಾತೃವಿಯೋಗ, ತಂದೆ ಹುಚ್ಚನಂತಾಗಿದ್ದು ಬಾಲ್ಯದಲ್ಲಿ ಚಿಕ್ಕಪ್ಪ ಚಿಕ್ಕಮ್ಮನ ಆಶ್ರಯದಲ್ಲಿ ಬೆಳೆದವಳು, ಮೊದಮೊದಲು ಪ್ರೀತಿ ಮಮತೆ ಅಕ್ಕರೆಗಳನ್ನು ತೋರಿಸುತ್ತಿದ್ದ ಚಿಕ್ಕಮ್ಮ ತಾನು ತಾಯಿಯಾಗುವ ಸಂದರ್ಭದಲ್ಲಿ ಈಕೆಯ ಬಗ್ಗೆ ನಿರುತ್ಸಾಹ ಹೊಂದುತ್ತಾಳೆ. ಭದ್ರಿಗೆ ತನ್ನ ಮಗುವಿನ ಬಗ್ಗೆ ಹೆಚ್ಚು ಪ್ರೀತಿ, ಪ್ರೇಮ, ಹೊಂದುತ್ತಾ ಈಕೆಯನ್ನು ತನ್ನ ಮನೆಯಿಂದಲೇ ಹೊರದೂಡುವ ಆಲೋಚನೆ ಮಾಡುವುದು, ಈ ಬಗೆಯ ಪ್ರಯತ್ನಗಳು ಸಾಕಷ್ಟು ನಡೆಯುತ್ತವೆ. ಭದ್ರಿ ಪಾರ್ವತಿಯನ್ನು ನಿಂದಿಸುವುದು, ಮಾಟ ಮಾಡಿಸುವುದು, ಪೂಜಾರಪ್ಪನ ಬಳಿ ಕರೆದುಕೊಂಡು ಹೋಗಿ ಅಲ್ಲಿ ಮಂತ್ರ ಹಾಕಿಸುವುದು, ಕೆಂಪುಕೋಳಿಯನ್ನು ಕೊಯ್ದು ಬಲಿಕೊಡುವುದು, ಆತನ ಡಾಂಬಿಕತನ, ಚಿತ್ರಹಿಂಸೆ, ಬೆದರಿಕೆ "ಹೆಚ್ಗೆ ಮಾತಾಡದ್ರೆ ಕೆಂಡದಲ್ಲಿ ಸರಳು ಕಾಯ್ತಾದೆ, ತಂದು ನಿನ್ನ ತೊಡೆ ಮೇಲೆ ಬರಗುಡ ಹಾಕುದ್ರೆ ನಿನ್ನ ಕಥೆ ಮುಗ್ದೋಯ್ತು"[೧೬] ಪಾರ್ವತಿ, ಸ್ವತಃ

ಚಿಕ್ಕಮ್ಮಳೇ ನಿಂದಿಸುವ ಬಗೆ 'ಏನೇ ಅನಿಷ್ಟದವಳೇ, ನೀನು ಹುಟ್ಟಾಗ ನಿನ್ನ ತಾಯಿನೇ ತಿಂದ್ಕೊಂಡೆ: ಆಮೇಲೆ ನಿಮ್ಮಪ್ಪನ್ನ ಹುಚ್ಚು ಮಾಡಿ ಅಲ್ಲಿ ಇಲ್ಲಿ ಅನ್ನ ತಿನ್ಕೊಂಡು ಊರ್ ಬೀದೀಲಿ ಅಲೆಯುವಂಗೆ ಮಾಡ್ದೆ ಇದೂ ಸಾಲ್ದೆ ನನ್ನ ಮಾನ ಮರ್ಯಾದೆ ಕಳ್ದೆ..... ಈಗ ನನ್ನ ಮಗೂನ್ನ ತೊಳ್ದು ಮನೆಹಾಳ್ ಮಾಡ್ಬೇಕಂತ ಎಲ್ಲಿಗೆ ಎತ್ಕೋಂಡು ಹೊರಟಿದ್ದೆ.... ಬೊಗಳು' ಎಂದು ಹೆಮ್ಮಾರಿಯಂತೆ ಬಂದ ಭದ್ರಿ ಕೈಯಲ್ಲಿ ಕೆಂಪಗೆ ಕಾದ ಕಬ್ಬಿಣದ ಚೂರಿಯನ್ನು ತಂದು ಪಾರ್ವತಿಯ ತೊಡೆ ಮೇಲೆ ಇಟ್ಟು ಚುರ್ ಎನ್ನಿಸಿ ಬರೆ ಹಾಕಿಬಿಟ್ಟಳು. ಈ ಎಲ್ಲಾ ಸನ್ನಿವೇಶಗಳು ಘಟನೆಗಳು ಎಳೆ ವಯಸ್ಸಿನ ಮೇಲೆ ಸಾಕಷ್ಟು ಪರಿಣಾಮ ಬೀರಿ ಅದು ಜೀವನದುದ್ದಕ್ಕೂ ಬಾಧಿಸುವ ಚಿತ್ರಣಗಳು ಈ ಕಾದಂಬರಿಯಲ್ಲಿ ಚಿತ್ರಿತವಾಗಿವೆ.

ಅಡಿ ಟಿಪ್ಪಣಿ:-

೧. ತೈಲೂರು ವೆಂಕಟಕೃಷ್ಣ, 'ಅಗ್ನಿಕುಂಡ' ಭಾನುಪ್ರಕಾಶನ, ಮಂಡ್ಯ -೧೯೭೫ ಪುಟ-೨೦

೨. ಅದೇ.... ಪು..... ೨೧

೩. ಅದೇ.... ಪು.... ೨೫

೪. ಅದೇ.... ಪು..... ೨೯

೫. ಅದೇ.... ಪು..... ೮೨

೬. ಅದೇ.... ಪು..... ೯೨

೭. ಅದೇ.... ಪು..... ೧೦೦

೮. ಅದೇ.... ಪು..... ೭೫

೯. ಅದೇ.... ಪು..... ೧೫

೧೦. ಅದೇ.... ಪು..... ೪೦

೧೧. ಅದೇ.... ಪು..... ೧೩೦

೧೨. ಅದೇ.... ಪು..... ೧೩೧

೧೩. ತೈಲೂರು ವೆಂಕಟಕೃಷ್ಣ, 'ಪಾರ್ವತಿ' - ಶ್ರೀರಾಮ ಪ್ರಕಾಶನ, ಮಂಡ್ಯ - ೧೯೭೬ ಪು.೯

೧೪. ತೈಲೂರು ವೆಂಕಟಕೃಷ್ಣ, 'ಅಗ್ನಿಕುಂಡ' ಭಾನುಪ್ರಕಾಶನ, ಮಂಡ್ಯ -೧೯೭೫ ಪುಟ-೨೦

೧೫. ಅದೇ.... ಪು..... ೧೧೬

೧೬. ತೈಲೂರು ವೆಂಕಟಕೃಷ್ಣ, 'ಪಾರ್ವತಿ', ಶ್ರೀರಾಮ ಪ್ರಕಾಶನ, ಮಂಡ್ಯ, ೧೯೭೬ ಪು.೨೨

(iii) ಪಾತ್ರಚಿತ್ರಣ :

ಬರಗಾಲದ ಭೀಕರತೆಯಲ್ಲಿ ಬೆಂದು ಬಸವಳಿದ ಹಳ್ಳಿಯ ದಾರುಣ ಚಿತ್ರಣವನ್ನು ಕಟ್ಟಿಕೊಡುವ ಕಾದಂಬರಿ 'ಅಗ್ನಿಕುಂಡ'. ಅಲ್ಲಿಯ ಜನಜೀವನದ ಅವಸ್ಥೆ ನಮ್ಮ ಕಣ್ಣಮುಂದೆ ಹಾದುಹೋಗುತ್ತದೆ. ಇವರ ಕಾದಂಬರಿಗಳಲ್ಲಿ ಹಲವಾರು ಪಾತ್ರಗಳು ಬಂದು ಹೋಗುತ್ತವೆ, ಆದರೆ ಒಬ್ಬ ವ್ಯಕ್ತಿಯ ಕೌಟುಂಬಿಕ ವಿವರಗಳೂ ಹೆಚ್ಚಾಗಿ ದೊರೆಯುವುದಿಲ್ಲ. ಕಾದಂಬರಿ ಹೆಸರೆ ಸೂಚಿಸುವಂತೆ 'ಅಗ್ನಿಕುಂಡ' ನಿಜಕ್ಕೂ ಹಳ್ಳಿ ಜನ ಅಗ್ನಿಕುಂಡದಲ್ಲಿ ಬಿದ್ದು ಬೆಂದಕಥೆ, ಇಲ್ಲಿಯೂ ಜನರ ಜೀವನದ ಗ್ರಾಮೀಣ ಬದುಕಿನ ನೈಜ ಚಿತ್ರಣದೊಂದಿಗೆ ಜಾಗತಿಕ ಪ್ರಭಾವ ಮುದ್ರೆಗಳನ್ನು ಹಳ್ಳಿಗಳು ಮೈಗೂಡಿಸಿಕೊಂಡು ಅತಂತ್ರ ಸ್ಥಿತಿಯನ್ನು ತಲುಪಿರುವ ಚಿತ್ರಣವೇ ಕಾದಂಬರಿಯ ವಸ್ತುವಾಗಿದೆ. ಕಾದಂಬರಿಯ ಕ್ರಿಯೆಯ ಬಹುಭಾಗ 'ಹೊನ್ನಾಳಿ' ಎಂಬ ಒಂದು ಗ್ರಾಮದಲ್ಲಿ ನಡೆಯುತ್ತದೆ. ಈ ಕಾದಂಬರಿಯಲ್ಲಿ ಒಬ್ಬ ಕೇಂದ್ರ ವ್ಯಕ್ತಿಯಿಲ್ಲ, ಇಲ್ಲಿ ನಾಯಕ-ನಾಯಕಿಯ ಪಾತ್ರಗಳಿಲ್ಲ, ಪ್ರಮುಖ ಪಾತ್ರಗಳು ಇರಬಹುದಾದರೂ ಅವು ಜೀವನದ ದೃಷ್ಟಿಯಿಂದ ಮಾತ್ರ ಪ್ರಮುಖವಾಗಿವೆ. ಹೊನ್ನಾಳಿಯ ಜನಸಮೂಹವೇ ಅಲ್ಲಿನ ಬದುಕಿನ ಬವಣೆಯೆ ಈ ಕಾದಂಬರಿಯ ನಾಯಕನೆಂದು ಹೇಳಬಹುದು. ಆದ್ದರಿಂದ ಪಾತ್ರಗಳು ಸಾಕಷ್ಟು ವೈವಿಧ್ಯವನ್ನು ಪಡೆದಿದ್ದರೂ ಅವುಗಳಾವುವು ಪ್ರತ್ಯೇಕವಾಗಿ ನಿಲ್ಲದೆ 'ಹೊನ್ನಾಳಿ'ಯ ನೆಲದೊಂದಿಗೆ ಬೇರುಬಿಟ್ಟ ಪಾತ್ರಗಳಾಗಿವೆ.

ವೆಂಕಟಕೃಷ್ಣರವರ ಅಗ್ನಿಕುಂಡ, ಸಮ್ಮಿಳನ, ಪಾರ್ವತಿ ಇವುಗಳು ಒಂದು ಸಮೃದ್ಧಜಗತ್ತು, ಇಲ್ಲಿ ಸ್ವಂತ ಹೊನ್ನಾಳಿಯವರು, ಕೊಳಗೇರಿಯವರು, ಗೋವಿನಹಳ್ಳಿಯವರು ಮತ್ತು ಹೊರಗಿನಿಂದ ಬಂದವರು ಇದ್ದಾರೆ. ಹಾಗಾಗಿ ಇಲ್ಲಿ ಬೇಸಾಯಮಾಡುವ ರೈತರು, ಕೆಲಸಮಾಡುವ ಆಳುಗಳು, ಹೊರಗಿನ ರೈತರು, ಗೌಡರು, ಅಸ್ಪೃಶ್ಯರು......ಹೀಗೆ ಸಮಾಜದ ವಿವಿಧ ಸ್ತರಗಳಿಗೆ ಸೇರಿದ ಜನರಿಂದ ತುಂಬಿದ ವಿಶಾಲವಾದ ಪ್ರಪಂಚ ಇದಾಗಿದೆ.

ಪ್ರೀತಿ, ದಯೆ, ಕರುಣೆ, ಅಭಿಮಾನ, ಸಹಕಾರ ಮನೋಭಾವವನ್ನು ಹೊಂದಿರುವ ಒಂದು ಜೀವಂತ ಸಮಾಜವೇ/ವ್ಯಕ್ತಿಯೇ ಈ ಕಥೆಯ ನಾಯಕ ಪಾತ್ರವನ್ನು ವಹಿಸುವುದರಿಂದ ಪಾತ್ರರಚನೆಯಲ್ಲಿ ವೈವಿಧ್ಯವಾಗಲಿ, ಬೆಳವಣಿಗೆಯಾಗಲಿ ಕಂಡುಬರುವುದಿಲ್ಲ. ಇಲ್ಲಿ ವ್ಯಕ್ತಿಗಳ ಬಹುಮುಖ ಚಿತ್ರಣಕ್ಕೆ ಅವಕಾಶವೇ ಇಲ್ಲ, ಆದರೂ ಇಲ್ಲಿಯ ಪಾತ್ರಗಳ ಜೀವಂತತನಕ್ಕಾಗಲಿ, ಮಾನವೀಯತೆಗಾಗಲಿ ಎಲ್ಲಿಯೂ ಚ್ಯುತಿ ಬಂದಿಲ್ಲವೆನ್ನಬಹುದು.

ಕಾದಂಬರಿಯಲ್ಲಿನ ಕೆಲವು ಪಾತ್ರಗಳು ಕೊನೆಯಲ್ಲಿ ದುರಂತ ಕಂಡರೂ ಕೆಲವು ಪಾತ್ರಗಳು ಪರಿವರ್ತನೆಯನ್ನು ಹೊಂದುವುದು ತಮ್ಮ ಜೀವನ ಮುಕ್ತಾಯವಾಗುವ ಕೊನೆಯ ಕ್ಷಣದಲ್ಲಿ, ಅಂದರೆ ಕಾದಂಬರಿಕಾರರು ಆ ವ್ಯಕ್ತಿಯ ಅಂತ್ಯದ ಮುನ್ಸೂಚನೆಯನ್ನು ಮನಃಪರಿವರ್ತನೆಯ/ಆದರ್ಶಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ತಂದಿದ್ದಾರೆ. ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ, ಗಾಂಧೀಜಿಯವರ 'ಸರಳಜೀವನ ಉದಾತ್ತವಿಚಾರ' ಎಂಬ ತತ್ವಗಳನ್ನು ಅಳವಡಿಸಿಕೊಂಡಾಗ, ಹಳ್ಳಿಗಳ ಉದ್ಧಾರ ಸಾಧ್ಯ ಎಂಬ ಅಂಶಗಳು ಪಾತ್ರಗಳಲ್ಲಿ ಬಿಂಬಿತವಾಗಿರುವುದನ್ನು ಗುರುತಿಸಬಹುದು.

ಈ ಮೊದಲೇ ಹೇಳಿದಂತೆ ಕಾದಂಬರಿಯಲ್ಲಿ ಹತ್ತಾರು ಪಾತ್ರಗಳು ಹಾಸುಹೊಕ್ಕಾಗಿ ಜೀವತುಂಬಿ ಬಂದಿವೆ. ಇವು ಒಂದಲ್ಲ, ಎರಡಲ್ಲ, ಅನೇಕ ಪಾತ್ರಗಳು ಪಯಣಿಸಿದತ್ತ ಕಥೆಯೂ ಸರಿಯುತ್ತದೆ. ಕಥೆಗೂ ಪಾತ್ರಗಳಿಗೆ ಅಭಿನ್ನ ಸಂಬಂಧವಿದೆ. ಪಾತ್ರಗಳಿಲ್ಲದೆ ಕಥೆ ನಡೆಯಲು ಸಾಧ್ಯವೇ ಇಲ್ಲ, ಮಾನವ ಸ್ವಭಾವದ ಬಗೆಗಿನ ತೀವ್ರವಾದ ಆಸಕ್ತಿ, ಮನುಷ್ಯ ಸಂಬಂಧದ ಸ್ಥಾಪನೆ, ಪಾತ್ರಪ್ರಜ್ಞೆಯ ಹಿಂದೆ ದುಡಿಯುವ ಪ್ರಾಥಮಿಕ ಶಕ್ತಿ, ಜೀವನದ ಅನುಭವಗಳ ವೈಶಾಲ್ಯ, ಧ್ಯೇಯನಿಷ್ಠೆ, ಸೂಕ್ಷ್ಮ ನಿರೀಕ್ಷಣಾಶಕ್ತಿ ಲೋಕದ ವಿಷಯಕ್ಕಿರುವ ಸಹಾನುಭೂತಿ, ಚಿತ್ರಣಶಕ್ತಿ ಇವೆಲ್ಲವೂ ಒಟ್ಟುಗೂಡಿ ಪಾತ್ರದೃಷ್ಟಿಯನ್ನು ಪೂರ್ಣಗೊಳಿಸುತ್ತವೆ. ವ್ಯಕ್ತಿಗೂ ಸಮಾಜಕ್ಕೂ ಇರುವ ಮಾನಸಿಕ ಸಂಬಂಧ ವ್ಯಕ್ತಿ–ವ್ಯಕ್ತಿಯ ಸಂಬಂಧಗಳು, ಒಬ್ಬನೇ ವ್ಯಕ್ತಿಯಲ್ಲಿ ಸಂಭವಿಸುವ ಮಾನಸಿಕ ಕ್ಷೋಭೆಗಳು ಇವುಗಳ ಆಳವಾದ ಅರಿವು ಕಾದಂಬರಿಕಾರನ ಪಾತ್ರಪ್ರಜ್ಞೆಗೆ ಅಧಿಕತೆಯನ್ನು ತಂದುಕೊಡುತ್ತವೆ. ವೆಂಕಟಕೃಷ್ಣರವರ ಜೀವನಾನುಭವ ಈ ಕಾದಂಬರಿಯ ತಳಹದಿಯಾಗಿದೆ. ಕೃಷಿಕ ಸಮುದಾಯದವರಾಗಿದ್ದ ಇವರು ಎಷ್ಟೋ ಜನರೊಡನೆ ತಾವು ಹೊಂದಿದ್ದ ಸ್ನೇಹಮಯ ಬದುಕು, ಗ್ರಾಮೀಣರ ಬದುಕು, ಅವರ ಸಾಹಿತ್ಯ ನಿರ್ಮಿತಿಗೆ ಅವಶ್ಯಕವಾದ ಹದವನ್ನು ತಂದುಕೊಟ್ಟಿವೆ. ಜೀವನವನ್ನು ಸಮಗ್ರವಾಗಿ ನೋಡುವ ಧೀರದೃಷ್ಟಿ, ದಿನನಿತ್ಯದ ಅನೇಕ ಸಂಗತಿಗಳ ನಡುವೆ ಇರಬಹುದಾದ ಸಂಬಂಧವನ್ನು ನೋಡುವ ಕುತೂಹಲ, ಬದುಕಿನ ಒಡಲಲ್ಲಿಯೇ ಹುಟ್ಟಿ, ಬದುಕನ್ನೇ ನುಂಗಲು ಹವಣಿಸುವ ಸಮಸ್ಯೆಗಳ ರಹಸ್ಯವನ್ನು ಅರಿಯುವ, ಹಳ್ಳಿಯ ಪುನರುತ್ಥಾನಕ್ಕೆ ಗಾಂಧಿತತ್ವ ಚಿಂತನೆಗಳ ಪ್ರತಿಪಾದನೆ ಈ ಕೃತಿಗೆ ಪ್ರೇರಕ ಶಕ್ತಿಯಾಗಿದೆ, ಅದಕ್ಕನುಗುಣವಾಗಿ ಈ ಕಾದಂಬರಿ ರಚಿತವಾಗಿದೆ.

ಸಂಕಷ್ಟಕಾಲದಲ್ಲಿ, ಕ್ಲಿಷ್ಟ ಸನ್ನಿವೇಶಗಳಲ್ಲಿ ಮನುಷ್ಯ ಸಂಬಂಧಗಳು ಹೇಗೆ

ಸ್ಥಾಪಿತವಾಗುತ್ತವೆ ಹಾಗೂ ಅವಸಾನಗೊಳ್ಳುತ್ತವೆ ಎಂಬ ಅಂಶಗಳು ಈ ಕಾದಂಬರಿಯಲ್ಲಿ ಬಿಂಬಿತವಾಗಿದ್ದು ಮನುಷ್ಯ ಸಂಬಂಧಸ್ಥಾಪನೆ ಮತ್ತು ಬೆಳೆಸುವ ಪ್ರಕ್ರಿಯೆಗೆ ಹನುಮ ನಾಯಕನ ಪಾತ್ರ ಸಾಕ್ಷಿಯಾದರೆ, ಮನುಷ್ಯ ಸಂಬಂಧದ ಅವನತಿಗೆ ಬೊಮ್ಮ ಸಾಕ್ಷಿಯಾಗುವುದನ್ನು ಈ ಕಾದಂಬರಿಯಲ್ಲಿ ನೋಡಬಹುದಾಗಿದೆ. ಕಾದಂಬರಿಯ ಬಹುಪಾಲು ಪಾತ್ರಗಳು ಬೆಂಕಿಯ ಹಳವಂಡದಲ್ಲಿ ಮುಳುಗೇಳುವುದರಿಂದ ಈ ಕಾದಂಬರಿಗೆ ಅಗ್ನಿಕುಂಡ ಎಂದು ಹೆಸರಿಸಿರುವುದು ಸೂಕ್ತವಾಗಿದೆ.

ಅಧ್ಯಯನ ಉದ್ದೇಶದಿಂದ ಇಲ್ಲಿನ ಪಾತ್ರಗಳನ್ನು ಪುರುಷ ಪಾತ್ರಗಳು ಮತ್ತು ಸ್ತ್ರೀ ಪಾತ್ರಗಳು ಎಂದು ವಿಭಾಗಿಸಿಕೊಂಡು ಅವರಲ್ಲಿ ಕೆಲವು ಪಾತ್ರಗಳನ್ನು ಚಿತ್ರಿಸಲಾಗಿದೆ.

ಬೊಮ್ಮನಾಯಕ :–

'ಅಗ್ನಿಕುಂಡ' ಕಾದಂಬರಿಯಲ್ಲಿ ಬಹುಶಃ ಕೇಂದ್ರವ್ಯಕ್ತಿಯಾಗಿ ನಿಲ್ಲಬಲ್ಲ ಯೋಗ್ಯತೆ ಬೊಮ್ಮ ನಾಯಕರಲ್ಲಿ ಮಾತ್ರ ಕಂಡುಬರುತ್ತದೆ. ಅವರ ಜೀವನದ ಏರಿಳಿತದಲ್ಲಿ ಕಾದಂಬರಿಯ ಅರ್ಥ ಹುದುಗಿದೆ. ಹೊನ್ನಾಳಿ ಗ್ರಾಮದ ಬಗ್ಗೆ ಅಪಾರವಾದ ಪ್ರೀತಿ ಅಭಿಮಾನವಿರುವ ವ್ಯಕ್ತಿ, ತಮ್ಮೂರಿಗೆ ಬಂದೆರಗಿದ, ಬಂದೊದಗಿರುವ ಸಂಕಟವನ್ನು(ಬರಗಾಲದ ಪರಿಸ್ಥಿತಿ) ಹೇಗಾದರೂ ಮಾಡಿ ನಿವಾರಿಸಬೇಕೆಂಬ ತವಕವುಳ್ಳವರಾಗಿದ್ದಾರೆ. ದೇವರಲ್ಲಿ, ಪರಂಪರೆಯಲ್ಲಿ ನಂಬಿಕೆಯಿರುವ ಧಾರ್ಮಿಕ ಮನೋಧರ್ಮದ ವ್ಯಕ್ತಿ, ಕಾದಂಬರಿಯ ಪ್ರಾರಂಭದಿಂದ, ಅಂತ್ಯಭಾಗದವರೆಗೆ ಅವರು ಊರಿನ ಪ್ರಮುಖನಾಗಿದ್ದು, ತಾಳ್ಮೆ ಹಾಗೂ ಯೋಚನಾಬದ್ಧ ಮನುಷ್ಯನಾಗಿದ್ದು ಊರಿನ ಜನತೆಯ ದುಃಖ ದುಮ್ಮಾನಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಮನೋಭಾವವುಳ್ಳವರಾಗಿದ್ದು ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ.

ಹೊನ್ನಾಳಿ ಗ್ರಾಮದಲ್ಲಿ ಬಲುಗಟ್ಟಿಗ ಎನಿಸಿದ್ದ ನಾಡಗೌಡ ಬೊಮ್ಮನಾಯಕ ಈತ ಮೂರು ತಲೆಮಾರಿನ ಪರಿಸ್ಥಿತಿಯನ್ನು ಅರಿತವ, ಬೊಮ್ಮನಾಯಕನ ಹೃದಯಾಂತರಾಳದ ಬಯಕೆ ಇಲ್ಲಿ ಚಿತ್ರಿತವಾಗಿದೆ "ಬುಡ್ತುಅನ್ನು ಬರ ರಾಕ್ಷಸನ್ನ ಓಡ್ಸಿ, ಮಳ್ರಾಯ ಕರುಣಿಸ್ಬುಟ್ರೆ ಹೋಗಿದ್ದೋರು ವಾಪಾಸ್ಸಾದಾರು.... ದ್ಯಾವ್ರ್‌ಗೆ ತುಪ್ಪದ ದೀಪ ಹಚ್ಚೇನು, ಹೇ ವರುಣದ್ಯಾವಪ್ಪ ಇವತ್ ಸಂದೇ ಹೊತ್ಗೆ ಮಳೆಸುರ್ಸಪ್ಪ ನಿನ್ ಹೆಸ್ರು ಹೇಳ್ಕಂಡು ಜೀವಸೆಲೆ ಬದಿಕತವೆ". [೧]

ಪ್ರಕೃತಿಯನ್ನು ಪ್ರೀತಿಸುವ ಜಾಯಮಾನ, ಅದರ ರಕ್ಷಣೆಯ ಬಗ್ಗೆ

ಯೋಚಿಸುವ ಉದಾತ್ತ ಭಾವನೆ ಮತ್ತು ಗಿಡಮರಗಳನ್ನು ಪೋಷಿಸುವ ಗುಣವುಳ್ಳ ಬೊಮ್ಮನಾಯಕನ ಚಿತ್ರಣವನ್ನು ಈ ಕಾದಂಬರಿಯಲ್ಲಿ ನಾವು ಕಾಣಬಹುದಾಗಿದೆ. "ನೋಡು ಮಗಾ, ಇನ್ನೇನು ವಸಂತಕಾಲ ಬರೋಹೊತ್ತು, ಮರದಲ್ಲಿ ಹಸ್ರು ಚಿಗುರುಕಾಣ್ಬೇಕು, ಉಗಾದಿ ಹಬ್ಬ ಮಾಡ್ಬೇಕು, ಮಾವಿನ ತೋಪಲ್ಲಿ ಗಿಣಿಗಳ ಹಿಂಡು ಸೇರ್ಕಂಡು ಕಳಿತ ಹಣ್ಣುಗಳ ಕುಕ್ಕಿ ತಿಂತಿದ್ದೋ......ಮುಂಗಾರು ಮಳೆ ಮುಂಗಾಲ್ ಹಾಕ್ಕೊಂಡು ಬತ್ತಿತ್ತು"[೨]. ಇಲ್ಲಿ ಬೊಮ್ಮನಾಯಕನ ಪ್ರಕೃತಿಯ ಕಾಳಜಿಯನ್ನು ಅರಿಯಬಹುದು, ಇದರ ಜೊತೆಗೆ ಪರಿಸರನಾಶ ಮತ್ತು ಪರಿಸರನಾಶದ ಬಗೆಗಿನ ವಿರೋಧವನ್ನು ಒಮ್ಮೆಗೆ ಹೊರಹೊಮ್ಮಿಸುವಂತಹ ಚಿತ್ರಣವನ್ನು ಇವರ ಕಾದಂಬರಿಯಲ್ಲಿ ಅರಿಯಬಹುದಾಗಿದೆ.

ಈ ಪರಿಸರ ನಾಶವನ್ನು ತಡೆಗಟ್ಟಲು ಲೇಖಕರು ಬೊಮ್ಮನಾಯಕನ ಪಾತ್ರದಲ್ಲಿ ಜೀವತುಂಬಿರುವುದು ಕಂಡುಬರುತ್ತದೆ, "ಥತ್ ಅವ್ರು ಎಕ್ಕುಟ್ಹೋಗ....ಬೋರೇದ್ಯಾವ್ರ ಬಂಡೇನಲ್ಲ ಹೊಡದಾಕುದ್ರು, ಬೆಣ್ಣೆಕರಗ್ದಂಗೆ ಕರಗೋಯ್ತು! ಎಂತೆಂಥ ಮರಗಳಿದ್ದೋ!! ಬೊಳ್ಸಾಕುದ್ರು, ದ್ಯಾವರು ಮಾಡಿದ್ದೆಲ್ಲಾ ಹಾಳ್ ಮಾಡುದ್ರು, ಮಳೆ ಬಾ ಅಂದ್ರೆ ಎಂಗ್ ಬತ್ತೈತೆ? ಬೆಟ್ಟಗುಡ್ಡ ಕಾಡು ಉಳೀಲಿ ಅಂತ ದ್ಯಾವರ್ನ ಕುರುಸೂದ್ರು ಅದ್ನೂ ಬುಡಾಕಿಲ್ಲ ಅಂತಾರೆ ದರಿದ್ರಜನ...!"[೩]. ಆ ಸಂದರ್ಭದಲ್ಲಿ ಈ ವ್ಯಕ್ತಿಯಿಂದ ಹೊರಡಿಸುವ 'ಅಣುರೇಣು, ತೃಣಕಾಷ್ಟೆಗಳಲ್ಲಿ ಭಗವಂತನಿಗಿರುವ ನಂಬಿಕೆ'[೪]ಯನ್ನು ಪ್ರತಿಪಾದಿಸುವುದು, ಈ ಕಾದಂಬರಿಯಲ್ಲಿ ದಾರ್ಶನಿಕ ಚಿಂತನೆಯನ್ನು ಹರಿಸಿರುವುದು ಕಂಡುಬರುತ್ತದೆ.

ಬೊಮ್ಮನಾಯಕ ದೇವರ ಬಗೆಗಿನ ಅಪಾರವಾದ ಭಕ್ತಿ, ಕಷ್ಟಕಾಲದಲ್ಲಿ ನೆರವಾಗುವ ಜಾಯಮಾನದ ಗುಣವುಳ್ಳ ವ್ಯಕ್ತಿತ್ವ ಹೊಂದಿದವನು, ಕಷ್ಟಕಾಲದಲ್ಲಿ ನಂಜಿಯನ್ನು ಬಿಟ್ಟು ಎಲ್ಲರೂ ವಲಸೆ ಹೊರಟ ಸಂದರ್ಭದಲ್ಲಿ ಆಕೆಗೆ ಧೈರ್ಯತುಂಬಿ ತಮ್ಮ ಮನೆಯಲ್ಲಿ ಆಶ್ರಯ ನೀಡಿದ ಪ್ರಸಂಗ ಈ ಕಾದಂಬರಿಯಲ್ಲಿ ಚಿತ್ರಿತವಾಗಿದೆ. 'ಹೋ! ನೀನಾ ನಂಜಿ, ಇದ್ಯಾಕೆ ಈ ಬಿಸಿಲ್ನಲ್ಲಿ ಇಲ್ಬಂದು ಅಳ್ತಾ ಕುಂತಿದ್ದೀಯಾ?' 'ಅನ್ನದ್ಯಾವ್ರ ಮುಂದೆ ಪಿತೃದ್ಯಾವರೆಲ್ಲಿ? ಹೆತ್ತವ್ವನ್ನೇ ಬಿಟ್ಟು ರಾತ್ರೋರಾತ್ರಿ ಗಂಟು ಮೂಟೆ ಕಟ್ಕಂಡು ಒಂಟೋಗವ್ನಲ್ಲ' [೫]..... ಈ ಮುದ್ಕೀಗೆ ದೆಸೆ ಯಾರು? ಇದಕ್ಕೆ ನಂಜಿ ವಿರಕ್ತ ಮಾತುಗಳನ್ನಾಡಿದರೂ ಕಷ್ಟದಲ್ಲಿ ಕೈಬಿಡುವ ಜಾಯಮಾನವಲ್ಲ ಬೊಮ್ಮ ನಾಯಕನದು. 'ಎಲ್ಲಾರ ಉಂಟಾ ನಂಜಿ?! ಕಸ್ಟದಲ್ಲಿ ಬಿದ್ದಿರೋರ್ನ ಕೇಳೋದಿರ್ಲಿ, ಕಣ್ಣಲ್ಲಿ ಕಂಡೂ ಅಂಗೇ ಕೈಬಿಟ್ಟು

ಬೆನ್ ತಿರುಗ್ಸಿ ಹೋಗೋ ವಂಸದಲ್ಲಿ ಹುಟ್ಟಿಲ್ಲ, ನಿಂಗೊತ್ತಿಲ್ವ ನಮ್ಮಟ್ಟಿ ವಿಸಯ"[5]. ಹೀಗೆ ನಂಜಿಗೆ ಬದುಕುವ ಆಸೆಯನ್ನು ಹುಟ್ಟಿಸಿ ತನ್ನ ಹಟ್ಟಿಗೆ ಅಹ್ವಾನ ನೀಡಿದ ಬೊಮ್ಮನಾಯಕನ ಚಿತ್ರಣವನ್ನು ಲೇಖಕರು ಈ ಕಾದಂಬರಿಯಲ್ಲಿ ಪ್ರಸ್ತಾಪಿಸಿದ್ದಾರೆ.

ನಾಯಕನ ಧರ್ಮನಿಷ್ಠೆಯ ಮಾತುಗಳು ಮತ್ತು ಮನುಷ್ಯನ ಮನೋಗುಣಗಳು ಬೊಮ್ಮನಾಯಕನಲ್ಲಿ ಸಮ್ಮಿಳಿತವಾಗಿದ್ದವು ಎಂಬ ಅಂಶಗಳನ್ನು ಈ ಕಾದಂಬರಿಯಲ್ಲಿ ನೋಡಬಹುದಾಗಿದೆ. 'ಎಲ್ಲಾರಾ ಉಂಟಾಮಗಾ! ಗುಡಿಗೆ ದೀಪ ಹಚ್ದೆ ನಮ್ಮ ಹಿರೇರ್‍ಗೆ ನಾನೇ ಮಸಿ ಬಳೀಲಾ?' 'ಮಗಾ ಏನಾರ ಮಾಡಿ ಈ ಜೀವ ಉಳಿಸಬೇಕಲ್ಲ' 'ಗೋವುಗಳ್ಗೆ ಮೋಸ ಮಾಡ್ಬೇಡಿ ಕಂಡ್ರಲ, ದ್ಯಾವ್ರು ಒಳ್ಳೇದ್ ಮಾಡಾಕಿಲ್ಲ, ಮೂಕಬಸವಣ್ಣ ಎಲ್ಲಾರ ಹುಡ್ಕಿ ಹುಲ್ ತಂದಾಕಿ'. 'ಯಾವ ಪಾಪದ ಫಲ ಇದೆಲ್ಲ? ಈ ಪಾಪದ ಉಗಮವಾದರೂ ಎಲ್ಲಿದೆ ಅಥವಾ ಜೀವನವನ್ನು ರೂಪಿಸುವ ಹೊಣೆಯೇ ನಮ್ಮದಲ್ಲವೇನೋ? ಹಾಗಿದ್ದರೆ ಅದನ್ನು ರೂಪಿಸುವ ಶಕ್ತಿಯಾವುದು?....... ಹೊನ್ನಾಳಿಯ ನೆಲದ ಸತ್ವ ತೀರಿಹೋಗಿರಬೇಕು'. ಸಾಗುಮಾಡದ ಹೊಲದಲ್ಲಿ ಗಿಡಗಂಟಿ ಬೆಳೆದರೆ ತಪ್ಪೇನು? ಹೊನ್ನಾಳಿಯ ನೆಲ ನಿತ್ರಾಣವಾಗಿದೆಯೇನೋ? ಇಲ್ಲದಿದ್ದರೆ ಈ ರೀತಿಯ ಪ್ರಕೃತಿಯೇ ಅಥವಾ ಜೀವನದಲ್ಲಿ ಪಾಪ ಅಪರಿಹಾರ್ಯವೇ?, "ಸ್ವರ್ಗದಂಗಿದ್ದ ಹಳ್ಳಿ ಇಂಗ್ಯಾಕಾಯ್ತು, ಮಾಡೋ ಹಬ್ಬದಲ್ಲಿ ಏನಾರಾ ತಪ್ಪಾಯಿತಾ? ದ್ಯಾವರ್‍ನ ಸರಿಯಾಗಿ ನಡಸ್ಕಳ್ಳಿಲ್ವಾ ತೇರು ಎಳಿವಾಗ ಏನಾರ ಲೋಪಆಯ್ತಾ"[6]. ಇತ್ತೀಚೆಗೆ ಊರು ಮೊದ್ಲಂಗಿಲ್ಲ ಜೂಜು, ಕುಡ್ತ, ರಾಜಕೀಯ ಏನೆಲ್ಲಾ ನಡೀತೈತೆ, ಊರಿನ ರಂಗವನ್ನು ಹಾದುಹೊಗಬೇಕಿದ್ರೆ ಮೆಟ್ನ ಕೈಯಲ್ಲಿ ಹಿಡ್ಕಂಡು ಹೋಗೋರು, ಹೆತ್ತ ಅವ್ವ ಅಪ್ಪನ್ನೇ ಮರೆಯೋ ಬುದ್ಧಿ ಹೆಚ್ಚಾಗೈತೆ. ಆದ್ರೂ ಎಲ್ಲ ವಡಕಲು ಸಂಸಾರ. ಹೀಗೆ ಆಲೋಚನೆ ಮಾಡುವ ಪ್ರವೃತ್ತಿಯ ಮನಸ್ಸುಗಳು ಈ ಕಾದಂಬರಿಯಲ್ಲಿ ಮಿಳಿತವಾಗಿರುವುದನ್ನು ಕಾಣಬಹುದಾಗಿದೆ.

ಜೀವಮಾನದ ಕೊನೆಯವರೆಗೂ ಹೊನ್ನಾಳಿ ಗ್ರಾಮದ ಉದ್ಧಾರಕ್ಕೆ, ಒಳಿತಿಗೆ ಶ್ರಮಪಡುವ ಬೊಮ್ಮನಾಯಕರು ಬರಗಾಲದ ಪರಿಸ್ಥಿತಿಯ ಭೀಕರತೆಯ ಸುಳಿಯಲ್ಲಿ ಸಿಲುಕಿ ಕೊನೆಗೆ ತಾನು ನರಳುವ ಚಿತ್ರಣ ಮತ್ತು ಹಳ್ಳಿಯ ಪ್ರಾಚೀನತೆಯ ಪರಂಪರೆಯಾಗಿ ಹಿರಿಯ ಅಜ್ಜನ ಪಾತ್ರ ಸಾಕ್ಷಿಯಾಗಿರುವುದು ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ಹನುಮನಾಯಕ :-

ಮನುಷ್ಯ ಸಂಬಂಧ ಸ್ಥಾಪನೆಯ ಪ್ರತೀಕವಾಗಿ 'ಹನುಮನಾಯಕ'ನ

ಪಾತ್ರವನ್ನು ಚಿತ್ರಿಸಲಾಗಿದೆ. ಹನುಮನಾಯಕ ಬೊಮ್ಮನಾಯಕನ ಹಿರಿಯ ಮಗ ಬಹುಶಃ ಬೊಮ್ಮನಾಯಕನ ನಂತರ ಮನೆಯ ಜವಾಬ್ದಾರಿಯನ್ನು ನಿಭಾಯಿಸಲು ಪ್ರಮುಖ ಜವಾಬ್ದಾರಿ ಹೊತ್ತವ. 'ಮನೆಗೆ ಹಿರಿಯ ಮಗನಾಗಿ ಹುಟ್ಟಬಾರದು, ಸಭೆಗೆ ಅಧ್ಯಕ್ಷನಾಗಬಾರದು' ಎಂಬ ಗಾದೆಯಂತೆ ಈ ಕಾದಂಬರಿಯಲ್ಲಿ ಹನುಮನಾಯಕನ ಪಾತ್ರ ಬರಗಾಲದ ಪ್ರತೀಕದಲ್ಲಿ ಜೀವನವನ್ನು ಸಮರ್ಥವಾಗಿ ನಿಭಾಯಿಸಲು ವಿಪರ್ಯಾಸಪಡುವ ಚಿತ್ರಣ ಚಿತ್ರಿತವಾಗಿರುವುದನ್ನು ನಾವು ಗಮನಿಸಬಹುದಾಗಿದೆ.

ಹೊನ್ನಾಳಿ ಗ್ರಾಮಕ್ಕೆ ಸಿಡಿಲಬ್ಬರದಂತೆ ಬಂದೆರಗಿದ ಬರಗಾಲದ ತೀವ್ರತೆಯಲ್ಲಿ ಬದುಕನ್ನು ನಡೆಸುವುದು ದುರ್ಲಭ, ಇಂತಹ ಸಂದರ್ಭದಲ್ಲಿ ಕುಟುಂಬದ ಹಿರಿಯ ಮಗನಾಗಿ ಎಲ್ಲಾ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಂಡವನು, ಕೈಯಲ್ಲಿ ಸಾಕಷ್ಟು ಹಣವಿಲ್ಲದಿದ್ದರೂ ಒಳ್ಳೆಯ ಮನಸ್ಸುಳ್ಳವನು, ತಂದೆಯ ಮಾತಿಗೆ ಎದುರಾಗಿ ನುಡಿದವನಲ್ಲ, ಮಾತಿನಲ್ಲಿ ವಿಧೇಯತೆ ಇರುತ್ತಿತ್ತು, ಗೋವುಗಳಿಗೆ ಮೇವು ತರುವ ವಿಚಾರದಲ್ಲಿ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ತಂದೆಗೆ ಅನಿವಾರ್ಯವಾಗಿ ಉತ್ತರಿಸಬೇಕಾದಾಗ ಕೋಪಗೊಳ್ಳದೆ 'ನಾಳೆ ಏನಾರ ಮಾಡಿ ಎಲ್ಲಿಂದಾದ್ರು ತತ್ತೀನಿ? ಕಣಪ್ಪಯ್ಯ, ಇವತ್ತಿಗೆಂಗೋ ಸೌರಸ್ಕಳ್ಳಿ'[೮] ಎಂಬ ವಿಧೇಯತೆಯ ಅಂಶವನ್ನು ಲೇಖಕರು ಈ ಪಾತ್ರದಲ್ಲಿ ಚಿತ್ರಿಸಿದ್ದಾರೆ.

ಕಾಲಬದಲಾದಂತೆ ಶ್ರೀಮಂತಿಕೆಯು ಬೊಮ್ಮನಾಯಕರ ಕುಟುಂಬವನ್ನು ಕೈಬಿಟ್ಟಮೇಲೆ ಹನುಮನಾಯಕ ಅಸಹಾಯಕನಾಗುತ್ತಾನೆ. ವಿಧಿಯಿಲ್ಲದೆ ಸಂಸಾರವನ್ನು ತೂಗಿಸಲು ಮನೆಯಲ್ಲಿದ್ದ ವಸ್ತುಗಳನ್ನು ಮಾರಾಟಕ್ಕೆ ಮುಂದಾದಾಗ ತಂದೆಯ ವಿರೋಧದ ನಡುವೆ ತಾಯಿಗೆ ಪರಿಸ್ಥಿತಿಯನ್ನು ಅರ್ಥೈಸಿ ವಸ್ತುಗಳನ್ನು ಮಾರಿ ಆಹಾರ ಪದಾರ್ಥಗಳನ್ನು ತಂದು 'ಆನೆಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎಂಬಂತೆ ಪರಿಸ್ಥಿತಿ ನಿಭಾಯಿಸುತ್ತಾನೆ. ಪರಿಸ್ಥಿತಿ ಬಿಗಡಾಯಿಸಿದ ಸಂದರ್ಭದಲ್ಲಿ ವ್ಯಕ್ತಿಗೆ ತುರ್ತು ಹಣದ ಅವಶ್ಯಕತೆ ಬೇಕಾಗುತ್ತದೆ. ಹಾಗಾಗಿ ವ್ಯಕ್ತಿ ತನ್ನಲ್ಲಿರುವ ವಸ್ತುಗಳನ್ನು ಆ ಪರಿಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ಹತ್ತಾರು ಬೆಲೆಯಲ್ಲಿ ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ, ಜೊತೆಗೆ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಅಲ್ಲಿ ಸುತ್ತಿ ವ್ಯವಹಾರ ನಡೆಸುವಷ್ಟು ವ್ಯವಧಾನ ಇರುವುದಿಲ್ಲ, ಸದ್ಯಕ್ಕೆ ಇವು ಖಾಲಿ ಆಗಬೇಕು, ಕೈಗೆ ತಕ್ಷಣ ಒಂದಷ್ಟು ದುಡ್ಡು ಸಿಗಬೇಕು. ಕುಟುಂಬ ನಡೀಬೇಕು, ಬೆಲೆಬಾಳುವ ವಸ್ತುಗಳನ್ನು ಅಗ್ಗವಾಗಿ

ಮಾರುವ ಪರಿಸ್ಥಿತಿ ಎದುರಾಗುತ್ತದೆ. ಈ ಸ್ಥಿತಿಯಲ್ಲಿ ಹಿರಿಯ ಮಗನಾದ ಹನುಮನಾಯಕ ತನ್ನ ಸಂಸಾರದ ಪರಿಸ್ಥಿತಿಯನ್ನು ನಿಭಾಯಿಸಲು ಪ್ರಯಾಸಪಡುವ ಚಿತ್ರಣವನ್ನು ಲೇಖಕರು ಈ ಕಾದಂಬರಿಯಲ್ಲಿ ಉಲ್ಲೇಖಿಸಿದ್ದಾರೆ. ಜೊತೆಗೆ ನದಿಯ ಮರಳನ್ನು ಲೂಟಿಮಾಡಿದಾಗ ಈತನಿಂದ ಬರುವ ಪ್ರತಿಕ್ರಿಯೆ "ಹೆಂಗಿತ್ತು ಹಳ್ಳ! ಮನೆಯಾಳ್ ಬಡ್ಡಿಮಕ್ಕಳು ಎಲ್ಲಾ ಗುಡ್ಸಿ ಗುಂಡಾಂತರ ಮಾಡವ್ರೆ......ಮಳೆ ಬಾ ಅಂದ್ರೆ ಎಂಗ್ ಬತ್ತೈತೆ? ಎಲ್ರೂ ಮಣ್ ಬುಟ್ರು; ಮರಳು ಹಿಡಿದ್ರು". ವಾಸ್ತವ ಸತ್ಯವನ್ನು ವಿವರಿಸಲಾಗಿದೆ, ಕುಟುಂಬದವರೊಡನೆ ಮೂರುನಾಲ್ಕು ಕಿ.ಮೀ.ಕ್ರಮಿಸಿ ನೀರನ್ನು ತರುವುದು, ಜೊತೆಗೆ ಅಲ್ಲಿಯ ಮಠದ ಸ್ವಾಮಿಯವರೊಂದಿಗೆ ಆಹಾರಕ್ಕಾಗಿ ದಯನೀಯವಾಗಿ ಬೇಡುವುದು, ಸಂಕೋಚದಿಂದಲೇ ಆ ಮಠದಲ್ಲಿ ತಮ್ಮ ಕುಟುಂಬದವರೊಂದಿಗೆ ನೀರು–ಗಂಜಿ ವ್ಯವಸ್ಥೆ ಮಾಡುವುದು, ಈತ ಸಮಾಜದ ಇತರ ವ್ಯಕ್ತಿಗಳೊಡನೆ ವ್ಯವಹರಿಸುವ ಜಾಣ್ಮೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ಇವುಗಳ ಜೊತೆಗೆ ತನ್ನ ತಂಗಿ, ಭಾವ ಇವರ ಸಂಸಾರದ ವಿಚಾರಗಳಲ್ಲಿ ಭಾಗಿಯಾಗುವ ಚಿತ್ರಣ ಕಂಡುಬರುತ್ತದೆ. ಹನುಮನ ಅಂತರಾಳ ಬಯಕೆಯನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. "ಮಾವ ಮೊದ್ಲು ನಂತಂಗಿ, ತಂಗಿಮಗಳ್ನ ತೋರ್ಸು, ಅವರ್ನ ಕಣ್ತುಂಬ ನೋಡ್ಕಂಡು ಆಮ್ಯಾಲೆ ನೀರು ತುಂಬತ್ತೀವಿ" ತಂಗಿಯ ಕಷ್ಟಕಾರ್ಪಣ್ಯಗಳನ್ನು ನೋಡಿದ ಹನುಮನಾಯಕ ವಾತ್ಸಲ್ಯ ಮಿಡಿತದಿಂದ ಸಹಾಯ ಮಾಡುವ ರೀತಿ, "ಆಗ್ಲಿ ಕಣ್ ತಾಯಿ.......ಪಾರ್ವತೀನ ನೋಡೋಕೆ ನಾಳೀಕೆ ಹೋಯ್ತಿನಿ, ಅವಳ ಗಂಡ ಚಿನ್ನಂದ ಮನ್ಸ, ಅದೊಂದು ಒಳ್ಳೆದಾತು ನೋಡು......"ಎಂದ, ಪಡಬಾರದ ಕಷ್ಟಗಳನ್ನು ಪಟ್ಟು, ಇತ್ತ ತಮ್ಮ ವ್ಯವಸಾಯದಲ್ಲಿ ಪ್ರಮುಖವಾಗಿದ್ದ ಗೋವುಗಳನ್ನು ಮಾರಾಟಮಾಡಿ, ಇತ್ತ ತನ್ನ ತಂಗಿ ಭಾವ, ಜೀವನ ಸಂಸಾರದ ರೋದನ, ಕೊನೆಗೆ ವಿಧಿಯಿಲ್ಲದೆ ಕಲ್ಲುಕೆಚ್ಚುವ ಕೆಲಸಪಡೆಯಲು ಒಬ್ಬ ವ್ಯಕ್ತಿಯ ಮೊರೆಹೋದದ್ದು, ನಂತರ ಕೆಲಸದಲ್ಲಿ ನಿಷ್ಠೆಯನ್ನು ಮೆರೆಯುವ ಗುಣಗಳನ್ನು ಹನುಮನಾಯಕನ ಪಾತ್ರದಲ್ಲಿ ಚಿತ್ರಿಸಿದ್ದಾರೆ.

ಒಂದು ಕಾಲದಲ್ಲಿ ಊರ ಹಿರಿಯ ಗೌಡನ ಮಗನಾಗಿ ಸರ್ವಸಂಪನ್ನಭರಿತನಾಗಿ, ಗೋಸಂಪತ್ತನ್ನು ಹೊಂದಿದ್ದು, ಆಳುಕಾಳುಗಳನ್ನಿಟ್ಟುಕೊಂಡು ಒಬ್ಬ ಮುಖ್ಯಸ್ಥನಾಗಿ ಜವಾಬ್ದಾರಿಯುತವಾಗಿ ಕೆಲಸ ಮಾಡಿಸುತ್ತಿದ್ದ ಹನುಮನಾಯಕ ಪ್ರಕೃತಿಯ ವಿಕೋಪದಿಂದಲೋ/

ವಿನಾಶದಿಂದಲೋ ಈ ಬರಗಾಲದ ಬವಣೆಗೆ ಸಿಲುಕಿ ಬೇರೆಯವರ ಬಳಿಬಂದು ಕೆಲಸ ಮಾಡುವ ಅನಿವಾರ್ಯತೆ ಈ ಕಾದಂಬರಿಯಲ್ಲಿ ಕಂಡುಬಂದಿದೆ. 'ಸ್ವಾಮಿಯೋರ......ನೀವು ದಯೆ ತೋರ್‍ಸುದ್ರೆ ನಾನೂ ಕೂಲಿ ಮಾಡಿ ಹೊಟ್ಟೆ ಹೊರದೇನು....' ಇದೇ ಸಂದರ್ಭದಲ್ಲಿ ಈತನ ತಂಗಿ ಹಸಿಬಾಣಂತಿ ಬಿಸಿಲಝಳದಲ್ಲಿ ಕೆಲಸಮಾಡುವ ಪರಿಸ್ಥಿತಿಯನ್ನು ಕಂಡ ಹನುಮನಾಯಕ ಬೆಚ್ಚಿಬೀಳುವುದು, ನಂತರ ತಂಗಿಗೆ ಪ್ರಾಥಮಿಕ ಶುಶ್ರೂಷೆ ಮಾಡುವುದು. ತನ್ನ ಕಣ್ಣಮುಂದೆ ಆಡಿ ಬೆಳೆದು ತಾನು ಎತ್ತಿ ಆಡಿಸಿದ ಮುದ್ದಾದ ತಂಗಿಯ ಅವಸ್ಥೆಯನ್ನು ನೋಡಿ ಮಮ್ಮಲಮರುಗುವ ಚಿತ್ರಣ, ಇದರ ಜೊತೆಗೆ ವಿಧಿಯಾಟದಂತೆ ತಂದೆಯು ಕೆಲಸಕ್ಕೆ ಬರುವ ವಿಚಾರ ಈತನನ್ನು ಚಿಂತೆಗೀಡುಮಾಡಿರುವುದು ಮತ್ತು ತಮ್ಮನ ಮಗನನ್ನು ವ್ಯಾಪಾರಿಗಳಿಂದ ಬಿಡಿಸಿದುದು ಇವೆಲ್ಲವು ಹನುಮನಾಯಕನ ಪಾತ್ರಗಳಲ್ಲಿ ಹುದುಗಿರುವುದನ್ನು ನಾವು ಅರಿಯಬಹುದಾಗಿದೆ.

ಹನುಮನಾಯಕ ಪರಿಸ್ಥಿತಿಯ ಒತ್ತಡದಲ್ಲಿ ತನ್ನ ಹೆಂಡತಿಯ ತಾಳಿಯನ್ನು ಮಾರುವ ಆಲೋಚನೆ ಮಾಡಿದ್ದು, ನಂತರ ಆ ನಿರ್ಧಾರವನ್ನು ಬದಲಾಯಿಸುವುದು ಮತ್ತು ಬರಗಾಲದ ಪರಿಸ್ಥಿಯನ್ನು ಅವಲೋಕಿಸಲು ಬಂದ ಅಧಿಕಾರಿಗಳ ಜೊತೆ ಸೌಜನ್ಯದಿಂದ ವರ್ತಿಸುವ ಬಗೆಗಿನ ಅಂಶಗಳು ಈ ಪಾತ್ರದ ಮೂಲಕ ಹೊರಹೊಮ್ಮಿವೆ. "ಬ್ಯಾಡ, ಬ್ಯಾಡ ಎಸ್ಟೋ ಜನ ತಾಳಿಮಾರಿದ್ರು, ಕೆಟ್ಟಗಳ್ಗೆ ನಾನು ಯೋಚಿಸ್ ಬುಟ್ಟೆ, ನಿನ್ಯಾಕೆ ಬ್ಯಾಸ್ರ ಮಾಡ್ಕತ್ತಿ ಸುಮ್ಕಿರು, ಬ್ಯಾರೆ ಏರ್ಪಾಟು ಮಾಡ್ವ". ಸ್ವಾಮಿ ತಾವು ಎಲ್ಲಿಂದ ಬಂದಿದ್ದೀರಿ, 'ಉಂಡ್ರಷ್ಟೆ ನೀರು ಬೇಕು ಊಟವೆ ಇಲ್ವಲ್ಲ ಬುಡಿ ತಾಯಿ' ಇವರ ಜೊತೆಗೆ ಹನುಮನಾಯಕ ಕೊನೆಗೆ ತನ್ನ ಮನೆಯನ್ನು ಬಿಟ್ಟು ಬೇರೆಕಡೆ ಜೀವನ ನಡೆಸಲು ತಯಾರುಮಾಡುವ ಚಿತ್ರಣ ಮೂಡಿಬಂದಿದೆ. ಒಟ್ಟಿನಲ್ಲಿ ಮನುಷ್ಯ ಸಂಬಂಧದ ಸ್ಥಾಪನೆ ಮತ್ತು ಅದನ್ನು ಬೆಳೆಸುವ ಪ್ರಕ್ರಿಯೆಯಲ್ಲಿ ಹನುಮನಾಯಕನ ಪಾತ್ರ ಸಾಕ್ಷಿಯಾಗಿದೆ.

ಗೋಪಾಲ :–

'ಅಗ್ನಿಕುಂಡ' ಕಾದಂಬರಿಯಲ್ಲಿ ಕಂಡುಬರುವ ಮತ್ತೊಂದು ಪಾತ್ರ ಬೊಮ್ಮನಾಯಕನ ಮೊಮ್ಮಗ ಹಾಗೂ ಹನುಮನಾಯಕನ ಮಗ ಪುಟ್ಟಪೋರ "ಗೋಪಾಲ". ಈ ಪಾತ್ರ ಓದುಗರಿಗೆ ಮರಳುಗಾಡಿನ ಮರುಭೂಮಿಯಲ್ಲಿ ಓಯಾಸಿಸ್ ತರದಲ್ಲಿ ಚೈತನ್ಯದ ಚಿಲುಮೆಯಾಗಿ ಕಂಡುಬರುತ್ತದೆ. ಅಡಿಗಡಿಗೆ

ಪುಟವಿಟ್ಟ ಚಿನ್ನದಂತೆ ಕಾದಂಬರಿ ಪ್ರಾರಂಭ ಭಾಗದಿಂದ ಅಂತ್ಯದವರೆಗೆ ಹೆಚ್ಚು ಕಾಲ ಅಜ್ಜನ ಬಳಿ ಕಳೆಯುವ ಚಿತ್ರಣ ಮೂಡಿಬಂದಿದೆ.

ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಪ್ರಬುದ್ಧತೆ ಹೆಚ್ಚಿರದಿದ್ದರೂ, ವಾಕ್ಚಾತುರ್ಯ ಪರಿಸ್ಥಿತಿಗನುಗುಣವಾಗಿ ಒಡಮೂಡಿರುತ್ತದೆ. ಜೊತೆಗೆ ವಿಚಾರದಲ್ಲಿ ಅಲ್ಪಸ್ವಲ್ಪ ಜ್ಞಾನವನ್ನು ಮೈಗೂಡಿಸಿಕೊಂಡಿರುತ್ತದೆ. ಇಂತಹ ಚಿತ್ರಣ ಗೋಪಾಲನ ಪಾತ್ರದಲ್ಲಿ ಕಂಡುಬರುತ್ತದೆ. ಕಾದಂಬರಿಯಲ್ಲಿ ಹೆಚ್ಚು ಭಾಗ ಅಜ್ಜನ ಬಳಿ ಕಳೆದರೂ ಆತನ ಮಾತಿನ ಚಮತ್ಕಾರ ಎದ್ದು ಕಾಣುವಂತಹದ್ದು, ಇಂತಹ ಚಿತ್ರಣಕ್ಕೆ ಉದಾಹರಣೆಯಾಗಿ ಈ ಸನ್ನಿವೇಶವನ್ನು ನೋಡಬಹುದು. 'ಬುಡು ತಾತ ನೀನು ಆಡಿದ್ ಆಟ ಕೇಳುದ್ರೆ ನಂಗೆ ಮಜ ಅನ್ನಿಸ್ತದೆ, ಈ ಸಾರಿ ಹಬ್ಬಕ್ಕೆ ನಾನೂ ಉಯ್ಯಾಲೆ ಹಾಕ್ತೀನಿ.......ನಂಜೊತೆ ಗೋಲಿ, ಲಗೋರಿ ಆಡೋರೆಲ್ಲ ಊರ್ಬುಟ್ಟು ಹೊರಟೋಗ್ವರೆ, ವಯಸ್ಸಾದ ಮುದುಕಿಯ ಬಗ್ಗೆ ಹಾಸ್ಯಹರಿಸುವುದು "ಎಂಗೆ ತಾತ! ಈ ಅಜ್ಜಿಯ ಹಟ್ಟೀತನಕ ಎತ್ಕೊಂಡು ಹೋಗೋದು"? ಮತ್ತು ವಾಸ್ತವದ ನುಡಿ "ಇದ್ನ ಹಟ್ಟಿತಕ್ಕೆ ಹೊತ್ಕೊ ಹೋಗೋಕೆ ನಂಜಿ ಕೆಟ್ಟೋದ್ಲ? ಈ ಎಮ್ಮೆಯಾಗೆ ಅದೆಸ್ಟೋದನ ಕರ್ಗಳು ಬಿದ್ದು ಸಾಯ್ತಾವೆ...ಇನ್ನು ಇದಕ್ಕೆ ನೀರು ಮೇವು ಎಲ್ಲಿಂದ ತರೋದು". ಚಿಕ್ಕಮಕ್ಕಳು ಯಾವುದಕ್ಕೆ ಹೆಚ್ಚು ಹೆದರದವು, ಇಲ್ಲಿಯೂ ಸಹ ರಾಸುಗಳ ಸಾವು ಮತ್ತು ಅಜ್ಜಿಯರ ಸಾವಿನ ವಿಚಾರವನ್ನು ತಿಳಿಸುವ ಬಗ್ಗೆ ಚಿತ್ರಿತವಾಗಿದೆ. 'ಅಲ್ನೋಡು ತಾತ! ಅದೇನೋ ಕರ್ರಗೆ ಬಿದ್ದು ಒದ್ದಾಡೈತೆ!' 'ಅಪ್ಪಯ್ಯ ಅಪ್ಪಯ್ಯ ನಮ್ಮ್ ಕೆಂದಸ ಅದ್ರ ಕರ ಮಾರಿಗುಡಿ ಮುಂದೆ ಬಿದ್ದು ಮಿಲಮಿಲ ಅಂಥ ಒದ್ದಾಡ್ತಾದೆ, ಅಪ್ಪಯ್ಯ ಅಪ್ಪಯ್ಯ ಅಜ್ಜಿ ಸತ್ತೋಗವಳೆ' ಇಲ್ಲಿ ಗೋಪಾಲ ಯಾವುದೇ ಸನ್ನಿವೇಶದಲ್ಲಿ ಸುದ್ಧಿಯನ್ನು ಬಲುಬೇಗ ಮುಟ್ಟಿಸುವ ಪ್ರತೀಕವಾಗಿ ಕಂಡುಬಂದಿರುವುದು ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ಬರಗಾಲದ ಪರಿಸ್ಥಿತಿಯಲ್ಲಿ ಮನೆಮಂದಿ ನೀರುತರಲು ಹೋದಾಗ ಈ ಬಾಲಕನೂ ಸಹ ಅವರಜೊತೆ ಹೆಜ್ಜೆ ಹಾಕುವುದು, ಹಳ್ಳಿಯಲ್ಲಿ ಮಳೆರಾಯನನ್ನು ಪ್ರಾರ್ಥಿಸಲು ಮಾಡುವ ಮಳೆರಾಯನ ಪೂಜೆಯ ಹಾಡನ್ನು ನೆನಸಿಕೊಂಡಂತೆ ಗೋಪಾಲನು ಸಹಾ ದಾರಿಯಲ್ಲಿ ಲಾವಣಿ ಹಾಡುವ ಪ್ರಸಂಗ ಚಿತ್ರಿತವಾಗಿದೆ. "ಉಯ್ಯೋ ಉಯ್ಯೋ ಮಳೆರಾಯ ಹೂವಿನ ತೋಟಕೆ ನೀರಿಲ್ಲ, ಹೇಳೋ ಹೇಳೋ ಮಳೆರಾಯ ನೀನ್ಯಾವಾಗ ಇಳಿತೀಯ"[10]. ಎನ್ನುವ ಹಾಡನ್ನು ಲೇಖಕರು ಈ ಹುಡುಗನಿಂದ ಹಾಡಿಸುವ

ರೀತಿ ಹಳ್ಳಿಗಳಲ್ಲಿ ಇರುವ ಕಲ್ಪನೆಯನ್ನು ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಇದರ ಜೊತೆಜೊತೆಗೆ ಗೋಪಾಲ ಬೇಸರ ಮಾಡಿಕೊಳ್ಳದೆ ತಾತನ ಜೊತೆಯಲ್ಲಿ ಹೋಗಿ ಕೆಲಸಮಾಡುವ ಮನಸ್ಸನ್ನು ಮಾಡಿದ್ದು, ಆ ಗುತ್ತಿಗೆದಾರ ಈತನಿಗೆ ಮಣ್ಣುಹೊರುವ ಕೆಲಸ ನೀಡಿದಾಗ ನಿರಾಕರಿಸದೆ ಉತ್ಸಾಹದಿಂದ ಕೆಲಸವನ್ನು ನಿರ್ವಹಿಸುವುದು, ವಯಸ್ಸಿಗೆ ಮೀರಿದ ಕೆಲಸ, ಇದರ ಜೊತೆಗೆ ಸಾಕುಪ್ರಾಣಿಗಳ ಮೇಲೆ ಬಹುಪ್ರೀತಿ, ರಕ್ತ ಸಂಬಂಧದ ಬಗ್ಗೆ ಬಹು ಎಚ್ಚರವಿರುವ, ಲಚ್ಚಿಯ ಮಗುವನ್ನು ವ್ಯಾಪಾರಿಗಳಿಂದ ಬಿಡಿಸಿಕೊಳ್ಳುವ ಪ್ರಸಂಗದಲ್ಲಿ ಈತನ ಹಠ, ವಾತ್ಸಲ್ಯ, ಕರುಳುಬಳ್ಳಿಯನ್ನು ಹಿಂಡುವಂತದ್ದಾಗಿದೆ. ಒಟ್ಟಿನಲ್ಲಿ ಈ ಕಾದಂಬರಿಯಲ್ಲಿ ಪುಟ್ಟಪೋರ ಗೋಪಾಲನ ಪಾತ್ರ ಓದುಗರ ಮನಸ್ಸಿಗೆ ಸ್ವಲ್ಪಮಟ್ಟಿನ ಆನಂದವನ್ನು ತಂದುಕೊಡುವಂತಹದಾಗಿದೆ.

ನೀಲಕಂಠ :–

'ಸಮ್ಮಿಳನ' ಕಾದಂಬರಿಯ ಪ್ರಾರಂಭದಿಂದ ಅಂತ್ಯದವರೆಗೂ ಕ್ರಿಯಾಶೀಲ ವ್ಯಕ್ತಿಯಾಗಿ, ಅದ್ಭುತ ಕಾರ್ಯ ಸಾಮರ್ಥ್ಯವುಳ್ಳ ವ್ಯಕ್ತಿಯಾಗಿ ಕಾಣಿಸಿಕೊಳ್ಳುವ ಪಾತ್ರವೆಂದರೆ ನೀಲಕಂಠ. ಈ ಕಾದಂಬರಿಯಲ್ಲಿ ಲೇಖಕರು ಔದಾರ್ಯ ಮನೋಧರ್ಮವನ್ನುಳ್ಳ ಶ್ರೀಮಂತ ಮನೆತನದ ಚಿತ್ರಣವೊಂದನ್ನು ನಿರ್ಮಿಸಿ, ಅದಕ್ಕೂ ಕೊಳಚೆ ಪ್ರದೇಶದಲ್ಲಿ ಬೆಳೆದ ನಿರ್ಗತಿಕ ಮಕ್ಕಳಿಬ್ಬರಿಗೂ ನಂಟುಹಾಕಿ ನೀಲಕಂಠನ ಪಾತ್ರಕ್ಕೆ ಆದರ್ಶ ಸಂಬಂಧವೊಂದನ್ನು ಬೆಳೆಸಿರುವುದು ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ಇಲ್ಲಿ ಲೇಖಕರು ಸಮಾಜದಲ್ಲಿನ ಕೆಳವರ್ಗದ ಪ್ರತಿನಿಧಿಯಾಗಿ ನೀಲಕಂಠನ ಪಾತ್ರವನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಕೊಳಗೇರಿ ಪ್ರದೇಶದಲ್ಲಿ ಹುಟ್ಟಿ ಬೆಳೆದ ವಾತಾವರಣದಲ್ಲಿ ಈ ನೀಲಕಂಠ ಪಡುವ ಕಷ್ಟಗಳು, ದುಃಖದುಮ್ಮಾನಗಳು, ಸೌಲಭ್ಯವಂಚಿತ ಮಕ್ಕಳಿಗೆ ಬಂದೊದಗುವ ದುಸ್ಥಿತಿಯನ್ನು, ಅದರಲ್ಲಿ ಈ ನೀಲಕಂಠ 'ಪುಟಕ್ಕಿಟ್ಟ ಚಿನ್ನದಂತೆ ಮಿಂದುಬರುವ' ಪಾತ್ರ ಚಿತ್ರಣವನ್ನು ಲೇಖಕರು ಪ್ರಸ್ತಾಪಿಸಿದ್ದಾರೆ. ಆತನ ಬಾಲ್ಯದ ದಿನಗಳನ್ನು ಈ ಕೃತಿಯಲ್ಲಿ ಕಂಡರಿಸಿದ್ದಾರೆ, ಕೊಳಕಾದ ನಗರ, ಕಾಗದ, ಬಟ್ಟೆಯ ಚೂರು, ಪ್ಲಾಸ್ಟಿಕ್ ಚೀಲಗಳಿಂದ ಆವೃತ್ತವಾಗಿತ್ತು ನಮ್ಮ ಅರಗಿನ ಮನೆ ಎಂಬಂತೆ ಈ ಹುಡುಗನಿಗೆ ತಂದೆ ತಾಯಿಯರು ಇಟ್ಟ ದೇವರ ಹೆಸರು 'ನೀಲಕಂಠ'. ಈ ಹೆಸರಿನ ಸೂಚಕದಂತೆ ಜೀವನದಲ್ಲಿ ಏರಿಳಿತ ಕಂಡು ತಮ್ಮ ಬಡತನದ ಸಂಸಾರಕ್ಕೆ ಆಧಾರ ಸ್ಥಂಭವಾದ ಅಂಶವನ್ನು ಚಿತ್ರಿಸಿದ್ದಾರೆ. ಎಲ್ಲಾ ಮಕ್ಕಳಂತೆ ಆಡಿ, ನಲಿದು, ಕುಣಿದುಕುಪ್ಪಳಿಸುವ

ಸಮಯದಲ್ಲಿ ಈತ ತುತ್ತು ಅನ್ನಕ್ಕಾಗಿ ಪರದಾಡಬೇಕಾದ ಸನ್ನಿವೇಶ, ಈ ಹಸಿವನ್ನು ನೀಗಿಸಲು ತನ್ನ ಹೊಟ್ಟೆಗೆ ಆಹಾರವಿಲ್ಲದಿದ್ದರೂ ತನ್ನ ತಮ್ಮಂದಿರಿಗೆ ನೆರವಾಗುವ 'ಸೋದರವಾತ್ಸಲ್ಯ ಪ್ರೀತಿ'ಯನ್ನು ಈ ಕಾದಂಬರಿಯಲ್ಲಿ ವಿವರಿಸಿದ್ದಾರೆ.

'ನೀಲಕಂಠ'ನಿಗೆ ಆತನ ತಂದೆ ವಿದ್ಯಾಭ್ಯಾಸ ಕೊಡಿಸಲು ಹಿಂದೇಟುಹಾಕುವ ಮತ್ತು ಶಾಲೆಯನ್ನು ಬಿಡಿಸುವ ಸಂದರ್ಭದಲ್ಲಿ ಈ ಹುಡುಗ ಕುಟುಂಬದ ಪರಿಸ್ಥಿತಿಯನ್ನು ಆಗಲೇ ಅರಿತು ಇನ್ನೊಬ್ಬರ ಮನೆಯಲ್ಲಿ ಕೆಲಸದಾಳಾಗಿ ದುಡಿಯುವ ಪ್ರವೃತ್ತಿಗೆ ಒಳಪಟ್ಟಿದ್ದು, ಈತ ತಾನು ಮಾಡುವ ಕೆಲಸಗಳಲ್ಲಿ ಶ್ರಮವಹಿಸುವ, ನಿಷ್ಠೆಗೆ, ಎಲ್ಲರ ಮೆಚ್ಚುಗೆ ಪ್ರೀತಿ ಪಾತ್ರನಾಗುವ ಚಿತ್ರಣ ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ನೀಲಕಂಠ ತನ್ನ ಯಜಮಾನರ ಮಕ್ಕಳನ್ನು ಪ್ರೀತಿಯಿಂದ ಕಾಣುವುದು, ಅವರು ಹೇಳುವ ಕೆಲಸಗಳಲ್ಲಿ ಪ್ರಾಮಾಣಿಕವಾಗಿ ದುಡಿಯುವುದು, ಈ ದಿಸೆಯಲ್ಲಿ ಆತನ ಬಾಳಿಗೆ ಹೊಸ ಅಧ್ಯಾಯ ಪ್ರಾರಂಭವಾಗುವುದು ನಾರಾಯಣಪ್ಪನವರ ಮನೆಯಲ್ಲಿ. ಈತ ಕೆಳವರ್ಗದ ವ್ಯಕ್ತಿಯ ಮಗನಾಗದೆ ಶ್ರೀಮಂತರ ಔದಾರ್ಯತೆಗೆ ಪ್ರೀತಿಪಾತ್ರನಾಗುತ್ತಾನೆ. ಈ ರೀತಿಯಲ್ಲಿ ನೀಲಕಂಠ ಶ್ರೀಮಂತರ ಮನೆಸೇರಿ ಅವರ ಮನಗೆದ್ದು ತನ್ನ ತಮ್ಮನ ವಿದ್ಯಾಭ್ಯಾಸಕ್ಕೆ ನೆರವಾದದ್ದು, ಬಡತನದಲ್ಲಿ ಸಂಸಾರ ಸಾಗಿಸಲು ಮಾಡಿದ ಕುಟುಂಬದ ಸಾಲ ತೀರಿಸಲು ಮುಂದಾಗುವುದು, ಗೋಪಾಲನಿಗೆ ಆಸರೆಯಾಗಿ ವಿದ್ಯಾಭ್ಯಾಸಕ್ಕೆ ಬಡತನ ಅಡ್ಡಿಯಾಗಬಾರದೆಂದು ಚಿಂತಿಸಿ ಜೊತೆಗೆ ಮೇಲ್ವರ್ಗದ ಜನರ ಸಂಬಂಧ ಬೆಳೆಸುವ ಪ್ರತೀಕವಾಗಿ ಈ ನೀಲಕಂಠನ ಪಾತ್ರ ಮನೋಜ್ಞವಾಗಿ ಕಂಡುಬರುತ್ತದೆ.

ಸ್ತ್ರೀ ಪಾತ್ರಗಳು :–

"ಅಗ್ನಿಕುಂಡ, ಸಮ್ಮಿಳನ, ಪಾರ್ವತಿ" ಈ ಕಾದಂಬರಿಯಲ್ಲಿನ ಸ್ತ್ರೀ ಪಾತ್ರಗಳ ಬಗ್ಗೆ ಹೇಳುವುದಾದರೆ ಅಲ್ಲಿ ಹೆಣ್ಣು ಹೆಚ್ಚಿನ ಪಾತ್ರವನ್ನು ವಹಿಸುತ್ತಿರಲಿಲ್ಲವೇನೋ ಎನ್ನಬಹುದು. ಹಾಗಾಗಿ ಇಲ್ಲಿನ ಪುರುಷ ಪಾತ್ರಗಳಿಗೆ ಹೋಲಿಸಿದರೆ ಸ್ತ್ರೀ ಪಾತ್ರಗಳ ಸಂಖ್ಯೆ ವಿರಳ. ಇಲ್ಲಿ ಕಂಡುಬರುವ ಸ್ತ್ರೀಯರ ವ್ಯಕ್ತಿತ್ವವೂ ಅಪೂರ್ಣವಾದುದಾಗಿದೆ. ಪುರುಷ ಪ್ರಧಾನ ಸಮಾಜವಾದರೂ ಸ್ತ್ರೀಯರಿಗೆ ಸ್ವಲ್ಪಮಟ್ಟಿನ ಸ್ವಾತಂತ್ರ್ಯ ಇರುತ್ತಿತ್ತು, ಅಲ್ಲದೆ ತಮ್ಮ ಮೇಲೆ ಆಗುತ್ತಿರುವ ಶೋಷಣೆಯ ವಿರುದ್ಧ ಪ್ರತಿಭಟಿಸುವ ಗುಣ ಕಂಡುಬರುವುದಿಲ್ಲ. ಬದಲಾಗಿ ಅದನ್ನು ಮೂಕವಾಗಿ ಅನುಭವಿಸುವುದನ್ನು ಕಂಡುಬರುತ್ತದೆ, ಉದಾಹರಣೆಯಾಗಿ 'ಪಾರ್ವತಿ' ಕಾದಂಬರಿಯಲ್ಲಿ ಕಂಡುಬರುವ 'ಸಾವಿತ್ರಿ' ಸಾಧ್ವೀಮಣಿ ಮಾನ

ಮರ್ಯಾದೆಗೆ ಅಂಜಿದವಳು, ತನ್ನ ಗಂಡನ ವ್ಯಕ್ತಿತ್ವ ಎಲ್ಲಿ ಹಾಳಾಗುವುದೋ ಎಂದುಕೊಂಡು ಸುತ್ತಮುತ್ತಲಿನ ಸಮಾಜಕ್ಕೆ ಹೆದರಿ ಗಂಡ ಕೊಡುವ ಚಿತ್ರಹಿಂಸೆಯನ್ನು ತಡೆದುಕೊಳ್ಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುವುದು, ಬೊಮ್ಮನಾಯಕನ ಹೆಂಡತಿ ಗಂಗವ್ವ, ತಾಳಿಯ ಪಾವಿತ್ರ್ಯತೆಯನ್ನು ಅರಿತ ಸುಬ್ಬಿ, ಲಚ್ಚಿ, ಸರಸ್ವತಿ, ಪಾರ್ವತಿ, ಮಲತಾಯಿ ಧೋರಣೆ ವ್ಯಕ್ತಪಡಿಸಿದ ಭದ್ರಿ, ಪ್ರೀತಿ, ಪ್ರೇಮ, ವಿಶ್ವಾಸ ತುಂಬಿದ ಶಾಂತವ್ವನಂತಹ ಸ್ತ್ರೀಯರು ಮೊದಲಾದ ಉಪಪಾತ್ರಗಳೂ ಕೂಡ ಸಜೀವವಾಗಿ ವರ್ತಿಸುತ್ತವೆ.

ಪಾರ್ವತಿ :–

'ಪಾರ್ವತಿ' ಕಾದಂಬರಿಯಲ್ಲಿ ಬರುವ ಮುಖ್ಯ ಪಾತ್ರಗಳಲ್ಲಿ 'ಪಾರ್ವತಿ' ಪಾತ್ರವೂ ಒಂದು. ಈ ಕಾದಂಬರಿಯ ಪ್ರಮುಖ ಕೇಂದ್ರ ಬಿಂದು ಬಾಲ್ಯದಲ್ಲಿ ಮಾನಸಿಕವಾಗಿ ಯಾವುದಾದರೂ ಪೆಟ್ಟು ಬಿದ್ದರೆ ಮುಂದೆ ಯಾವ ಪರಿಣಾಮ ಎದುರಿಸ ಬೇಕಾಗುತ್ತದೆ ಎಂಬುದಕ್ಕೆ ಈ ಕಾದಂಬರಿಯಲ್ಲಿ ಬರುವ 'ಪಾರ್ವತಿ'ಯೇ ಸಾಕ್ಷಿಯಾಗಿದ್ದಾಳೆ. ಈ ಪಾತ್ರ ಚಿತ್ರಣದ ಮೂಲಕ ಎಳೆಯ ವಯಸ್ಸಿನ ಮಕ್ಕಳ ಮನಸ್ಸು ಎಷ್ಟೊಂದು ಮಧುರವಾಗಿರುತ್ತದೆ. 'ಮಕ್ಕಳು ಮಾನವ ಲೋಕದ ಹೂಗಳು' ಅವುಗಳ ಮನಸ್ಸು ಮೇಣದಂತಹದ್ದು, ಯಾವುದನ್ನೇ ಆಗಲಿ ಬಹುಬೇಗ ಗ್ರಹಿಸಿಬಿಡುತ್ತವೆ. ಈ ಕಾದಂಬರಿಯಲ್ಲಿನ 'ಪಾರ್ವತಿ' ಹುಟ್ಟುವಾಗಲೇ ತಾಯಿಯನ್ನು ಕಳೆದುಕೊಂಡು ಚಿಕ್ಕಮ್ಮನ ಆಶ್ರಯದಲ್ಲಿ ಬೆಳೆಯುವ ಚಿತ್ರಣ ಪ್ರಸ್ತುತ ಸಮಾಜದಲ್ಲಿ ನಡೆಯುವ ವಾಸ್ತವ ಸ್ಥಿತಿಯನ್ನು ಅರಿಕೆ ಮಾಡಿಕೊಡುತ್ತದೆ. ಮಾತೃವಾತ್ಸಲ್ಯದಿಂದ ವಂಚಿತವಾದ ಮಕ್ಕಳು ಖಿನ್ನತೆಗೆ ಒಳಗಾಗುತ್ತಾರೆ ಎಂಬ ವೈಜ್ಞಾನಿಕ ಅಂಶವು ಈ ಪಾತ್ರದ ಮೂಲಕ ಬಿಂಬಿತವಾಗಿದೆ. ತಾಯಿ ವಾತ್ಸಲ್ಯ ದೊರಕದಿದ್ದರೂ ಸಹಜವಾಗಿ ಪ್ರತಿಕ್ರಿಯಿಸುವ ಪಾರ್ವತಿ ಚಿಕ್ಕಮ್ಮನ ಕೆಟ್ಟ ಆಲೋಚನೆಗಳಿಗೆ ಬಲಿಪಶುವಾಗುವುದು ವಿಪರ್ಯಾಸದ ಸಂಗತಿ, ಭದ್ರಿಗೆ ತಾನು ತಾಯಿಯಾಗುವ ಮುನ್ಸೂಚನೆ ದೊರೆತಾಗಲಂತೂ ಈಕೆಯ ಬಗೆಗಿನ ಪ್ರೇಮ ನಿರ್ಲ್ಯಕ್ಷ ಮಾಡಿದ ಪ್ರಸಂಗ, ರಕ್ತ ಬಾಂಧವ್ಯ ಒಂದಾಗಿದ್ದರೂ ಪ್ರೀತಿಯ ಅಂತರ ಬೇರೆಬೇರೆಯಾಗಿರುವುದನ್ನು ಈ ಪಾತ್ರ ಚಿತ್ರಣದ ಮೂಲಕ ಅರಿಯಬಹುದಾಗಿದೆ. ಬಾಲ್ಯದಲ್ಲಿ ಉಂಟಾದ ಮಾನಸಿಕ ಯಾತನೆಗಳು ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತವೆ ಎಂಬುದನ್ನು ಈ ಪಾತ್ರದಲ್ಲಿ ನಾವು ಅರಿಯಬಹುದಾಗಿದೆ. ಚಿಕ್ಕಮ್ಮ ಭದ್ರಿ ಈಕೆಯ ಮೇಲೆ ಸುಳ್ಳು ಆರೋಪ ಹೊರಿಸುವುದು, ಕೊನೆಗೆ ಮನೆಬಿಟ್ಟು ಓಡಿಸುವ ಆಲೋಚನೆ

ಈಕೆಯನ್ನು ಮತ್ತಷ್ಟು ಸಂಕಟಕ್ಕೀಡುಮಾಡುತ್ತದೆ. ಇದರ ಜೊತೆಗೆ ಸಮಾಜದ ಮೂಢನಂಬಿಕೆಗಳು ಈ ಪಾತ್ರದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬ ಅಂಶಗಳು ಬಿಂಬಿತವಾಗಿವೆ. ಪೂಜಾರಪ್ಪನ ಅನಾಚಾರ, ಅನಿಷ್ಟ ಆಚರಣೆಗಳು, ಏನೂ ಅರಿಯದ ಮಗುವಿನ ಮೇಲೆ ಭೂತಬಂದಿದೆಯೆಂದು ಆರೋಪ ಹೊರಿಸುವುದು, ತನ್ನ ಬೂಟಾಟಿಕೆಯನ್ನು ಮರೆಯಲು ಆ ಹುಡುಗಿಗೆ ಬರಗುಡ ಹಾಕುವ ಪ್ರಸ್ತಾಪ ಮಾಡಿದಾಗ, ಆ ಹುಡುಗಿ ಹೆದರಿ ಜ್ಞಾನತಪ್ಪಿ ಬೀಳುವ ಚಿತ್ರಣ ಈ ಪಾತ್ರದಲ್ಲಿ ಬಿಂಬಿತವಾಗಿದೆ ಈ ಅಂಶ ಚಿಕ್ಕಮಕ್ಕಳು ಯಾವುದಾದರೂ ಕಹಿ ಘಟನೆಗಳಲ್ಲಿ ಭಾಗಿಯಾದಾಗ ತಮ್ಮ ತಪ್ಪಿನ ಅರಿವಿಲ್ಲದೆ ಶರೀರದ ಸಮತೋಲನ ಕಳೆದುಕೊಳ್ಳುವ ಸ್ಥಿತಿಯನ್ನು ಅರಿಕೆ ಮಾಡುತ್ತದೆ. ಈ ಎಲ್ಲಾ ಘಟನೆಗಳಿಂದ ಮನನೊಂದ ಪಾರ್ವತಿ ಮಾನಸಿಕವಾಗಿ ಜರ್ಜರಿತವಾಗುವುದು, ಈಕೆಯ ಮನಸ್ಸಿನ ಮಾರ್ಪಾಡಿಗೆ ಮಾಸ್ತರರು ಈಕೆಯ ಮನಸ್ಸನ್ನು ಅರಿತು ಒಳ್ಳೆಯ ವಾತಾವರಣದಲ್ಲಿ ವರ್ತನೆಯನ್ನು ಬದಲಾಯಿಸಲು ಪ್ರಾರಂಭಿಸಿದಾಗ ಆಕೆ ತೋರುವ ಒಳ್ಳೆಯ ಪ್ರತಿಕ್ರಿಯೆಗಳು, ಕುತೂಹಲಭರಿತ, ನಿಸ್ಸಂದೇಹವಾದ ಪ್ರಶ್ನೆಗಳು ಇಂದಿಗೂ ಬುದ್ಧಿವಂತ ಮಕ್ಕಳ ಕಾರ್ಯವೈಖರಿಯನ್ನು ಹೋಲುತ್ತವೆ. ಈ ಸಂದರ್ಭದಲ್ಲಿ ಆಕೆಗೆ ಪ್ರೀತಿ ವಿಶ್ವಾಸಗಳನ್ನು ತುಂಬುವ ಶಾಂತವ್ವ ತನ್ನ ಮನೆಯಲ್ಲಿ ಆಶ್ರಯ ನೀಡಿ, ಆಕೆಯ ಮನಪರಿವರ್ತನೆಗೆ ಸಹಕಾರಿಯಾಗುವುದು. ಅಂತಿಮವಾಗಿ ಶಾಂತವ್ವ, ರಾಮಯ್ಯ ಮಾಸ್ತರರು, ಶಿವರುದ್ರ ಇವರೆಲ್ಲರ ಪ್ರೀತಿವಾತ್ಸಲ್ಯ ದೊರೆತಾಗ ಆಕೆ ಪರಿವರ್ತಿತವಾಗುವ ಚಿತ್ರಣ ಈ ಕಾದಂಬರಿಯಲ್ಲಿ ಬಂದಿದೆ. ಒಟ್ಟಿನಲ್ಲಿ ಲೇಖಕರು ಈ ಕಾದಂಬರಿಯಲ್ಲಿ "ಚಿಕ್ಕವಯಸ್ಸಿನಲ್ಲಿ ಮನಸ್ಸಿನ ಮೆಲೆ ಆದ ಪರಿಣಾಮ ಜೀವನದುದ್ದಕ್ಕೂ ಬೆಳೆದು, ಬದುಕಿನ ಹೊಯ್ದಾಟದಲ್ಲಿ ಯಾವ ಅವಸ್ಥೆ ತಲುಪುತ್ತದೆ, ಈ ವ್ಯಕ್ತಿಯ ಮನಸ್ಸಿನ ಮಾರ್ಪಾಡಿಗೆ ಅನೇಕ ಘಟನೆಗಳು ಒದಗಿಬಂದರೂ, ಹಿತೈಷಿಗಳು, ಅಂತಃಕರುಣಿಗಳು ಈ ವ್ಯಕ್ತಿಯ ಬಾಳಬೆಳಕಿಗೆ ಪ್ರಯತ್ನಿಸಿದಾಗ ಸುಧಾರಿಸುತ್ತದೆ". ಮಾನಸಿಕ ಪೆಟ್ಟಿನಿಂದ ಬಳಲಿರುವ ಹೆಣ್ಣಿನ ಜೀವನ ಚಿತ್ರಣವನ್ನು ಪಾರ್ವತಿ ಪಾತ್ರದಲ್ಲಿ ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ 'ಪಾರ್ವತಿ' ಪಾತ್ರದಲ್ಲಿ ಒಂದು ಹೆಣ್ಣಿನ ಬಾಳಿನ ಕಥೆಯನ್ನು ಕೇಂದ್ರವಾಗಿಟ್ಟುಕೊಂಡು ಕಥಾನಾಯಕಿಯ ಮನೋವಿಶ್ಲೇಷಣೆಯನ್ನು ವೈಜ್ಞಾನಿಕವಾಗಿ ಮಾಡಲು ಯತ್ನಿಸಿರುವುದು ಕಂಡುಬರುತ್ತದೆ.

ಪಾತ್ರಗಳ ವೈರುಧ್ಯಗಳು :–

ವೆಂಕಟಕೃಷ್ಣರವರ ಕಾದಂಬರಿಗಳಲ್ಲಿ ಬರುವ ಪಾತ್ರಗಳನ್ನು ಗಮನಿಸಿದಾಗ ಕೆಲವು ಪಾತ್ರಗಳ ವ್ಯಕ್ತಿತ್ವದಲ್ಲಿ ಸಾದೃಶ್ಯತೆ, ವೈರುಧ್ಯತೆಯನ್ನು ಗುರುತಿಸಬಹುದು. ಒಂದೇ ರೀತಿಯ ಸಮಸ್ಯೆಗೆ ಒಳಗಾದ ಎರಡು ಪಾತ್ರಗಳು ಆ ಸಮಸ್ಯೆಯನ್ನು ಹೇಗೆ ನಿಭಾಯಿಸುತ್ತವೆ ತಮಗೊದಗಿದ ಪ್ರತಿಕೂಲ ಪರಿಸ್ಥಿತಿಗೆ ಹೇಗೆ ತೆರೆದುಕೊಳ್ಳುತ್ತವೆ ಎಂಬುದನ್ನು ನೋಡಿದಾಗ ಆ ಪಾತ್ರಗಳ ವ್ಯಕ್ತಿತ್ವದಲ್ಲಿ ಕಂಡುಬರುವ ಸಾದೃಶ್ಯ, ವೈರುಧ್ಯತೆಗಳನ್ನು ಗುರುತಿಸಬಹುದು.

ಪ್ರಸ್ತುತ ವಿಚಾರಕ್ಕೆ ಸಂಬಂಧಿಸಿದಂತೆ ಹನುಮನಾಯಕ ಮತ್ತು ಬೊಮ್ಮ, ಭದ್ರಿ ಮತ್ತು ಶಾಂತವ್ವ. ಸಾದೃಶ್ಯಕ್ಕೆ ಹಿನ್ನೆಲೆಯಾಗಿ ಬೊಮ್ಮನಾಯಕ ಮತ್ತು ನಾರಾಣಪ್ಪ ಈ ಮೂರು ಜೋಡಿಗಳ ವ್ಯಕ್ತಿತ್ವವನ್ನು ಮಾತ್ರ ಇಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಹನುಮನಾಯಕ ಮತ್ತು ಬೊಮ್ಮ :–

ಈ ಇಬ್ಬರೂ ವ್ಯಕ್ತಿಗಳೂ ಮೂಲತಃ ಹೊನ್ನಾಳಿ ಗ್ರಾಮದವರು, ಜೊತೆಗೆ ಒಂದೇ ತಾಯಿಯ ಮಕ್ಕಳು, ಸಹೋದರರು, ಬರಗಾಲದ ಭೀಕರತೆಯಲ್ಲಿ ಬೆಂದು ಬಸವಳಿಯುತ್ತಿರುವ ಸಂದರ್ಭದಲ್ಲಿ ಹಿರಿಯ ಮಗನಾದ ಹನುಮನಾಯಕ ಸಂಸಾರಕ್ಕೆ ಆಸರೆಯಾಗಲು ಪಡಬಾರದ ಕಷ್ಟಗಳನ್ನು ಪಡುತ್ತಾನೆ, ಜೊತೆಗೆ ಕೂಲಿಕೆಲಸಕ್ಕೆ ಹೋಗಿ ದುಡಿದು, ತನ್ನ ತಂಗಿ, ಮಕ್ಕಳ ಯೋಗಕ್ಷೇಮವನ್ನು ವಿಚಾರಿಸುತ್ತಾನೆ. ಅವರ ಕಷ್ಟಗಳಿಗೆ ಸ್ಪಂದಿಸುತ್ತಾನೆ, ಈತ ಎಂದೂ ತನ್ನ ತಂದೆ–ತಾಯಿಯರನ್ನೂ ಬಿಟ್ಟು ವಲಸೆ ಹೋದವನಲ್ಲ, ಒಂದು ರೀತಿಯ ಮಾನವೀಯ ಸಹಕಾರ ಮನೋಭಾವದ ವ್ಯಕ್ತಿಯಾಗಿ ನಿಲ್ಲುತ್ತಾನೆ. ಪ್ರಾಣಿಗಳ ಉಪಚಾರದಲ್ಲೂ ಅಷ್ಟೇ, ಅವುಗಳಿಗೆ ನೀರುತೋರಿ, ಮೇವು ಹಾಕುವ ಪ್ರವೃತ್ತಿ, ಒಟ್ಟಾರೆ ಸಂಸಾರದ ಜವಾಬ್ದಾರಿಯನ್ನು ಹೊತ್ತವ. ಆದರೆ ಬೊಮ್ಮ, ಹನುಮನಾಯಕನ ಹಾಗೆ ಅಷ್ಟೇನು ಶ್ರಮಜೀವಿಯಲ್ಲ, ಕುಟುಂಬದವರನ್ನು ಬಿಟ್ಟು ಎಲ್ಲಿಯೋ ಹೋಗಿ ದುಡಿದು ಹೊಟ್ಟೆಮಾತ್ರ ತುಂಬಿಸಿಕೊಳ್ಳುವಂತಹವನು, ಸಂಸಾರದ ನಿರ್ವಹಣೆಗೆ ಎಂದೂ ತಲೆಕೆಡಿಸಿಕೊಂಡವನಲ್ಲ, ಮನೆಯಲ್ಲಿ ದವಸಧಾನ್ಯ ತೀರಿ ಊಟಕ್ಕಾಗಿ ತೊಂದರೆ ಬಂದಾಗ ಯೋಚಿಸದೆ ತನ್ನ ಕೆಲಸದಲ್ಲಿ ಮಾತ್ರ ತೊಡಗುತ್ತಾನೆ. ಕೊನೆಗೆ ತನ್ನ ಮಗುವನ್ನೇ ಸಂತೆಯಲ್ಲಿ ಮಾರಾಟಮಾಡಿ ಬಂದ ಹಣದಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಕೆಟ್ಟ ಆಲೋಚನೆ ಮಾಡಿ ಕಾರ್ಯಪ್ರವೃತ್ತನಾಗುತ್ತಾನೆ. ಆ

ಸಂದರ್ಭದಲ್ಲಿ ಹನುಮನಾಯಕ ಆ ಮಗುವನ್ನು 'ದಲ್ಲಾಳಿ'ಯಿಂದ ಬಿಡಿಸಿಕೊಂಡು ಲಚ್ಚಿಯ ಕೈಗೆ ಕೊಡುತ್ತಾನೆ. ಹನುಮನಾಯಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು, ಬಂದ ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸುವ ಮನೋಭಾವವುಳ್ಳವನು, ಕೂಲಿ ಕೆಲಸಮಾಡಿ ದವಸಧಾನ್ಯ ತಂದು ಮನೆಯವರೆಲ್ಲರಿಗೂ ತುತ್ತು ಗಂಜಿಯನ್ನಾದರೂ ದೊರಕಿಸಿಕೊಡುತ್ತಾನೆ. ಆದರೆ ಬೊಮ್ಮ ದಲ್ಲಾಳಿಗಳಿಂದ ದುಡ್ಡು ಪಡೆದು ಪರಿಸ್ಥಿತಿಯನ್ನು ಎದುರಿಸಲಾರದೆ ಓಡಿ ಹೋಗುತ್ತಾನೆ. ಒಟ್ಟಾರೆಯಾಗಿ ಮನುಷ್ಯ ಸಂಬಂಧದ ಸ್ಥಾಪನೆ ಮತ್ತು ಅದನ್ನು ಬೆಳೆಸುವ ಪ್ರತೀಕವಾಗಿ ಹನುಮನಾಯಕನ ಪಾತ್ರ ಮತ್ತು ಮನುಷ್ಯ ಸಂಬಂಧದ ಅವನತಿಯ ಪ್ರತೀಕವಾಗಿ ಬೊಮ್ಮನ ಪಾತ್ರ ಸಾಕ್ಷಿಯಾಗಿದೆ.

ಭದ್ರಿ ಮತ್ತು ಶಾಂತವ್ವ :-

ಕಾದಂಬರಿಯಲ್ಲಿ ಬರುವ ಕೆಲವೇ ಸ್ತ್ರೀ ಪಾತ್ರಗಳಲ್ಲಿ ಇವರಿಬ್ಬರು ಬೇರೆಡೆ ಪಾತ್ರಗಳಾಗಿವೆ. 'ಪಾರ್ವತಿ'ಯ ಮನಸ್ಸಿನಲ್ಲಿನ ಹೊಯ್ದಾಟ ಮತ್ತು ಪರಿವರ್ತನೆಗೆ ಇವರಿಬ್ಬರ ಪಾತ್ರ ಮೀಸಲಾಗಿದೆ. ಈ ಎರಡೂ ಪಾತ್ರಗಳು ಕಾದಂಬರಿಯ ಪ್ರಮುಖ ತಿರುವುಗಳಾಗದಿದ್ದರೂ ಜೀವಂತವಾಗಿ ನಿಲ್ಲುತ್ತವೆ. ವೈಯುಕ್ತಿಕ ಅಂಶಗಳು ತೀರಾ ಮುಸುಕಾಗಿರುವ ಕಾದಂಬರಿಯಲ್ಲಿ ಈ ಪಾತ್ರಗಳು ತಮ್ಮ ವೈಯಕ್ತಿಕತೆಯನ್ನು ಅಲ್ಲಲ್ಲಿ ತೆರೆದಿಡುತ್ತವೆ.

'ಪಾರ್ವತಿ' ಕಾದಂಬರಿಯಲ್ಲಿ 'ಭದ್ರಿ' ಮಲತಾಯಿಯ ಪಾತ್ರ ಚಿತ್ರಣದಲ್ಲಿ ಕಂಡುಬರುತ್ತಾಳೆ. ಈಕೆ ಮೊದಮೊದಲು ಪಾರ್ವತಿಗೆ ಮಾತೃವಾತ್ಸಲ್ಯ ತೋರದಿದ್ದರೂ, ಅಲ್ಪಸ್ವಲ್ಪ ಪ್ರೀತಿಯನ್ನು ತೋರುತ್ತಾಳೆ, ತಾನು ತಾಯಿಯಾಗುವ ಸಂದರ್ಭದಲ್ಲಿ ಈಕೆಯ ಬಗ್ಗೆ ಇದ್ದ ಮೋಹ, ಪ್ರೀತಿ ಕಡಿಮೆಯಾಗುತ್ತದೆ. ತನ್ನದೇ ಆದ ಕನಸು, ತನ್ನಲ್ಲಿ ಜನಿಸುವ ಮಗುವಿನ ಬಗ್ಗೆ ಅಪಾರ ಪ್ರೀತಿತೋರುವ ಪಾತ್ರವಾಗಿ ಬಿಂಬಿತವಾಗಿದೆ. ಜೊತೆಗೆ ಹೆಣ್ಣುಮಕಳ ಜವಾಬ್ದಾರಿ, ಮುಂದಿನ ಹಾಗು-ಹೋಗುಗಳು, ಖರ್ಚು-ವೆಚ್ಚ ಇವುಗಳ ದೃಷ್ಟಿಯಿಂದಲೋ, ಜೊತೆಗೆ ಈಕೆಯ ಬಗ್ಗೆ ತಾತ್ಸಾರ ಮನೋಭಾವ ಹೊಂದುವುದು, ಪಾರ್ವತಿಯನ್ನು ಕಂಡರೆ ಅನುಮಾನಿಸುವುದು, ನಿಂದಿಸುವುದು, ತನ್ನ ಕಾಲಿನಿಂದ ಒದೆಯುವುದು, ಜೊತೆಗೆ ಈಕೆಯ ಮೇಲೆ ಸುಳ್ಳಿನ ಆರೋಪ ಹೊರಿಸುವುದು, ಮೂಢನಂಬಿಕೆಗಳ ಬಗ್ಗೆ ಒಲವು ಹೊಂದಿ ಪೂಜಾರಪ್ಪನ ಬಳಿ ಕರೆದೊಯ್ದು, ಆಕೆಗೆ ಪೂಜಾರಪ್ಪನಿಂದ ಯಾಂತ್ರಿಕವಾಗಿ ತೊಂದರೆ ನೀಡುವುದು ಮತ್ತು ಕಾದಕಬ್ಬಿಣದ ಸರಳಿನಿಂದ ಬರಗುಡ ಹಾಕುವ ನೀಚಕಾರ್ಯಗಳಲ್ಲಿ ತೊಡಗುವಂತಹದು, ಕೊನೆಗೆ ಈಕೆಯನ್ನು

ಮನೆಯಿಂದಲೇ ಬಲತ್ಕಾರವಾಗಿ ಆಚೆ ಹಾಕುವ ನಿರ್ದಯ ಕಠೋರತೆಯನ್ನು ಪ್ರದರ್ಶಿಸುತ್ತಾಳೆ. ಇದಕ್ಕೆ ವಿರುದ್ಧವಾಗಿ ಅದೇ ಊರಿನ ಶಾಂತವ್ವ ಪಾರ್ವತಿಗೆ 'ತಾಯಿ'ಯ ಆಶ್ರಯವನ್ನು ನೀಡುತ್ತಾಳೆ. ಪ್ರೀತಿ, ಪ್ರೇಮ, ವಿಶ್ವಾಸ ಇವು ಜೀವನದ ಭದ್ರ ಬುನಾದಿಗಳು, ಈ ಗುಣಗಳನ್ನು ಬೆಳೆಸಿಕೊಂಡವಳು ಶಾಂತವ್ವ, ಈಕೆ ಪಾರ್ವತಿಯನ್ನು ಭದ್ರಿಯ ಕಪಿಮುಷ್ಟಿಯಿಂದ ಬಿಡಿಸಿ ತನ್ನ ಮಗಳಂತೆ ನೋಡಿಕೊಳ್ಳುತ್ತಾಳೆ. ಪಾರ್ವತಿಯನ್ನು ಹೆಜ್ಜೆಹೆಜ್ಜೆಗೂ ಗಮನಿಸಿ ಆಕೆಯ ಮನಸ್ಸಿಗೆ ಬೇಸರವಾಗದಂತೆ ತಿಳುವಳಿಕೆ ನೀಡುತ್ತಾಳೆ, ಕಠೋರತೆಯ ಬದಲಾಗಿ ಈಕೆ ಆಕೆಯ ಆಸೆಗಳಿಗೆ ಪ್ರೋತ್ಸಾಹ ನೀಡುತ್ತಾಳೆ. ತನ್ನಿಬ್ಬರ ಮಕ್ಕಳಿಗೆ ಈಕೆಯ ಜವಬ್ದಾರಿಯು ಬಗ್ಗೆ ತಿಳಿಸುವುದು, ಪಾರ್ವತಿ ಮಾನಸಿಕವಾಗಿ ಜರ್ಜರಿತವಾದಾಗ ಆಕೆಯನ್ನು ಸರಿಪಡಿಸಲು ಸಾಕಷ್ಟು ಪ್ರಯತ್ನಿಸುತ್ತಾಳೆ. ಆಕೆ ಶಿವಲಿಂಗದ ಬಳಿ ಓಡಿಹೋದಾಗ ಸ್ವತಃ ತನ್ನ ಮಕ್ಕಳೊಡನೆ ಹೋಗಿ ಆಕೆಯನ್ನು ಉಪಚರಿಸುತ್ತಾಳೆ, ರಾಮಯ್ಯ ಮಾಸ್ತರ ಜೊತೆ ಮಾತಾಡಿ ಪಾರ್ವತಿಯ ಮನಸ್ಸಿನ ಮಾರ್ಪಾಡಿನ ಬಗ್ಗೆ ಯೋಚಿಸುತ್ತಾಳೆ. ಕೊನೆಗೆ ಆಕೆಯನ್ನು ತನ್ನ ಮನೆಯ ಸೊಸೆಯಾಗಿ ತಂದುಕೊಳ್ಳುವ ಆಲೋಚನೆಮಾಡಿ ಕಾರ್ಯಪ್ರವೃತ್ತಳಾಗುತ್ತಾಳೆ. ಹೀಗೆ ತ್ರೈಲೂರರ ಕೃತಿಗಳಲ್ಲಿ ಪಾತ್ರಗಳ ವೈರುಧ್ಯತೆ ಮತ್ತು ಸಾದೃಶ್ಯತೆ ಕಂಡುಬರುವುದನ್ನು ನಾವು ಗಮನಿಸಬಹುದಾಗಿದೆ.

ಬೊಮ್ಮನಾಯಕ ಮತ್ತು ನಾರಾಣಪ್ಪ :–

ಸಾದೃಶ್ಯತೆಯ ಪ್ರತೀಕವಾಗಿ ಇವರ ಕಾದಂಬರಿಗಳಲ್ಲಿ ಇಬ್ಬರ ಪಾತ್ರಗಳು ಬಹುಮುಖ್ಯವಾಗಿವೆ. ಅಗ್ನಿಕುಂಡ ಕಾದಂಬರಿಯಲ್ಲಿ ಬೊಮ್ಮನಾಯಕ ಊರಿನ ಯಜಮಾನನಾಗಿದ್ದರೂ ಸಹ ಅಹಂಕಾರಪಡದೆ ಸಹಕಾರ ಮನೋಭಾವನೆ, ದಾನಧರ್ಮ ಮಾಡುವ ಮನೋಭಾವನೆಯ ಗುಣವನ್ನು ಹೊಂದಿರುವುದನ್ನು ಕಾಣಬಹುದು. ಬರಗಾಲದ ಭೀಕರತೆಯಲ್ಲಿ ಊರಿನ ಜನ ಆಹಾರಕ್ಕಾಗಿ ವಲಸೆ ಹೊರಟ ಸಂದರ್ಭದಲ್ಲಿ ಕೆಳವರ್ಗದ ಜನ ಹೆತ್ತತಾಯಿಯನ್ನು ಬಿಟ್ಟು ಹೋದ ಪರಿಸ್ಥಿತಿಯಲ್ಲಿ, ದಾರಿಯಲ್ಲಿ ಕಂಡುಬಂದ 'ನಂಜಿ'ಯೆಂಬ ಮುದುಕಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಆಶ್ರಯ ನೀಡುತ್ತಾನೆ. ಊರಿನಲ್ಲಿ ಹಬ್ಬ ಹರಿದಿನಗಳು ನಡೆದರೆ ಸೇವಾ ಕಾರ್ಯದಲ್ಲಿ ಇವನದು ಎತ್ತಿದಕೈ, ಈತನ ಧರ್ಮನಿಷ್ಠೆಯ ಮಾತುಗಳು, ಪ್ರಾಣಿಗಳ ಬಗ್ಗೆ ಇರುವ ಕರುಣೆ ಇವೆಲ್ಲವೂ ಕಾದಂಬರಿಯಲ್ಲಿ ಬಿಂಬಿತವಾಗಿವೆ.

ಇಂತಹ ಸನ್ನಿವೇಶ, ಗುಣವನ್ನು ಹೊಂದಿರುವ 'ನಾರಾಣಪ್ಪ' ಎಂಬ

ಪಾತ್ರವು 'ಸಮ್ಮಿಳನ' ಕಾದಂಬರಿಯಲ್ಲಿ ಬಿಂಬಿತವಾಗಿದೆ. ಬಡ ಅನಾಥ ಮಗುವನ್ನು ತನ್ನ ಮನೆಯಲ್ಲಿ ಆಳಾಗಿ ಪ್ರಾರಂಭದಲ್ಲಿ ಇರಿಸಿಕೊಂಡರೂ ಸಹಾ ಆತನ ಬಗೆಗೆ ಪ್ರೀತಿ, ಪ್ರೇಮ, ವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ. ನೀಲಕಂಠನಿಗೆ ತನ್ನ ಮಕ್ಕಳಿಗೆ ತೋರುವ ಪ್ರೀತಿಯನ್ನು, ತನ್ನ ಮಕ್ಕಳಿಗೆ ಕೊಡುವ ಸ್ಥಾನಮಾನವನ್ನು ಕೊಡುತ್ತಾರೆ. ಇದಕ್ಕೆ ಕಾರಣ ನೀಲಕಂಠನ ಪ್ರಾಮಾಣಿಕತೆ, ಕಾಯಕದ ನಿಷ್ಠೆ ಮತ್ತು ವಿಧೇಯತೆ ಇರಬಹುದು, ಇದೇನೇ ಇದ್ದರೂ ತಮ್ಮ ಮಕ್ಕಳಿಗೆ ಬಟ್ಟೆ ತಂದಾಗ ಬಟ್ಟೆ ಕೊಡುವುದು, ಹಣಕೊಡುವುದು, ವಿದ್ಯಾಭ್ಯಾಸಕ್ಕೆ ನೆರವಾಗುವುದು, ಕೊನೆಗೆ ಅವನ ತಮ್ಮನಿಗೆ ಮೇಲ್ವರ್ಗದ ಜನತೆಯ ಸಂಬಂಧದ ಪ್ರತೀಕವಾಗಿ ವಿವಾಹವನ್ನು ಏರ್ಪಡಿಸುವುದು, ನೀಲಕಂಠನಿಗೆ ಮದುವೆ ಮಾಡಿಸುವ ಔದಾರ್ಯಗುಣಗಳು ಈ ಪಾತ್ರಗಳಲ್ಲಿ ಕಂಡುಬರಬಹುದು. ಇವರ ಕೃತಿಗಳಲ್ಲಿ ಈ ಪಾತ್ರಗಳು ಅಂದಿನ ವರ್ಗದ ಪ್ರತೀಕವಾಗಿ ನಿಲ್ಲದೆ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಪ್ರತೀಕವಾಗಿ ನಿಲ್ಲುವುದನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿ :-

೧. ತೈಲೂರು ವೆಂಕಟಕೃಷ್ಣ, 'ಅಗ್ನಿಕುಂಡ' ಭಾನುಪ್ರಕಾಶನ, ಮಂಡ್ಯ – ೧೯೭೫ ಪುಟ– ೩

೨. ಅದೇ.. ಪು... ೫

೩. ಅದೇ.. ಪು... ೨೦

೪. ಅದೇ.. ಪು... ೨೧

೫. ಅದೇ.. ಪು... ೯

೬. ಅದೇ.. ಪು... ೧೩

೭. ಅದೇ.. ಪು... ೧೮

೮. ಅದೇ.. ಪು... ೫೩

೯. ಅದೇ.. ಪು... ೧೦೮

೧೦. ಅದೇ.. ಪು... ೫೧

iv) ವರ್ಣನೆ – ನಿರೂಪಣೆ – ಶೈಲಿ [ಭಾಷೆ–ಅಭಿವ್ಯಕ್ತಿ–ಕಥನಕೌಶಲ]

ಅಮೂರ್ತವಾದ ಅನುಭವ ತಲಸ್ಪರ್ಶಿಯಾಗಿ ಭಾಷೆಯ ಮೂಲಕ ಮೂರ್ತಗೊಂಡಾಗಲೇ ಅದು ಸಾಹಿತ್ಯ ಎನಿಸಿಕೊಳ್ಳಲು ಸಾಧ್ಯ. ಒಂದು ಸಾಹಿತ್ಯ ಕೃತಿ ಉತ್ತಮ ಎನಿಸಿಕೊಳ್ಳಬೇಕಾದರೆ, ಏನೇನು ಅಗತ್ಯವೋ, ಮೂಲದ್ರವ್ಯವಾದ ಬದುಕಿನ ಉಕ್ಕಂದ ಕಥಾಸಂವಿಧಾನ, ಪಾತ್ರಪೋಷಣೆ, ಶಿಲ್ಪ, ವೈಚಾರಿಕತೆ ಇತ್ಯಾದಿ. ಅವುಗಳಷ್ಟೇ ಅಥವಾ ಅವುಗಳಿಂದ ಒಂದು ಕೈಮೇಲಾಗಿ ಸಫಲ ಭಾಷಾ ಬಳಕೆ ಅಗತ್ಯವಾಗುತ್ತದೆ, ಬಳಸುವ ಭಾಷೆ ಉಳಿದೆಲ್ಲಾ ಅಂಶಗಳಿಗಿಂತ ಪ್ರಮುಖ ಯಾಕಾಗುತ್ತದೆ ಎಂದರೆ ಆ ಎಲ್ಲಾ ಅಂಶಗಳೂ ಶರೀರಧಾರಣೆ ಮಾಡುವುದು ಮತ್ತು ಉಸಿರಾಡುವುದು ಭಾಷೆಯ ಮೂಲಕವೇ ಆಗಿದೆ. ಆದ್ದರಿಂದ ಭಾಷೆಯ ಸೋಲು ಅಷ್ಟೇ ಪ್ರಮಾಣದಲ್ಲಿ ಅವುಗಳ ಸೋಲೂ ಆಗುವುದರಿಂದ, ಅಭಿವ್ಯಕ್ತಿ ಪರಿಕರಗಳಲ್ಲಿ ಭಾಷೆಗೆ ಪ್ರಥಮ ಸ್ಥಾನ ಸಲ್ಲುತ್ತದೆ. ನಿರೂಪಣೆಯಲ್ಲಿ ಶಕ್ತಿಯುತವಾಗಿ ಭಾಷೆ ಹೇಗೆ ಬಳಕೆಯಾಗುತ್ತದೆ ಎಂಬುವುದೂ ಗಮನಾರ್ಹವಾಗುತ್ತದೆ. ಯಾವುದೇ ಅನುಭವವಾದರೂ ಓದುಗನಿಗೆ ಅದರ ಸಂವೇದನೆ ಭಾಷೆಯ ಮೂಲಕ ತಾನೇ ತಾನಾಗಿ ತಂತ್ರವಿನ್ಯಾಸ ಚೌಕಟ್ಟನ್ನು ಆಚ್ಛಾದಿಸಿಕೊಳ್ಳುವ ಭಾಷೆ ಅದನ್ನು ಮತ್ತಷ್ಟು ಉಜ್ವಲಗೊಳಿಸುವುದರ ಜೊತೆಗೆ ಅದರ ಅನಿವಾರ್ಯ ಅಂಗವೂ ಆಗುತ್ತದೆ.

'ಅಗ್ನಿಕುಂಡ' ಕಾದಂಬರಿಯಲ್ಲಿ ಲೇಖಕರು ಆದರ್ಶಪ್ರಾಯವಾದ ಸರಳ ಆಡುಭಾಷೆಯನ್ನು ಅವಲಂಬಿಸಿದ್ದಾರೆ. ಕ್ಲಿಷ್ಟತೆಗಾಗಲೀ, ಚಮತ್ಕಾರಕ್ಕಾಗಲೀ, ವೈಭವೀಕರಣಕ್ಕಾಗಲೀ ಇಲ್ಲಿ ಅವಕಾಶವಿಲ್ಲ. ಉತ್ಕಟ ಪ್ರಸಂಗಗಳಲ್ಲಿ ಸಹಜವಾಗಿಯೆ ಭಾಷೆ ಕಾವ್ಯಮಯವಾಗುತ್ತದೆ. ಅಲ್ಲಲ್ಲಿ ಸಹಜವಾದ ಉಪಮೆಗಳು, ರೂಪಕಗಳು, ಜಾಣ್ನುಡಿಗಳು ಭಾಷೆಯ ಕಾಂತಿಯನ್ನು ಹೆಚ್ಚಿಸುತ್ತವೆ. **'ಹಣೆ, ಗದ್ದ, ಮೂಗು, ಎಲ್ಲ ದಂತದಲ್ಲಿ ಕೊರೆದಿಟ್ಟಂತೆ ಹೊಳೆಯುತ್ತಿದ್ದವು'. 'ಹೊಂಗೆಯ ಮರದ ನೆರಳು ತಾಯಿಯ ನೆರಳಂತೆ', 'ಪಾರ್ವತಿ ಚಂದುಳ್ಳಿ ಚಲುವೆಯಂತೆ', 'ಪಾರ್ವತಿಯ ಮನಸ್ಸಿನ ನಿರ್ಧಾರ ಕಲ್ಲಿನ ಕಂಬದಂತೆ', 'ಮರದ ನೆರಳು ದೊಡ್ಡ ಅಸ್ಥಿಪಂಜರದಂತೆ ಗೋಚರಿಸುತ್ತಿತ್ತು'** ಎಂಬ ಉಪಮೆಗಳು ಅತ್ಯಂತ ಧ್ವನಿ ಪೂರ್ಣವಾಗಿವೆ. **"ಮಗ ಏನಾರಾ ಮಾಡಿ ಈ ಜೀವ ಉಳಿಸಬೇಕಲ್ಲ"? ಗೋವುಗಳ್ಗೆ ಮೋಸ ಮಾಡ್ಬೇಡಿ ಕಂಡ್ರಲಾ, ದ್ಯಾವ್ರು ಒಳ್ಳೇದ್ ಮಾಡಾಕಿಲ್ಲ, ಮೂಕ ಬಸವಣ್ಣ.....ಎಲ್ಲಾರ ಹುಡ್ಕಿ ಹುಲ್ ತಂದಾಕಿ,** ಇವು ಬೊಮ್ಮನಾಯಕನ ಧರ್ಮನಿಷ್ಠೆಯ ಮಾತುಗಳು, ಪ್ರಾಣಿಗಳ ಬಗ್ಗೆ ಕರುಣೆ

ಸೂಚಕವಾಗಿರುವುದಲ್ಲದೆ ಸಮಯೋಚಿತ ಪದವೂ ಆಗಿದೆ.

'ಎದ್ಮಾರಿ ಕಣ್ಣಿನ ತಾಪ', 'ಇದ್ನ ಹಟ್ಟೀತಕ್ಕೆ ಹೊತ್ಕೋಹೋಗಕೆ ನಂಜಿ ಕೆಟ್ಟೋದ್ಲ', 'ಬೊಮ್ಮನಾಯಕನ ಅಂತರಾತ್ಮ ಎಂದೂ ಮಿಡಿಯುತ್ತಿತ್ತು' ಎಂಬ ರೂಪಕಗಳು ಆ ವ್ಯಕ್ತಿಗಳ ಗುಣ ಸ್ವಭಾವನ್ನು ಪರಿಚಯಿಸುತ್ತವೆ.

ಹಾಸಿಗೆ ಇದ್ದಷ್ಟು ಕಾಲು ಚಾಚು (ಪುಟ ೧೦೪), ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ(ಪು.೧೦೮), ಬಂದದಾರಿಗೆ ಸುಂಕವಿಲ್ಲ, ಎಲ್ಲಾರ ಇರಿ ನಿಮ್ಮೊಟ್ಟೆ ತಣ್ಗಿರ್ಲಿ, ಉಂಡ್ರಷ್ಟೇ ನೀರ್ಬೇಕು, ಊಟವೇ ಇಲ್ವಲ್ಲಾ, 'ಅಂತೂ ಇಂತೂ ಕುಂತಿಮಕ್ಕಳಿಗೆ ರಾಜ್ಯಿಲ್ಲ' ಮಾಡಬಾಳ ಮಂದಿಗೆ ಊಟಿಲ್ಲ(೯೩), ಜಟ್ಟಿ ಬಿದ್ರೂ ಮೀಸೆ ಮಣ್ಣಾಗಲಿಲ್ಲ, ಸತ್ತು ಸ್ವರ್ಗ ಸೇರ್ಕಳ್ಳಿ, ಸಿಕ್ಕಿದವರಿಗೆ ಸೀರುಂಡೆ, ಕುಂಬಳಕಾಯಿ ಕಳ್ಳ ಅಂದರೆ ಹೆಗಲ ಮುಟ್ಟಿಕೊಂಡ, ದೀವಳಿಗೇಲಿ ದನಕೆಣಕಬೇಡ ಎಂಬಂತಹ ನೀತಿಯುಕ್ತ ಗಾದೆಗಳು ಹಾಗೂ ನಾಣ್ಣುಡಿಗಳು ಕಾದಂಬರಿಯುದ್ದಕ್ಕೂ ಕಾಣಬಹುದು. "ಅದೇನೇ ಬರ್ಲಿ ಏಳು ನಂಜಿ" 'ನಮ್ಮ ಹಿರೇರ್ಗೆ ನಾನೇ ಮಸಿ ಬಳೀಲಾ'?, 'ಇಲ್ಲಾ ಅಂದ್ಮಾಕೆ ಇಲ್ಲ', ಈ ಹೊತ್ನಲ್ಲಿ ಹಟ್ಟಿಗಳ ಮುಂದೆ ದೀಪ ಉರಿಬೇಕಿತ್ತು(೧೬) ಊರು ಮ್ಯಾಲೆಗ್ಯಾನ ಇದ್ದೋರು ಬತ್ತಾರೆ, 'ಹುಡ್ಕಿ ಹುಲ್ ತಂದಾಕಿ', ಸೌರಸ್ಕಳ್ಳಿ, ಹೈಕ್ಳು–ಮಕ್ಳು, ತಕ್ಕಬಂದೆ ಮುಂತಾದ ಗ್ರಾಂಥಿಕ ರೂಪದ ರಚನೆಗಳು ಈ ಕಾದಂಬರಿಯುದ್ದಕ್ಕೂ ಕಂಡುಬಂದಿವೆ.

ಜೀವನದ ಮತ್ತು ಬರಗಾಲದ ಪರಿಸ್ಥಿತಿಯ ಬಗೆಗಿನ ತಾತ್ವಿಕ ವಿಚಾರಗಳು ಬೊಮ್ಮನಾಯಕನ ಮಾತುಗಳಲ್ಲಿ ವ್ಯಕ್ತವಾಗಿವೆ. "ಯಾವ ಪಾಪದ ಫಲ ಇದೆಲ್ಲ? ಈ ಪಾಪದ ಉಗಮವಾದರೂ ಎಲ್ಲಿದೆ, ಜೀವನವನ್ನು ರೂಪಿಸುವ ಹೊಣೆಯೇ ನಮ್ಮದಲ್ಲವೇನೋ? ಹೊನ್ನಾಳಿಯ ನೆಲ ನಿತ್ರಾಣವಾಗಿದೆಯೇನೋ, ಇಲ್ಲದಿದ್ದರೆ ಈ ರೀತಿಯ ವಿಕೃತಿಯೇ ಅಥವಾ ಜೀವನದಲ್ಲಿ ಪಾಪ ಅಪರಿಹಾರ್ಯವೇ? ಸ್ವರ್ಗದಂತಿದ್ದ ಹಳ್ಳಿ ಇಂಗ್ಯಾಕಾಯ್ತು, ಮಾಡೋಹಬ್ಬದಲ್ಲಿ ಏನಾರಾ ತಪ್ಪಾಯಿತಾ? ದ್ಯಾವರ್ನ ಸರಿಯಾಗಿ ನಡಸ್ಕಳ್ಳಿಲ್ವಾ, ಈ ಜೀವನ ಮನುಷ್ಯನ ಅಂತ:ಸತ್ವವನ್ನೇ ಪರೀಕ್ಷಿಸಬೇಕೆಂದು ನಿರ್ಮಿತವಾದ ದೇವರ ಮಾಯೆಯಿರಬೇಕು"(ಪುಟ೪೧).

ಸಂವಾದ ರಚನೆಯಲ್ಲಿ ಲೇಖಕರು ಅಪೂರ್ಣಕೌಶಲ್ಯವನ್ನು ಮೆರೆದಿದ್ದಾರೆ, ಸಂಭಾಷಣೆಗಳೆಲ್ಲಾ ಬಳಕೆ ಮಾತಿನಲ್ಲಿಯೇ ಬರೆಯಲ್ಪಟ್ಟಿದೆ, ನಾಟಕೀಯವಾದ ಸನ್ನಿವೇಶಗಳಲ್ಲಿ ಲೇಖಕರು ಆಯಾ ಪಾತ್ರಗಳಿಗನುಗುಣವಾಗುವಂತೆ ವಿವಿಧ ಶೈಲಿಯನ್ನು ಉಪಯೋಗಿಸಿದ್ದಾರೆ. ಪಾರ್ವತಿ ಕಾದಂಬರಿಯಲ್ಲಿ 'ಶ್ರೀಕೃಷ್ಣ'

ಪಾತ್ರಧಾರಿಯನ್ನು ಒಬ್ಬ ಪ್ರೇಕ್ಷಕ ತಬ್ಬಿಹಿಡಿದು "ನಿನ್ನ ಮಹಾವಿಷ್ಣುವಿನ ಅವತಾರವನ್ನು ತೋರಿಸು, ನಾನು ನೋಡಬೇಕು, ಆ ಬೂಟಾಟಿಕೆ ಅವತಾರ ನನಗೆ ಬೇಡ' ಎಂದು ಎಳೆಯುವುದು, ಅರ್ಜುನ ಪಾತ್ರಧಾರಿ ಮಣಮಣನೆ ನೋಡುತ್ತಿದ್ದಂತೆ ಆವೇಶ ಉಕ್ಕಿಬಂದಾಗ 'ಕೌರವರನ್ನು ಸದೆಬಡಿದು ಬರುವೆ' ಎಂದು ಒಳಹೋದಾಗ ಶ್ರೀಕೃಷ್ಣನ ಪಾತ್ರಧಾರಿ "ಮಾಸ್ತರೇ ಈ ದೃಶ್ಯ ಇನ್ನೂ ಮುಗಿದಿಲ್ಲ ಅರ್ಜುನನನ್ನು ಬರಹೇಳಿ" ಎಂದಾಗ ಪ್ರೇಕ್ಷಕರು ನಗೆಗಡಲಲ್ಲಿ ಮುಳುಗಿದರು(ಪು ೯೦).

ಬೊಮ್ಮನಾಯಕನ ಕುಟುಂಬದವರು ಬಳಸುವ ಹಳ್ಳಿಯ ಗ್ರಾಮ್ಯ ಭಾಷೆಯ ಮಾತುಗಳು, ಗೋಪಾಲ ಹಾಡುವ ಲಾವಣಿ, ಅಧಿಕಾರಿಗಳ ಢಾಂಬಿಕತೆಯ ಮನಸೆಳೆಯುವ ವಾಗ್ವೈಖರಿ, ಗಂಗವ್ವನ ಅಂತರಾತ್ಮದ ನುಡಿಗಳು, ಪತ್ರಕರ್ತೆಯ ಚಾತುರ್ಯದ ಮಾತುಗಳು, ವ್ಯಾಪಾರಿಗಳ ಸುಳ್ಳಿನ ಹೇಳಿಕೆ, ರಾಮಯ್ಯ ಮಾಸ್ತರರ ನುಡಿಗಳು, ಭದ್ರಿಯ ಬಿನ್ನಾಣದ ನುಡಿಗಳು, ನಾರಾಯಣಪ್ಪರ ಮೃದುನುಡಿಗಳು, ಪಾರ್ವತಿಯ ಮಧುರ ಮಾತುಗಳು, ಶಿವರುದ್ರನ ವೈಚಾರಿಕ ನಿಲುವುಗಳು, ಇವೆಲ್ಲಾ ಸ್ವಾಭಾವಿಕವಾಗಿಯೇ ಬಣ್ಣಗೊಂಡು ಬಂದಿವೆ ಎಂಬುದು ಎಲ್ಲರೂ ಒಪ್ಪುವ ಅಂಶವಾಗಿದೆ.

ನಿರೂಪಣೆ :–

ಕಾದಂಬರಿಕಾರನ ಪ್ರಜ್ಞಾಪೂರ್ವಕ ಪ್ರಯತ್ನದಿಂದ ರಚಿತವಾಗುವ ತಂತ್ರ ವಿನ್ಯಾಸದ ಹಿಂದಿನ ದೃಷ್ಟಿ ಅನುಭವ ಎಂತದ್ದು ಎಂಬುದನ್ನು ನೋಡುವುದು ಮುಖ್ಯ. ಹೊನ್ನಾಳಿ ಗ್ರಾಮದಲ್ಲಿ ಬಂದೆರಗಿದ ಭೀಕರ ಬರಗಾಲದ ತೀವ್ರತೆಯಲ್ಲಿ ಬೆಂದು ಬಸವಳಿದ ಗ್ರಾಮೀಣ ಜನರ ಜೀವನವನ್ನು ಚಿತ್ರಿಸುವ ಕಾದಂಬರಿ ಅಲ್ಲಿನ ವ್ಯಕ್ತಿಗಳ ಆಸೆ–ಆಕಾಂಕ್ಷೆಗಳು, ಕ್ಲಿಷ್ಟಕಾಲದಲ್ಲಿ ಬಂದೊದಗಿದ ವಿಪತ್ತುಗಳು, ಅವರ ನಿರ್ಭರತೆ, ಪ್ರತಿಷ್ಠೆ, ದರ್ಪ, ಸ್ವಾರ್ಥ, ಅಭಿಮಾನ, ಹಠ, ಸಾಂಸ್ಕೃತಿಕ ಮೌಲ್ಯಗಳು ಮತ್ತು ಸಮಾಜದ ಮೂಢನಂಬಿಕೆಗಳು, ಅದರ ವಿರುದ್ಧದ ವೈಚಾರಿಕ ನಿಲುವುಗಳನ್ನು ಚಿತ್ರವತ್ತಾಗಿಸುವ ಈ ಕಾದಂಬರಿಯಲ್ಲಿ ಲೇಖಕರ ಅನುಭವ ಶ್ರೀಮಂತಿಕೆ ಇದೆ.

ಕಾದಂಬರಿಯಲ್ಲಿ ಪಾತ್ರಗಳ ಬಾಹುಳ್ಯತೆ ಇರುವುದರಿಂದ ಅವುಗಳ ರಚನೆಯಲ್ಲಿ ವೈವಿಧ್ಯವಾಗಲಿ, ಬೆಳವಣಿಗೆಯಾಗಲಿ ಕಂಡುಬರಲು ಸಾಧ್ಯವಿಲ್ಲ, ಆದರೂ ಪಾತ್ರಗಳು ಮತ್ತು ಅವುಗಳ ಅಂತರ್ಮಥನಗಳು, ಘಟನೆಗಳು, ವಿವರಣೆಗಳು ಸ್ವಲ್ಪವೂ ಆಚೆ–ಈಚೆ ಹೋಗದೆ ವಸ್ತುವಿನ ವಿನ್ಯಾಸದಲ್ಲಿ

ಸಮಯೋಚಿತವಾಗಿ ಸೇರಿಕೊಂಡಿವೆ. ಕಾದಂಬರಿಯಲ್ಲಿ ಅನೇಕ ಘಟನೆಗಳು ಏಕಕಾಲದಲ್ಲಿ ಜರುಗಿದರೂ ಕತೆಯ ಓಟಕ್ಕೆ ಅಡ್ಡಿಯನ್ನುಂಟುಮಾಡುವುದಿಲ್ಲ. ಬರಗಾಲದ ಭೀಕರ ಪ್ರವಾಹದಂತೆ ಕಥೆ ನೇರವಾಗಿ ಒಂದೇ ದಿಕ್ಕಿನಲ್ಲಿ ಹರಿಯುತ್ತದೆ. ಲೇಖಕರು ಕೃತಿಯನ್ನು ಹಲವು ಭಾಗಗಳಾಗಿ ವಿಂಗಡಿಸಿರುವುದು ಅರ್ಥಪೂರ್ಣವಾಗಿದೆ. ಮೊದಲನೆ ಭಾಗದಲ್ಲಿ ಬೊಮ್ಮನಾಯಕರು ಊರಿನ ಪ್ರಮುಖ ಯಜಮಾನರಾಗಿದ್ದಾರೆ, ನಂಜಿಯನ್ನು ಬಿಟ್ಟು ವಲಸೆಹೋದ ಮಕ್ಕಳ ನಂತರದ ಘಟನೆಗಳನ್ನು ಈ ದೃಷ್ಟಿಯಿಂದ ನೋಡಬಹುದು. ಬರಗಾಲಕ್ಕೆ ಜನರ ಜೀವನದಲ್ಲಿ ವ್ಯತ್ಯಯ ಉಂಟಾಗುವುದು, ಅಗತ್ಯ ವಸ್ತುಗಳ ಅಭಾವ, ಇದರ ಜೊತೆಯಲ್ಲಿ ಬೋರೇದೇವರ ಗುಡಿಯ ಬಳಿಯಿರುವ ಬಂಡೆಯನ್ನು ಹೊಡೆದುಹಾಕುವುದು, ದನಕರುಗಳ ದಾರುಣ ಸಾವು ಈ ಭೀಕರತೆಯನ್ನು ತಡೆದುಕೊಳ್ಳುವ ಶಕ್ತಿಯಿಲ್ಲದೆ ಹಳ್ಳಿಯು ತತ್ತರಿಸುತ್ತದೆ.

ಮತ್ತೊಂದು ಭಾಗದಲ್ಲಿ ಸಾವು–ಬದುಕಿಗಾಗಿ ನಡೆಯುವ ಹೋರಾಟದ ಪರಿಸ್ಥಿತಿ, ಗೌಡರ ಮನೆತನವು ಬರಗಾಲದ ತೀವ್ರತೆಗೆ ಸಿಲುಕಿ ನಿಧಾನವಾಗಿ ಕುಸಿಯುವುದನ್ನು ಚಿತ್ರಿಸಿದ್ದಾರೆ. ಹನುಮನಾಯಕ ಕೂಲಿಕೆಲಸಕ್ಕೆ ಸೇರುವುದು, ಸ್ವತಃ ಬೊಮ್ಮನಾಯಕ ಕಲ್ಲುಕುಟ್ಟುವ ಕೆಲಸಕ್ಕೆ ಸೇರಲು ತೀರ್ಮಾನಿಸುವುದು, ಪರಿಸ್ಥಿತಿಯನ್ನು ನಿಭಾಯಿಸಲು ತೀವ್ರ ಕಳಕಳಿಯಿಂದ ಪ್ರಯತ್ನಪಡುತ್ತಾರೆ. ಮುಂದಿನ ಭಾಗದಲ್ಲಿ ಈ ಪರಿಸ್ಥಿತಿಯಲ್ಲಿ ಬೊಮ್ಮ ತನ್ನ ಹೆತ್ತ ಮಗುವನ್ನು ಮಾರಲು ಆಲೋಚಿಸಲು ಕಾರ್ಯಪ್ರವೃತ್ತನಾಗುವುದು, ಬರಗಾಲದಲ್ಲಿ ಕೊಡತಕ್ಕ ಪರಿಹಾರದಲ್ಲಿ ಅಧಿಕಾರಿಗಳು ಶೋಷಣೆ ಮಾಡುವ ಸಂದರ್ಭ, ಹಗಲುದರೋಡೆ, ಹುಡುಗಿಯರ ಅಪಹರಣ, ನಂತರ ವಲಸೆಹೋಗುವ ಚಿತ್ರಣವಿದೆ. ಮುಖ್ಯ ಘಟನೆಗಳ ಆಯ್ಕೆ, ಜೋಡಣೆಯಲ್ಲಿ ಅದ್ಭುತ ಕೌಶಲವನ್ನು ತೋರಿದ್ದಾರೆ.

ಕಾದಂಬರಿ ತನ್ನ ವಸ್ತುವನ್ನು ಪ್ರದರ್ಶಿಸಲು ಹಾಗೂ ತಾನು ಹೇಳಬೇಕೆಂದಿರುವ ಸಂದೇಶವನ್ನು ಸಾರಲು ಆರಿಸಿಕೊಳ್ಳುವ ಪಾತ್ರಸೃಷ್ಟಿ ವಿಧಾನ ಅದರ ಉತ್ತಮಿಕೆಗೆ ಕನ್ನಡಿಯಾಗಿದೆ. 'ಅಗ್ನಿಕುಂಡ', 'ಸಮ್ಮಿಳನ' ಮತ್ತು 'ಪಾರ್ವತಿ' ಕಾದಂಬರಿಗಳಲ್ಲಿನ ಪಾತ್ರಗಳನ್ನು ಗಮನಿಸಿದಾಗ ಒಂದು ವಿಶೇಷತೆ ಕಾಣುತ್ತದೆ, ಈ ಕಾದಂಬರಿಯ ಪಾತ್ರ ನಿರ್ಮಾಣದಲ್ಲಿ ಒಂದು ಅಪರೂಪ ಸಂಯೋಜನೆ ಇದೆ. ಸಾದೃಶ್ಯಾತ್ಮಕ ವೈದೃಶ್ಯಾತ್ಮಕ ಗುಣಗಳುಳ್ಳ ಬಹುತೇಕ ಜೋಡಿಗಳು ಕಾದಂಬರಿಯ ಬಂಧದ ತುಂಬ ಚೆಲ್ಲಿಕೊಂಡಿವೆ. 'ಬೊಮ್ಮ' ಮನುಷ್ಯ ಸಂಬಂಧದ ಅವನತಿಯ ಸಂಕೇತವಾದರೆ 'ಹನುಮನಾಯಕ' ಮನುಷ್ಯ ಸಂಬಂಧ

ಸ್ಥಾಪನೆಯ ಮತ್ತು ಅದನ್ನು ಬೆಳೆಸುವ ಪ್ರತೀಕವಾಗಿದ್ದಾರೆ. ಇದೇ ಬಗೆಯ ವಿಮುಖ ಪರಿವರ್ತನೆಯ ವಿಕಾಸವನ್ನು ವೈದೃಶ್ಯ ಪಾತ್ರಗಳಾದ ಭದ್ರಿ, ಶಾಂತವ್ವ ಇವರಲ್ಲಿಯು ಕಾಣಬಹುದು, ಭದ್ರಿ ಕೇವಲ ಸ್ವಾರ್ಥ, ಲೋಭತನದ ಆಸೆಯಿಂದ ಪಾರ್ವತಿಯನ್ನು ಮನೆಯಿಂದ ಆಚೆ ಹಾಕುವ ನಿರ್ಧಾರ ಕೈಗೊಂಡರೆ, ಪ್ರೀತಿ, ವಿಶ್ವಾಸ, ಪ್ರೇಮ, ಮಾತೃವಾತ್ಸಲ್ಯ ಗುಣಗಳನ್ನು ಬೆಳೆಸಿಕೊಂಡಿರುವ ಶಾಂತವ್ವ ಪಾರ್ವತಿಯನ್ನು ತನ್ನ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳುತ್ತಾಳೆ.

ತಂತ್ರ ವಿನ್ಯಾಸದಲ್ಲಿ ಅಲ್ಲಲ್ಲಿ ಬಳಕೆಯಾಗಿರುವ ಇತರ ವಿಧಾನಗಳನ್ನು ಸ್ಥೂಲವಾಗಿ ಸಂಗ್ರಹಿಸಬಹುದು. ಬೊಮ್ಮನಾಯಕನ ಕನಸುಗಳು, ಪಾರ್ವತಿಯ ಕನಸುಗಳು ಇವು ಕಥಾ ಓಟದ ಮುನ್ಸೂಚನೆಗೆ ಓದುಗರನ್ನು ಪೂರ್ವಸಿದ್ಧತೆಗೊಳಿಸುತ್ತವೆ. ಪ್ಲಾಷ್ ಬ್ಯಾಕ್ ವಿಧಾನ ಪ್ರಸ್ತುತ ಘಟನೆಗಳಿಗೆ ಒಂದು ಅರ್ಥಮೌಲ್ಯ ಒದಗಿಸುವ ರೀತಿ ಇವುಗಳ ಜೊತೆಗೆ ಆಕಸ್ಮಿಕಗಳು ಕಥಾ ಪೋಷಣೆಗೆ ನೆರವಾಗುತ್ತವೆ. ಬೊಮ್ಮನಾಯಕ ತಮ್ಮ ಊರಿಗೆ ಮಳೆಯಾಗುವ ಬಗ್ಗೆ ಕಂಡಕನಸು, ನೀಲಕಂಠ ಆಹಾರ ಬಿಕ್ಷೆ ಬೇಡುವಾಗ ಶ್ರೀಮಂತನಾಗಬೇಕೆಂದು ಕಾಣುವ ಕನಸು, ಪಾರ್ವತಿಯ ಬಾಲ್ಯದ ಕನಸುಗಳು, ಮೊದಲಾದೆಡೆಗಳಲ್ಲಿ ಗುರ್ತಿಸಬಹುದು. ಇದಲ್ಲದೆ ಒಂದು ಚಿತ್ರವನ್ನು ಕೊಡುವಾಗ ಅಲ್ಲಿಯ ಪಾತ್ರಗಳ ಮೂಲಕ ಕಣ್ಮುಂದಿಲ್ಲದ ಇತರ ಪಾತ್ರಗಳ ಕ್ರಿಯೆಗಳ ಪ್ರಸ್ತಾಪದಂತ ರಚನಾ ವಿಧಾನಗಳೂ ಇಲ್ಲಿವೆ.

ಘಟನೆಗಳನ್ನು ನಾಟ್ಯೀಕರಿಸುವಲ್ಲಿ, ಆವರಣದ ಸೃಷ್ಟಿಯಲ್ಲಿ, ಪಾತ್ರಗಳ ಕಲ್ಪನೆಯಲ್ಲಿ ತೈಲೂರರು ಸಾಧಿಸಿದ ಕಲೆ ನಮ್ಮನ್ನು ತಲೆಬಾಗಿಸುತದೆ. ಆದರೂ ಪಾತ್ರಗಳಲ್ಲಿನ ಆಂತರಿಕ ತುಮುಲವನ್ನಾಗಲೀ, ಭಾವೋದ್ವೇಗಗಳನ್ನಾಗಲೀ ದ್ವಂದ್ವಗಳ ಘರ್ಷಣೆಯನ್ನಾಗಲೀ ವ್ಯಕ್ತಿಗತವಾಗಿ ಚಿತ್ರಿಸುವ ನಿರೂಪಣೆಯ ಧಾಟಿ ಇಲ್ಲಿ ಕಂಡುಬರುವುದಿಲ್ಲವೇನೋ ಎಂದೆನಿಸುತ್ತದೆ.

ಶೈಲಿ :-

ಇತ್ತೀಚಿನ ದಿನಗಳಲ್ಲಿ ಬರಗಾಲದ ಬವಣೆಯನ್ನು ಕುರಿತಂತೆ ಕಾದಂಬರಿ ಬರೆಯುತ್ತಿರುವುದು ಕನ್ನಡ ಸಾಹಿತ್ಯದಲ್ಲಿ ವಿರಳ, ಆದರೆ ಅಂತಹ ಸಾಹಸಕ್ಕೆ ಕೈಹಾಕಿರುವ ತೈಲೂರು ವೆಂಕಟಕೃಷ್ಣ ಅವರು ಕಾದಂಬರಿಯಲ್ಲಿ ಬರಗಾಲದ ನೈಜಚಿತ್ರಣ ನೀಡಿದ್ದಾರೆ. ಕಥಾ ಸಂವಿಧಾನಕ್ಕೆ ಅನುಗುಣವಾಗಿ ಸೃಷ್ಟಿಸಿರುವ ವಾತಾವರಣವೂ ಕಾದಂಬರಿಯ ಮಹತ್ವದ ಅಂಗ, ವರ್ಣನಾತ್ಮಕ ಭಾಗಗಳು ವಿರಳವಾಗಿದ್ದರೂ ಸೃಷ್ಟಿಸಿರುವ ವಾತಾವರಣ ಸೂಕ್ಷ್ಮವಾಗಿದೆ.

ಲೇಖಕರು ಬರಗಾಲದ ಪರಿಸ್ಥಿತಿಯನ್ನು ಈ ಕಾದಂಬರಿಯಲ್ಲಿ ಸುಸ್ಪಷ್ಟವಾಗಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದು. "ನೆತ್ತಿಯ ಮೇಲೆ ಸುಡುಬಿಸಿಲು, ಕಾದ ಬಾಂಡಲಿಯಂತೆ ನಿಂತಜಾಗ, ಹೊಲದಲ್ಲಿ ಜೋಳದ ಕಡ್ಡಿಗಳು ಒಣಗಿ ಹಿಪ್ಪೆಯಾಗಿದ್ದವು, ಉರಿಬಿಸಿಲಿನ ಝಳಕ್ಕೆ ಬೆಂಕಿಯೇ ಧಗ್ಗೆಂದು ಹೊತ್ತಿ ಉರಿಯುವಂತಾಗಿದೆ. ದನಕರುಗಳು ತಮ್ಮ ಅಸ್ಥಿಪಂಜರಗಳ ದರ್ಶನಕೊಟ್ಟು ಅತ್ತಿತ್ತ ತೂರಾಡುತ್ತಿವೆ, ಕೆಲವು ಕಾದ ಭೂಮಿಯ ಮೇಲೆ ಉರುಳಿಕೊಂಡಿವೆ, ಮರಗಿಡಗಳು ನೆರಳು ಕೊಡಲಾಗದೆ ತತ್ತರಿಸುತ್ತಿವೆ, ಬಿದ್ದ ದನಕರುಗಳ ಮಾಂಸ ಕಾಗೆ ಹದ್ದುಗಳಿಗೆ ಔತಣ ಆದರೆ, ಅವುಗಳ ಔತಣದಲ್ಲಿ ಅಂಥರುಚಿಯು ಇಲ್ಲ! ಕಾರಣ ಬರರಾಕ್ಷಸ ಪುಷ್ಕಳ ರಕ್ತವನ್ನು ಹೀರಿ ಬರಡನ್ನು ಬಿಸಾಡಿದ್ದಾನೆ, ಬರಡು ಮಾಂಸವೇ ಅವುಗಳಿಗೆ ಪರಮಾನಂದವಾಗಿದೆ". ಇದು ಅವರ 'ಅಗ್ನಿಕುಂಡ' ಕಾದಂಬರಿಯ ಬರವಣಿಗೆ ಶೈಲಿಗೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ.

'ಸಮ್ಮಿಳನ' ಕಾದಂಬರಿಯಲ್ಲಿ ಬಡ ಅನಾಥ ಮಕ್ಕಳು ವಾಸಿಸುವ ಕೊಳಗೇರಿಯ ವಾತಾವರಣವನ್ನು ಚಿತ್ರಿಸಿದ್ದಾರೆ. "ನಮ್ಮ ಅರಗಿನ ಮನೆಯ ಮೇಲ್ಛಾವಣಿ ಗೋಣಿತಾಟು, ನೆಲ್ಲುಲ್ಲು, ಕಾಗದ ಬಟ್ಟೆಯಚೂರು, ಪ್ಲಾಸ್ಟಿಕ್ ಚೀಲಗಳಿಂದ ಸಮ್ಮಿಶ್ರಣಗೊಂಡಿತ್ತು, ಸುಂದರ ನಗರದವರು ನಡೆಸುವಂತೆ ನಮ್ಮಲ್ಲಿಯೂ ಹಬ್ಬ ಹರಿದಿನ, ಮದುವೆ, ಹೊಸಸಂಸಾರ, ವಂಶಾಭಿವೃದ್ಧಿ, ತಿಥಿ ಎಲ್ಲವೂ ಈ ಗುಡಿಸಲುಗಳಲ್ಲೇ ನಡೆದು, ನೀರು, ಸ್ನಾನ, ಕೊಠಡಿ, ಶೌಚಗೃಹ ಯಾವುದರ ವ್ಯವಸ್ಥೆಯೂ ಇಲ್ಲ ಕೊಂಪೆಗೆ, ಅತಿಥಿಗಳಂತೆ ಅಪ್ಪಳಿಸುವ ಪ್ಲೇಗ್, ಅತಿಸಾರ, ಉಷ್ಣಬೇಧಿ, ಕ್ಷಯ, ನ್ಯುಮೋನಿಯಾ ಇವು ನಮ್ಮ ಕೊಂಪೆಯಲ್ಲಿಯೇ ಹುಟ್ಟಿದವೋ ಏನೋ! ಸಾವನ್ನು ಎದುರು ನೋಡುತ್ತಾ ನರಳುತ್ತಾ, ಕೆಮ್ಮುತ್ತಾ ಮಲಗಿವೆ, ಇಷ್ಟಲ್ಲದೆ ಕೊಂಪೆಯಲ್ಲಿ ವ್ಯಭಿಚಾರ, ಕುಡಿತ, ಜಗಳ, ಕಳ್ಳತನ, ಕ್ರೌರ್ಯ, ಜೂಜುಗಾರಿಕೆಗಳು ಇದ್ದರೂ ಪ್ರಾಮಾಣಿಕತೆ, ದೈವಭಕ್ತಿಗೆ ಕೊರತೆ ಇಲ್ಲ, ನರಕದಲ್ಲೂ ಸ್ವರ್ಗವನ್ನು ಸೃಷ್ಟಿಸಿ ಸುಖಿಸುವ ಪುಣ್ಯಾತ್ಮರು ಇರುವರೆಂದರೆ ಆಶ್ಚರ್ಯವಾಗದೇ ಇರಲಾರದು, ಅದೇ ನಮ್ಮ ಕೊಳಕು ಕೊಂಪೆ".

ಸಮಾಜವನ್ನು ಬಿಟ್ಟು ಜೀವನವಿಲ್ಲ, ಜೀವನದ ಪ್ರತಿರೂಪ ಸಾಹಿತ್ಯವಾಗಿದೆ. ಸಮಾಜ ಬಿಟ್ಟು ಯಾವ ಕೃತಿಯೂ ರೂಪುಗೊಳ್ಳಲು ಸಾಧ್ಯವಿಲ್ಲ. ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ, ಸಾಹಿತಿಯೂ ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವುದರಿಂದ ಮತ್ತು

ಸಾಮಾಜಿಕ ಸಂಪರ್ಕ ಮಾಧ್ಯಮವಾದ ಭಾಷೆಯ ಮೂಲಕವೇ ತನ್ನ ಸಮಾಜದೊಂದಿಗೆ ಕೃತಿ ಮುಖೇನ ವ್ಯವಹರಿಸುವುದರಿಂದ ಸಾಹಿತಿಯಾದವನು ತನ್ನ ಸಮಕಾಲೀನ ಸಮಾಜದ ಬಗ್ಗೆ ಮತ್ತು ಸಾಮಾಜಿಕ ಮಾಧ್ಯವಾದ ಭಾಷೆಯ ಬಗ್ಗೆ ವಿಶೇಷರೀತಿಯ ಎಚ್ಚರವನ್ನು ತಾಳಿರುತ್ತಾನೆ. ಅದೇರೀತಿ 'ಸಮ್ಮಿಳನ' ಕಾದಂಬರಿಯು ಒಂದು ಸಾಮಾಜಿಕ ಕಾದಂಬರಿಯಾಗಿದ್ದು, ಈ ಕಾದಂಬರಿಯಲ್ಲಿ ಕೆಳವರ್ಗದ ಜನಜೀವನವನ್ನು, ಕಷ್ಟಕಾರ್ಪಣ್ಯಗಳನ್ನು ಲೇಖಕರು ತಮ್ಮದೇ ಆದ ಬರವಣಿಗೆ ಶೈಲಿಯಲ್ಲಿ ಸೃಷ್ಟಿಸಿದ್ದಾರೆ.

v) ಜೀವನ ದೃಷ್ಟಿ – ಧೋರಣೆಗಳು

ತೈಲೂರು ವೆಂಕಟಕೃಷ್ಣರವರು ತಮ್ಮ ಸಕ್ರಿಯ ಜೀವನದಲ್ಲಿ ಹಲವಾರು ಪಾತ್ರಗಳಲ್ಲಿ ಲೇಖಕ, ಸಮಾಜಸೇವಕ, ರೈತ, ಇತ್ಯಾದಿ ಕಾಣಿಸಿಕೊಂಡವರು, ಸಾಮಾನ್ಯ ಕೃಷಿಕ ಕುಟುಂಬದಿಂದ ಬಂದ ಲೇಖಕರು ಅಹಿಂಸಾಯುತ ವರ್ಗದಂತಿದ್ದ ಅಜ್ಜಿ ಹೇಳುತ್ತಿದ್ದ ಕಥೆಗಳು, ಜೊತೆಗೆ ಈಕೆ ಗಮಕಿಯಾದುದ್ದರಿಂದ ಚಿಕ್ಕಂದಿನಿಂದಲೂ ಕೇಳುತ್ತಿದ್ದ ಪುರಾಣ ಕಥೆಗಳು, ಗಾಂಧೀಜಿಯವರ ಸರಳಜೀವನ ಉದಾತ್ತ ವಿಚಾರಗಳು, ತತ್ವಚಿಂತನೆಗಳು, ಕುವೆಂಪುರವರ ಜನಪ್ರಿಯ ವಾಲ್ಮೀಕಿ ರಾಮಾಯಣ ಇವೆಲ್ಲವುಗಳ ಪ್ರಭಾವದಲ್ಲಿ ಬೆಳೆದವರು. ರೈತರಾಗಿ ಹುಟ್ಟಿ ಮಣ್ಣಿನಲ್ಲಿ ದುಡಿಯುವ ಸಂಕಲ್ಪದಿಂದಿದ್ದ ವೆಂಕಟಕೃಷ್ಣರವರು ಆಕಸ್ಮಿಕವಾಗಿ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡವರು. ಪ್ರೀತಿ–ಪ್ರೇಮದ ವಿಚಾರವನ್ನು ಬಿಟ್ಟು ಹೊಸದಾಗಿ ಏನಾದರೂ ಬರೆಯಬೇಕೆಂಬ ಹಂಬಲ ಉಳ್ಳವರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುತ್ತಾರೆ. ಜಗತ್ತಿನಲ್ಲಿರುವ ಪ್ರೀತಿ–ಪ್ರೇಮ ಅದಕ್ಕಾಗಿ ಮಡಿಯುವ ವ್ಯಕ್ತಿಗಳನ್ನು ಚಿತ್ರಿಸುವುದೇ ಕಾದಂಬರಿಯ ಉದ್ದೇಶವಲ್ಲ, ಪ್ರೀತಿಯ ಹೊರತಾಗಿ ಮನುಷ್ಯನನ್ನು ಕಾಡುವ ಸಮಸ್ಯೆಗಳು ಸಾಕಷ್ಟಿವೆ. ಅಂಥಹ ಸಮಸ್ಯೆಗಳನ್ನು ಕಾದಂಬರಿಯ ವಸ್ತುವಿಷಯವಾಗಿ ಆಯ್ಕೆಮಾಡಿಕೊಳ್ಳಬೇಕಿದೆ. ಹಳ್ಳಿಗಳ ಜನಜೀವನ, ಬದುಕು ಹಸನಾಗಬೇಕು, ಗ್ರಾಮದ ಐಕ್ಯತೆ ಗಟ್ಟಿಯಾಗಬೇಕಾದರೆ ಗಾಂಧಿಪ್ರೇರಿತ ತತ್ವ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು ಎಂಬ ನಿಲುವುಳ್ಳ ವೆಂಕಟಕೃಷ್ಣರವರಿಂದ ರಚಿತವಾದ ಕೃತಿಗಳೇ 'ಅಗ್ನಿಕುಂಡ', 'ಸಮ್ಮಿಳನ' ಮತ್ತು 'ಪಾರ್ವತಿ'. ಲೈಂಗಿಕ ಸಮಸ್ಯೆಯನ್ನು ಚರ್ಚಿಸದಿದ್ದರೂ ಕಾದಂಬರಿ ಲೋಕಪ್ರಿಯವಾಗಬಲ್ಲದು. ಈ ಕಾದಂಬರಿಯ ಹಿಂದಿರುವ ಆಶಯ, ಜೀವನದೃಷ್ಟಿ, ಧೋರಣೆಗಳು ಎಂಥದ್ದು ಎಂಬುದನ್ನು ಮನವರಿಕೆ ಮಾಡಿಕೊಡುತ್ತದೆ. ಗ್ರಾಮೀಣ ಪರಿಸರದ ದಟ್ಟ ಪ್ರಭಾವದಲ್ಲಿ ಬೆಳೆದ ಲೇಖಕರು ತಮ್ಮ ಕಾದಂಬರಿಯಲ್ಲಿ ಒಂದು ಹಳ್ಳಿಯ ಪುನರುತ್ಥಾನದ ಮಾರ್ಗಕ್ಕೆ ಗಾಂಧೀಜಿಯವರ ತತ್ವ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಈ ಮಾರ್ಗವನ್ನು ಅನುಸರಿಸಿದಾಗ ನಮ್ಮ ಗ್ರಾಮಸಮಾಜದ ಐಕ್ಯತೆ ಗಟ್ಟಿಯಾಗುತ್ತದೆ ಎಂಬ ಚಿಂತನೆಗಳನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಒಂದು ಸಮೃದ್ಧವಾದ ಹಳ್ಳಿಗೆ ಬಂದರೆಗಿದ ಬರಗಾಲದಲ್ಲಿ ಬೆಂದು ದುಸ್ತರ ಬದುಕನ್ನು ಸಾಗಿಸುವ ಮನುಷ್ಯ ಸಂಬಂಧದ ಸ್ಥಾಪನೆಯ ಅಂಶ ಇಲ್ಲಿ ಚಿತ್ರಿತವಾಗಿದೆ. ಆ ಹಳ್ಳಿಯ ವ್ಯಕ್ತಿಗಳಲ್ಲಿನ ಗುಣ ಸ್ವಭಾವಗಳ ಪರಿಚಯವನ್ನು ಮಾಡಿಕೊಡುತ್ತಾರೆ, ಇಲ್ಲಿ ನಿರೂಪಿಸುವ ವ್ಯಕ್ತಿಗಳನ್ನು ಪ್ರತಿ ಹಳ್ಳಿಯಲ್ಲೂ ಕಾಣಬಹುದು.

ಹೊನ್ನಾಳಿ ಗ್ರಾಮ ಯಾವುದೋ ಪಾಪದ ಕಾರಣಕ್ಕಾಗಿ ನರಳುತ್ತಿದೆ ಎಂಬುದನ್ನು ಬೊಮ್ಮನಾಯಕನ ಮಾತಿನ ಮೂಲಕ ಕಾದಂಬರಿ ಹೇಳಲು ಪ್ರಯತ್ನಿಸಿದೆ, ಜೊತೆಗೆ ಈ ವಿಷಯದ ಬಗೆಗೆ ವಿಶ್ಲೇಷಿಸಿ, ಶೋಧಿಸಿ ತಿಳಿಸುವ ಪ್ರಯತ್ನವನ್ನು ಕಾದಂಬರಿ ಮಾಡುವುದಿಲ್ಲ, ಆದರೆ ಪಾತ್ರಗಳ ಕ್ರಿಯೆಯಲ್ಲಿ ತಂತಾನೆ ವ್ಯಕ್ತವಾಗುತ್ತದೆ.

ಭ್ರಷ್ಟಾಚಾರ, ಲಂಚಗುಳಿತನ, ದಬ್ಬಾಳಿಕೆ, ಶೋಷಣೆ ಇವು ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರುವ ಸಾರ್ವತ್ರಿಕ, ಸಾರ್ವಕಾಲಿಕ ಸಮಸ್ಯೆಗಳಾಗಿವೆ. ಇವುಗಳನ್ನು ನಿರ್ಮೂಲನೆ ಮಾಡುವ ಪ್ರಯತ್ನವೂ ಜೊತೆಜೊತೆಗೆ ನಡೆಯುತ್ತಾ ಬಂದಿದೆ, ಈ ಸಮಸ್ಯೆಗಳು ಇಂದು ಎಲ್ಲಾ ಕ್ಷೇತ್ರವನ್ನು ಅವರಿಸಿವೆ, ಇಲ್ಲಿ ಬರಗಾಲದಲ್ಲಿ ಕೊಡತಕ್ಕ ಪರಿಹಾರದಲ್ಲಿ ಹೇಗೆ ಶೋಷಣೆ ನಡೆಯುತ್ತದೆ ಅದರಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಹೇಗೆ ಪಾಲ್ಗೊಳ್ಳುತ್ತಾರೆ ಎಂಬ ಅಂಶವೂ ಇಲ್ಲಿದೆ. ಈ ಅಂಶ ಸಮಕಾಲೀನ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ.

ಸಮಾಜದ ಕೆಳವರ್ಗದವರಲ್ಲಿ ಕಂಡುಬರುವ ಸಂಬಂಧಗಳ ಗಾಢತೆ, ಆತ್ಮೀಯತೆ ಮೇಲ್ವರ್ಗದವರಲ್ಲಿ ಕಾಣಲು ಸಾಧ್ಯವಿಲ್ಲ. ಆದರೆ ಇದಕ್ಕೆ ಅಪವಾದವೆಂಬಂತೆ ಇವರ ಸಮ್ಮಿಳನ ಕಾದಂಬರಿ ಸಾಕ್ಷಿಯಾಗಿದೆ. ದಿಕ್ಕಿಲ್ಲದ ಮಗುವನ್ನು ಕರೆತಂದು ತಮ್ಮ ಮನೆಯಲ್ಲಿ ಆಶ್ರಯಕೊಟ್ಟು ಆತನ ಕುಟುಂಬಕ್ಕೆ ನೆರವು ನೀಡುವ ಶ್ರೀಮಂತರ ಔದಾರ್ಯತೆ, ಮಾನವೀಯತೆ ಮತ್ತು ಸಂಬಂಧಗಳ ತುಡಿತವನ್ನು ಕಾಣಬಹುದು. ಇವರ ಕಾದಂಬರಿಯಲ್ಲಿ ಸಾಮಾಜಿಕ ಪ್ರಜ್ಞೆಯನ್ನು ನಿರ್ಲಕ್ಷಿಸುವಂತಿಲ್ಲ, ಜೊತೆಗೆ ಗ್ರಾಮಜೀವನದ ನಂಬಿಕೆಗಳನ್ನು, ಸಮಾಜದ ಮೂಢ ಸಂಪ್ರದಾಯಗಳನ್ನೂ ಚಿತ್ರಿಸುತ್ತಾ ಕಥಾನಾಯಕಿಯ ಮನೋವಿಶ್ಲೇಷಣೆಯನ್ನು ಮಾಡಲು ಯತ್ನಿಸಿದ್ದಾರೆ. ಕಾದಂಬರಿ ನೇರವಾಗಿ ಯಾವ ಮೌಲ್ಯಗಳನ್ನು ಪ್ರತಿಪಾದಿಸದಿದ್ದರೂ, ಕೆಲವು ಪಾತ್ರಗಳ ವ್ಯಕ್ತಿತ್ವದಲ್ಲಿ, ನಡತೆಯಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದರ ಅರಿವು ತಂತಾನೆ ಓದುಗರಿಗೆ ಮನವರಿಕೆಯಾಗುತ್ತದೆ.

ಒಟ್ಟಾರೆಯಾಗಿ ಇವರ ಕೃತಿಗಳು ಓದುಗರಿಗೆ ಒಂದು ಸಮಾಜದ ಜನರಿಗೆ ಗಾಂಧಿಪ್ರೇರಿತ ತತ್ವ ಚಿಂತನೆಗಳು, ಸಾಮಾಜಿಕ ಮೌಲ್ಯಗಳು ಮತ್ತು ವೈಜ್ಞಾನಿಕ ದೃಷ್ಟಿಕೋನದ ದರ್ಶನವನ್ನು ಮಾಡಿಸುತ್ತವೆ.

ಆ) ಸಂಶೋಧನೆಗಳು

ಕನ್ನಡ ಸಾಹಿತ್ಯ ಸಂಶೋಧನೆ ಕಳೆದ ಒಂದೂವರೆ ಶತಮಾನದ ಹಿಂದೆಯಷ್ಟೆ ಪ್ರಾರಂಭವಾಗಿದೆಯಾದರೂ ಇತ್ತೀಚಿನ ಎರಡು ದಶಕಗಳಲ್ಲಿ ಅದು ಒಂದು ಅಧ್ಯಯನ ಕ್ಷೇತ್ರವಾಗಿಯೆ ಬೆಳೆದು ನಿಂತಿದೆ. ಕನ್ನಡ ಸಾಹಿತ್ಯ ಸಂಶೋಧನೆಯನ್ನು ಶಾಸ್ತ್ರೀಯ ವಿಧಾನಗಳನ್ವಯ ನಿರ್ದಿಷ್ಟ ಸ್ವರೂಪದಲ್ಲಿ ವಿಶಿಷ್ಟ ಬರವಣಿಗೆಯ ಮೂಲಕ ಪ್ರಸ್ತುತ ಪಡಿಸುವ ರೀತಿ ಹುಲುಸಾಗಿ ಬಂದುದು ೨೦ ನೇ ಶತಮಾನದ ಉತ್ತರಾರ್ಧದಲ್ಲಿ.

ಕನ್ನಡ ಸಾಹಿತ್ಯ ಸಂಶೋಧನೆ ಆರಂಭಗೊಂಡಿದ್ದು ೨ನೇ ಹಂತದಲ್ಲಿ ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ಸಂಶೋಧನೆಯ ಇತಿಹಾಸದ ಹೆಜ್ಜೆ ಗುರುತುಗಳನ್ನು ಗುರ್ತಿಸಬಹುದು. ಆರಂಭ ಘಟ್ಟದಲ್ಲಿ ಕವಿ, ಕೃತಿ, ಕಾಲ, ವಿಚಾರ, ರಸನಿಷ್ಠ ವಿಮರ್ಶಾಮಾಲ ಸಂಶೋಧನೆ , ಶಾಸನ, ಹಸ್ತ ಪ್ರತಿ ಮುಂತಾದ ಆಕರಗಳ ಶೋಧವು ನಡೆಯಿತು.

ದ್ವಿತೀಯ ಕಾಲಘಟ್ಟದಲ್ಲಿ ಮೊದಲಿಗಿಂತ ಅನ್ಯಮೂಲಗಳಿಂದ ಆಧಾರಗಳನ್ನು ಹುಡುಕುವುದು, ಆಕರಗಳನ್ನು ಇಟ್ಟುಕೊಂಡು ವಿಶ್ಲೇಷಾಣಾತ್ಮಕವಾಗಿ ನಿರೂಪಿಸುವುದು, ಕೃತಿ ಮೌಲ್ಯಗಳನ್ನು ವಿವೇಚಿಸುವುದು ಕನ್ನಡ ಸಾಹಿತ್ಯದ ಪ್ರೇರಣೆಗಳನ್ನು ಗುರ್ತಿಸುವುದು ಯುಗಧರ್ಮದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವುದು ಮುಂತಾದವು ಮೂಡಿಬಂದವು.

ಆಧುನಿಕ ಕಾಲಘಟ್ಟದಲ್ಲಿ ಕೃತಿ ಸಂಪಾದನೆ, ಸಂಗ್ರಹ, ಮುಕ್ತ ಅಭಿವ್ಯಕ್ತಿ, ಹೊಸ ಜ್ಞಾನ ಶಾಖೆಗಳ ಪರಿಚಯು ಹಾಗೂ ಅವುಗಳ ತತ್ವಗಳ ಅನ್ವಯಿಕತೆ, ವಿಮರ್ಶೆ,ವಿಶ್ಲೇಷಣಾಮುಖಿ ಸಂಶೋಧನೆ ಹೀಗೆಯೆ ಹತ್ತಾರು ದಿಕ್ಕಿನಿಂದ ಸಂಶೋಧನೆ ಆನ್ವಯಿಕ ಸಂಶೋಧನೆ, ಕಾಲ್ಪನಿಕ ಸಂಶೋಧನೆ, ನಿಘಂಟು, ಗ್ರಂಥ ಸಂಪಾದನೆ, ಶಾಸನಾಧ್ಯಯನ, ನಾಮ ವಿಜ್ಞಾನ, ಜಾನಪದ ವಿಜ್ಞಾನ , ಕಾವ್ಯಮಿಮಾಂಸೆ, ಛಂದಶಾಸ್ತ್ರ, ಮುಂತಾದ ಕ್ಷೇತ್ರದಲ್ಲಿ ಸಂಶೋಧನೆಗಳು ಮೂಡಿಬಂದವು. ಸಂಶೋಧನೆಗೆ ಹೊಸಕ್ಷೇತ್ರಗಳನ್ನು ತೆರೆದಿಟ್ಟಿವೆ.

ಸಾಹಿತ್ಯ ಸಂಶೋಧನೆಯ ಆಧುನಿಕ ಕಾಲ ಘಟ್ಟದಲ್ಲಿ ಸಂಸ್ಕೃತಿ ಮೂಲ, ವಿಮರ್ಶೆ ಮೂಲ ಹಾಗೂ ಶಾಸನ ಮೂಲ ಸಂಶೋಧನೆಗಳು ಸಂಶೋಧನೆಯ ಹೊಸ ಕ್ಷೇತ್ರಗಳೆನಿಸುವಷ್ಟು ಬೆಳೆಯುತ್ತಿವೆ. ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಸಂಘಟಕರಾಗಿ ಮತ್ತು ಲೇಖಕರಾಗಿ ಮಂಡ್ಯ ಪರಿಸರದಲ್ಲಿ ಹೆಚ್ಚು ಪರಿಚಿತರಾಗಿರುವ ತೈಲೂರು ವೆಂಕಟಕೃಷ್ಣ ಅವರು 'ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ' ಎಂಬ ಸಂಶೋಧಾನ ಗ್ರಂಥವನ್ನು ಪ್ರಕಟಿಸಿ ತಾವೊಬ್ಬ ಶಾಸ್ತ್ರಿಯ ಅಧ್ಯಯನಕಾರನೂ ಹೌದು ಎಂಬುದನ್ನು ಧೃಡಪಡಿಸಿದ್ದಾರೆ.

i) ಸಂಸ್ಕೃತಿ ಅಧ್ಯಯನ

ಸಾಂಸ್ಕೃತಿಕ ಸಂಶೋಧನೆ ಆಧುನಿಕ ಕಾಲಘಟ್ಟದ ಕೊಡುಗೆ ಎನ್ನಬಹುದು. ಸಾಹಿತ್ಯವನ್ನು ಸಂಸ್ಕೃತಿಯ ನೆಲೆಯಿಂದ ಪರಿಶೀಲಿಸಿ ಸಮಕಾಲೀನ ಹೊಸ ಹೊಸ ಪರಿಕಲ್ಪನೆಗಳ ಹಿನ್ನಲೆಯಲ್ಲಿ ವಿವೇಚನೆಗೆ ಈಡು ಮಾಡುವುದು ಸಾಂಸ್ಕೃತಿಕ ಅಧ್ಯಯನ ಅಥವಾ ಸಂಸ್ಕೃತಿ ಮೂಲ ಸಂಶೋಧನೆ ಎನ್ನಬಹುದು.

'ಸಂಸ್ಕೃತಿ' ಎಂದಾಕ್ಷಣ ಒಬ್ಬ ವ್ಯಕ್ತಿಯಿಂದ ಒಂದು ಮಾನವ ಸಮಷ್ಟಿಯವರೆಗೂ ಅವನ ನಡೆ ನುಡಿ, ಆಚಾರ, ವಿಚಾರ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ದೇಶಿಕ, ರಾಜಕೀಯ, ಜನಾಂಗಿಕ, ತಾಂತ್ರಿಕ, ತಾತ್ವಿಕ ಕಲಾತ್ಮಕ ವಿಷಯಗಳು ಅವನಲ್ಲಿ ಅಥವಾ ಅವರಲ್ಲಿ ಹೇಗೆ ಅಳವಡಿಸಿರುತ್ತವೆ ಎಂಬುದರ ಎಲ್ಲ ಒಟ್ಟು ಚಿಂತನೆಗಳನ್ನು ನಾವು ಸಂಸ್ಕೃತಿ ವಿಚಾರ ಎಂದು ಪ್ರಸ್ತಾಪ ಮಾಡಬಹುದಾಗಿದೆ.

ಸಂಸ್ಕೃತಿಯ ಶೋಧನೆಗಳು ಸುಲಭವಾದುದಲ್ಲ, ಸಂಸ್ಕೃತಿಯಲ್ಲಿ ಬೆಳವಣಿಗೆಗಳು ವಿಸ್ತಾರಗಳು ಇರುತ್ತವೆ. ಆದರೆ ಇದರಲ್ಲಿ ಉಪ ವಿಭಾಗೀಕರಣಮಾಡಲು ಸಾಧ್ಯವಿಲ್ಲ. ಒಂದು ಮೂಲ ಸಂಸ್ಕೃತಿಯೇ ವಿವಿಧ ರೀತಿಯಲ್ಲಿ ಕಾಣಿಸಿಕೊಳ್ಳಬಹುದು ಸಂಸ್ಕೃತಿ ಶೋಧನೆ ಸಾಹಿತ್ಯ, ಕಲೆ, ಧರ್ಮ, ವಿಜ್ಞಾನ, ಭಾಷೆ, ಜಾನಪದ ಮುಂತಾದುವುಗಳು ಆಕರಗಳಾಗಿರುತ್ತವೆ. ಇವುಗಳನ್ನು ಸರಿಯಾಗಿ ಅರ್ಥೈಸುವ ಮೂಲಕ ಸಾಂಸ್ಕೃತಿಕ ನೆಲೆಗಳನ್ನು ಗುರ್ತಿಸಬಹುದಾಗಿದೆ.

ಕರ್ನಾಟಕ ಮತ್ತು ಭಾರತೀಯ ಸಂಸ್ಕೃತಿಯನ್ನು ಧಾರ್ಮಿಕ, ಸಾಮಾಜಿಕ ನೆಲೆಗಟ್ಟಿನಲ್ಲಿ ಡಿ.ವಿ.ಜಿ. ದೇವುಡುರವರು ಚಿತ್ರಿಸಿದ್ದಾರೆ. ದೇಶಿಯ ನೆಲೆಗಟ್ಟಿನಲ್ಲಿ ಶಂಬಾ ಜೋಷಿಯವರು 'ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ' ಎಂಬ ಗ್ರಂಥದಲ್ಲಿ ಸಾಂಸ್ಕೃತಿಕ ನೆಲೆಯನ್ನು ಬಹಳ ವಿಶಾಲವಾಗಿ ವಿವರಿಸಿದ್ದಾರೆ. ಚಾರಿತ್ರಿಕ ಅಂಶಗಳನ್ನು ಆಕರಗಳ ಆಧಾರಗಳಿಂದ ಅವುಗಳನ್ನು ಮುಂದಿಟ್ಟುಕೊಂಡು ಸಾಂಸ್ಕೃತಿಕ ಅಂಶಗಳನ್ನು ಹೆಕ್ಕಿ ವಿವರಿಸುವುದು ಸಂಸ್ಕೃತಿ ಅಧ್ಯಯನ ವಿಧಾನವಾಗಿದೆ. ೧೯೮೦ ರ ದಶಕದಿಂದೀಚೆಗೆ ಸಂಸ್ಕೃತಿ ಸಂಶೋಧನ ಅಧ್ಯಯನ ಇನ್ನು ಹಲವು ಕ್ಷೇತ್ರಗಳಿಗೆ ವಿಸ್ತಾರಗೊಂಡಿತು. ಕ್ಷೇತ್ರಿಯ ಜನಪದ,ಸಾಮಾಜಿಕ ಜನಪದ, ಬುಡಕಟ್ಟು ಜನ, ವೃತ್ತಿ, ಸ್ಥಳನಾಮ ಸಾಹಿತ್ಯ ಕೃತಿಗಳು, ಮಠ ಮಾನ್ಯಗಳು, ಹೀಗಾಗಿ ಹತ್ತಾರು ಕ್ಷೇತ್ರಗಳಿಗೆಸಂಬಂಧಿಸಿದ ಸಾಂಸ್ಕೃತಿಕ ಅಧ್ಯಯನಗಳು ನಡೆದುಬಂದಿರುವುದನ್ನು ನಾವು ಕಾಣಬಹುದಾಗಿದೆ.

ಶ್ರೀ ತೈಲೂರು ರವರು ದೇಶಿಯ ನೆಲೆಗಟ್ಟಿನ ಮಾದರಿಯಲ್ಲಿ ತಮ್ಮ ಜಿಲ್ಲೆಯ ಬಹುತೇಕ ಹಳ್ಳಿಗಳಿಗೆ ಭೇಟಿ ನೀಡಿ ಆ ಹಳ್ಳಿಯಲ್ಲಿ ಕಂಡು ಬರುವಂತಹ ಕುತೂಹಲ

ಸೆಳೆದ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಸ್ಮಾರಕಗಳು, ಐತಿಹ್ಯ ದಾಖಲೆಗಳು, ಹಬ್ಬ ಹರಿದಿನಗಳು ಕಂಡು ಕೇಳಿದ ಕಥೆಗಳನ್ನು ದಾಖಲಿಸಿಕೊಂಡು ಈ ಎಲ್ಲಾ ಅಂಶಗಳನ್ನು ಒಡಗೂಡಿಸಿ 'ಮಂಡ್ಯ ಜಿಲ್ಲಾ ಸಾಂಸ್ಕೃತಿಕ ಪರಂಪರೆ' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ.

ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಅಮೂಲ್ಯ ಆಕರಗಳು, ಶಾಸನಗಳು ಎಂದರೆ ಆಜ್ಞೆ ಮಾಡು, ಘೋಷಣೆ ಮಾಡು, ರಾಜಾಜ್ಞೆ ಎನ್ನುವ ಅರ್ಥ ಬರುತ್ತದೆ. ಇವುಗಳ ಅಂತರಾರ್ಥದಲ್ಲಿ ಪೌರುಷ, ಪರಾಕ್ರಮ, ಅರ್ಪಣೆ ತ್ಯಾಗ ಸತ್ಯವೆಂಬ ಧರ್ಮ ಕಾಯುವ ವಿಶೇಷ ಗುಣಗಳು ಅಡಕವಾಗಿರುತ್ತವೆ.ಅಲ್ಲದೆ ಅಂದಿನ ಜನಜೀವನ ಮತ್ತು ಸಂಸ್ಕೃತಿಗೆ ಕನ್ನಡಿಯಂತಿರುತ್ತವೆ.ಇವರ ಅಂಕಿ ಅಂಶಗಳ ಪ್ರಕಾರ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು ಶಾಸನಗಳ ಸಂಖ್ಯೆ ಒಂದು ಸಾವಿರಕ್ಕೂ ಮಿಗಿಲಾಗಿರಬಹುದು. ಹಲವಾರು ಶಾಸನಗಳ ಒಕ್ಕಣೆಗೆ ಬಹುಲಾಲಿತ್ಯ ಪೂರ್ಣವಾಗಿರುವುದನ್ನು ನಾವು ನೋಡಬಹುದಾಗಿದೆ. ಆಯಾ ಕಾಲದ ಆಡಳಿತಕ್ಕೆ ಅನುಸಾರವಾಗಿ ಭಾಷೆಯ ವೈಶಿಷ್ಟ್ಯತೆ ಇವರು ಸಂಶೋಧಿಸಿದ ಜಿಲ್ಲೆಯ ಶಾಸನಗಳಲ್ಲಿ ಕಾಣಬಹುದಾಗಿದೆ. ಮಂಡ್ಯ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಿಕ್ಕಿರುವ ಶಾಸನಗಳ ವಿವರಗಳಲ್ಲಿ ವಿವಿಧ ಭಾಷೆಗಳಿಗೆ ಸಂಬಂಧಿಸಿದಂತ ಶಾಸನಗಳ ಉಕ್ತಿಗಳು ಸಂಗ್ರಹವಾಗಿವೆ.

೧. ತಮಿಳು ಮತ್ತು ಗ್ರಂಥಲಿಪಿಯ ಸಂಸ್ಕೃತ ಕನ್ನಡ ಶಾಸನಗಳು
೨. ತಮಿಳು ಗ್ರಂಥಲಿಪಿಯ ಸಂಸ್ಕೃತ ತಮಿಳು ಶಾಸನಗಳು
೩. ಕನ್ನಡ ಲಿಪಿ ಮತ್ತು ತಮಿಳು ಭಾಷೆಯ ಶಾಸನಗಳು
೪. ನಾಗರಿಲಿಪಿ ಮತ್ತು ಕನ್ನಡ ಭಾಷೆಯ ಶಾಸನಗಳು
೫. ದೇವನಾಗರ ಲಿಪಿ ಮತ್ತು ಹಿಂದೂ ಸ್ಥಾನಿ , ಶುದ್ದ ಸಂಸ್ಕೃತ, ಸಂಸ್ಕೃತ ಕನ್ನಡ

ಶಾಸನಗಳಲ್ಲಿ ವರ್ಣಿಸಲ್ಪಟ್ಟ ವಿವರಗಳನ್ನು ಆಧರಿಸಿ ಅವುಗಳನ್ನು ಒಂದು ಅಥವಾ ಹಲವು ಕಾಲದ ಪ್ರದೇಶದ ಜನ ಜೀವನದ ಸಾಂಸ್ಕೃತಿಕ ಅಂಶಗಳನ್ನು ಕ್ರೋಢೀಕರಿಸಿ ಅವುಗಳ ಮೂಲಕ ಐತಿಹಾಸಿಕ ಕಾಲದ ಮನುಷ್ಯನ ಬದುಕಿನ ಸತ್ಯಗಳನ್ನು ಕಂಡುಕೊಳ್ಳುವ ಪ್ರಕ್ರಿಯೆಯನ್ನು ಶಾಸನ ಸಾಂಸ್ಕೃತಿಕ ಅಧ್ಯಯನಗಳು ತೋರಿಸಿಕೊಟ್ಟಿವೆ.

ಈ ನಿಟ್ಟಿನಲ್ಲಿ ತೈಲೂರರು ಮಂಡ್ಯ ಜಿಲ್ಲೆಯಲ್ಲಿನ ಶಾಸನಗಳನ್ನು ಅಧ್ಯಯನ ಮಾಡಿ ಮಾಹಿತಿ ದಾಖಲಿಸುವ ಕಾರ್ಯದಲ್ಲಿ ನಿರತರಾದರು. ಅದರಂತೆಯೆ ಜಿಲ್ಲೆಯ ಸಾಮಾಜಿಕ ವ್ಯವಸ್ಥೆ ಆಡಳಿತ, ರಾಜಕೀಯ ಯುದ್ದದ ಸೋಲು–ಗೆಲುವು, ದಾನ

ಧರ್ಮದ ವಿಷಯಗಳು, ತ್ಯಾಗ ಬಲಿದಾನ ಆತ್ಮಾರ್ಪಣೆ, ದೇವಾಲಯ, ಕಲೆ, ಭಾಷೆ, ಸಾಹಿತ್ಯ ಇತ್ಯಾದಿಗಳನ್ನು ಜಿಲ್ಲೆಯ ಸಂಸ್ಕೃತಿಯ ಅಧ್ಯಯನ ತೆಕ್ಕೆಯಲ್ಲಿ ಸೇರಿಸಿದ್ದಾರೆ.

ಇವರು ಸಂಗ್ರಹಿಸಿದ ಮಾಹಿತಿ ಶಾಸನಗಳಲ್ಲಿ ಅಶೋಕನ ಕಾಲದ ಬ್ರಹ್ಮಗಿರಿ ಶಾಸನದಲ್ಲಿನ ಮಾಹಿತಿಗಳು ಬಹು ಮಟ್ಟಿಗೆ ಹೋಲಿಕೆಯನ್ನು ಹೊಂದುತ್ತಿವೆ. ಎಂಬುದನ್ನು ಸ್ಪಷ್ಟಪಡಿಸಬಹುದಾಗಿದೆ. ಏಕೆಂದರೆ ಬ್ರಹ್ಮಗಿರಿ ಶಾಸನದಲ್ಲಿ ಉಲ್ಲೇಖಗೊಂ ಡಿರುವ 'ಇಸಿಲ'ಎಂಬ ಪದವು 'ತಿಪ್ಪೂರು' ನಲ್ಲಿದ್ದ ಕೋಟೆಯಲ್ಲಿನ ಪದಕ್ಕೆ ಹೊಂದಾಣಿಕೆಯಾಗಿರುವುದನ್ನು ಕಾಣಬಹುದಾಗಿದೆ.

'ಇಸಿಲ' ಎಂದರೆ ಕೋಟೆ ಕೊತ್ತಲಗಳಿಂದ ಕೂಡಿರುವ ವಿದೇಶಗಳೊಂದಿಗೂ ವ್ಯಾಪಾರ ಸಂಬಂಧವಿರಿಸಿಕೊಂಡಿದ್ದವೆಂದು ಭಾವಿಸಿದ್ದು ಈ ಸ್ಥಳವನ್ನು ಹೋಲುವಂತಹದ್ದು, ಜಿಲ್ಲೆಯ ಮದ್ದೂರು ತಾಲ್ಲೂಕಿನ 'ತಿಪ್ಪೂರು' ಸಹ ಒಂದಾಗಿದೆಯೆಂದು ಊಹಿಸಿ ಗುರುತಿಸಲಾಗಿದೆ. ಪ್ರಸಿದ್ಧ 'ಇಸಿಲ' ಮತ್ತು 'ತಿಪ್ಪೂರು' ಪಟ್ಟಣಗಳು ಸಮಕಾಲಿನ ಪಟ್ಟಣಗಳಾಗಿದ್ದು ಕಾಲ ಕ್ರಮದಲ್ಲಿ ಅಶೋಕ ಚಕ್ರವರ್ತಿಯ ಆಳ್ವಿಕೆಗೆ ಒಳಪಟ್ಟು ಬೌದ್ಧ ಧರ್ಮದ ಪ್ರಚಾರ ಕೇಂದ್ರವಾಗಿದೆ ಎಂಬ ಅಂಶವನ್ನು ನಾವು ನೋಡಬಹುದಾಗಿದೆ.

ಇದಲ್ಲದೆ ಮಂಡ್ಯ ಜಿಲ್ಲೆಯಲ್ಲಿ ಕಾಣಬರುವ ಅಧಿಕೃತ ಶಾಸನಗಳಲ್ಲಿಯ ಶಕ ೬೮೫ ರಲ್ಲಿ ಒಂದನೆಯ ಗಂಗರಾಜನ ಸಂತತಿಯ ಶಿವಮಾರನ ತಾಮ್ರಶಾಸನದ ಮಾಹಿತಿಯನ್ನುದಾಖಲಿಸಿದ್ದಾರೆ. ಆತನ ಆಳ್ವಿಕೆಯ ೩೪ ನೇ ವರ್ಷದ ಐತಿಹ್ಯವನ್ನು ತಿಳಿಸುತ್ತದೆ. ಮತ್ತು ಹಲ್ಲೆಗೆರೆಯಲ್ಲಿ ಕಂಡು ಬಂದಂತಹ ಆನೆಯ ಚಿಹ್ನೆಯ ದಾನ ಶಾಸನದ ಮಾಹಿತಿಯನ್ನು ಕಲೆಹಾಕಿರುವುದನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ.

' ಮಂಡ್ಯ' ಈ ಪ್ರದೇಶದ ಹಿಂದಿನ ಹೆಸರು ಮಂಡಯ ಎಂಬುದರ ನಿಷ್ಪತ್ತಿಯ ಬಗ್ಗೆ ತಿಳಿಸುತ್ತಾ, ಇದು ೧೨೭೬ ರಲ್ಲಿ ಜಿಲ್ಲೆಯ ಹೊಸ ಬೂದನೂರು ಗ್ರಾಮದ ಹೊಯ್ಸಳ ೩ನೇ ನರಸಿಂಹನ ಆಳ್ವಿಕೆಯ ದೇವದಾನದ ಶಾಸನವೊಂದರಲ್ಲಿ ಒಂದು ಅಗ್ರಹಾರ (ವಿದ್ಯಾಕೇಂದ್ರ) ವಾಗಿತ್ತೆಂಬ ವಿಷಯವನ್ನು ಹೊರ ಚೆಲ್ಲುತ್ತದೆ ಎಂಬ ವಿಷಯವನ್ನು ಸ್ಪಷ್ಟಪಡಿಸಿದ್ದಾರೆ. ೧೫೧೬ ರ ತಾಮ್ರ ಶಾಸನದಲ್ಲಿ ಶ್ರೀಕೃಷ್ಣ ದೇವರಾಯ ಮಂಡ್ಯವನ್ನು ಅನಂತಚಾರ್ಯರ ೧೨ ನೇ ಸಂತತಿಯವರಾದ ಗೋವಿಂದರಾಜ ಎಂಬುವವರಿಗೆ ದಾನ ಕೊಟ್ಟಿರುವ ವಿಷಯ ದಾಖಲಾಗಿರುವುದನ್ನುಜೊತೆಗೆ ತಾಮ್ರ ಶಾಸನದಲ್ಲಿ ಮಂಡ್ಯಕ್ಕೆ 'ಮಠಯ'ಎಂಬ ಹೆಸರಿತ್ತು ಎಂಬ ಮಾಹಿತಿಯನ್ನು ಸ್ಥಳನಾಮದ ಪರಿಕಲ್ಪನೆಯಲ್ಲಿ ತಿಳಿಸಿರುವುದನ್ನು ನಾವು ಕಾಣಬಹುದಾಗಿದೆ.

ಸಾಮಾಜಿಕ ಜೀವನದಲ್ಲಿ ಸತ್ಯ ಅಸತ್ಯಗಳ ನಡುವಿನ ಹೋರಾಟವನ್ನು ಪ್ರತಿಬಿಂಬಿಸುವಂತಹ ಎರಡು ಶಾಸನಗಳನ್ನು ಮಂಡ್ಯ ತಾಲ್ಲೂಕಿನ ಎರಡು ಗ್ರಾಮಗಳಲ್ಲಿ

ಕಾಣುವುದನ್ನು ನಾವು ನೋಡಬಹುದಾಗಿದೆ. ಈ ಶಾಸನಗಳಲ್ಲಿ ಮರಡಿಪುರ ಮತ್ತು ಗರುಡನಹಳ್ಳಿ ಗ್ರಾಮಸ್ಥರಲ್ಲಿ ತಮಗೆ ಸೇರಿದ ಸೀಮೆಯ ಬಗೆಗೆ ವಿವಾದವುಂಟಾಗಿ ದಿವ್ಯ ಪರೀಕ್ಷೆಗೆ ಒಳಗಾಗಿರುವ ಮಾಹಿತಿಯನ್ನು ಸ್ಪಷ್ಟಗೊಳಿಸುವುದನ್ನು ನಾವು ಅವಲೋಕಿಸಬಹುದಾಗಿದೆ.

ತೈಲೂರರು ತಮ್ಮ ಗ್ರಂಥದಲ್ಲಿ ಮದ್ದೂರು ತಾಲ್ಲೂಕು, ಆತಗೂರಿನ ಕ್ರಿ.ಶ. ೯೫೦ ರಲ್ಲಿ ದೊರಕಿದ ಆತಗೂರಿನ ಶಾಸನದ ಬಗ್ಗೆಯೂ ಸಹ ಮಾಹಿತಿಗಳನ್ನು ಕಲೆಹಾಕಿರುವುದನ್ನು ಸ್ಪಷ್ಟವಾಗಿ ಕಂಡುಬರುತ್ತದೆ. ಕರ್ನಾಟಕದ ಶಾಸನ ಸಂಪತ್ತಿನಲ್ಲಿ ಅಪೂರ್ಣವಾದುದು ಈ ಶಾಸನ. ಈ ಶಾಸನದಲ್ಲಿ ಮಣೆಲೆರ ಎಂಬಾತ ರಾಷ್ಟ್ರಕೂಟರ ಅರಸು ಕಚ್ಚೆಗ ಕೃಷ್ಣರಾಜನು ಮೂವಡಿ ಚೋಳರ ವಿರುದ್ಧ ಹೂಡಿದ 'ತಕ್ಕೋಲ' ಸಮರದಲ್ಲಿ ಸಾಹಸದಿಂದ ಹೋರಾಡಿ ಗೆಲುವು ಸಾಧಿಸಿ ಆತನ ಕಾರ್ಯಕ್ಕಾಗಿ ಅರಸು ಕೃಷ್ಣರಾಜನಿಂದ ಬಳುವಳಿಯಾಗಿ 'ಕಾಳಿ' ಎಂಬ ಹೆಸರಿನ ಬೇಟೆ ನಾಯಿಯನ್ನು ಬೇಡಿ ಪಡೆದನು ಎಂಬ ಅಂಶವನ್ನು ಒಳಗೊಂಡಂತೆ ಮುಂದೆ ಮಣೆಲೆರನು ಬೇಟೆಯಾಡುವ ಸಂದರ್ಭದಲ್ಲಿ 'ಕಾಳಿ' ಯು ಒಂದು ದೊಡ್ಡಕಾಡು ಹಂದಿಯೊಂದಿಗೆ ಹೋರಾಟ ಮಾಡುವ ಸಂದರ್ಭದಲಿ ಪ್ರಾಣಕಳೆದುಕೊಂಡು ಸ್ವಾಮಿನಿಷ್ಠೆ ನಾಯಿಗಾಗಿ ದತ್ತಿ ಬಿಟ್ಟ ಶಾಸನ ಕಲ್ಲೊಂದನ್ನು ಆತಗೂರಿನ ಚಲ್ಲೇಶ್ವರ ದೇವಸ್ಥಾನದ ಮುಂದೆ ನಡೆಸಿರುವುದು ಮತ್ತು ಈ ಶಾಸನವನ್ನು ಪೂಜಿಸಿದರೆ ಆಗುವ ಒಳಿತು ಮತ್ತು ಹಾನಿ ಮಾಡುವವರಿಗೆ ಉಂಟಾಗುವ ಪಾಪದ ಬಗ್ಗೆ ಮಾಹಿತಿ ಇದೆ. ಇದೇನೇ ಇದ್ದರು ಮಣೆಲೆರನಿಗೆ ಬೇಟೆ ನಾಯಿಯನ್ನು ಕೊಡುಗೆಯಾಗಿ ನೀಡಿದವನು ಅರಸು ಕಚ್ಚೆಗ ಕೃಷ್ಣರಾಜನೇ ಹೊರತು ಬೂತುಗನಲ್ಲ ಎಂದು ದೃಢಪಡಿಸಿರುವುದನ್ನು ಮತ್ತು ನಾಗವರ್ಮನ ಕಾವ್ಯಲೋಕದ ಪದ್ಯವೊಂದರ ಆಧಾರದ ಮೇಲೆ (ಸಂ೧೮೩) ಮುಮ್ಮಡಿ ಕೃಷ್ಣ ತನ್ನ ಬಳಿ ಬೇಟೆ ನಾಯಿಗಳ ಹಿಂಡೊಂದನ್ನು ಇಟ್ಟಿಕೊಂಡಿದ್ದನೆಂಬ ಸಂಗತಿಯನ್ನು ಇತ್ತೀಚೆಗೆ ತಜ್ಞರ ಅಭಿಪ್ರಾಯವನ್ನು ಒಪ್ಪಬಹುದಾಗಿದೆ ಮಣ್ಣಿನಲ್ಲಿ ಹುದುಗಿಹೋಗಿದ್ದ ಪ್ರಾಚೀನ ಗಂಗ ಚೋಳ ಸಮ್ಮಿಶ್ರ ಶೈಲಿಯ ಚಲ್ಲೇಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲು ಶ್ರಮಿಸಿರುವುದನ್ನು ಕಾಣಬಹುದು,

ತೈಲೂರರು ತಮ್ಮ ಜಿಲ್ಲೆಯಲ್ಲಿ ಜೈನಧರ್ಮಗಳಿಗೆ ಸಂಬಂಧಿಸಿದಂತ ಜಿನಶಾಸನ ಮತ್ತು ಪವಿತ್ರ ಜಿನಕ್ಷೇತ್ರಗಳ ಬಗ್ಗೆ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಿ ಕಲೆಹಾಕಿದ್ದಾರೆ.

ಪ್ರಸ್ತುತ ಶ್ರವಣ ಬೆಳಗೊಳದ ಶಾಸನದ ಹತ್ತಿರಕ್ಕೆ ಸಾಮಿಪ್ಯವನ್ನುಳ್ಳ ಶಾಸನ ಮದ್ದೂರು ತಾಲ್ಲೂಕಿನ ಅರೆತಿಪ್ಪೂರು ಗ್ರಾಮದಲ್ಲಿ ಸಂಗ್ರಹವಾಗಿದೆ ಎಂಬ ಅಂಶವನ್ನು

ತಿಳಿಸಿದ್ದಾರೆ. ಅಲ್ಲಿನ ಬಯಲು ವಸ್ತು ಸಂಗ್ರಹಾಲಯದಂತಿರುವ ಬಸ್ತಿಕಲ್ಲು , ಕಂಬಪೀಠಬೋದಿಗೆ, ತೀರ್ಥಂಕರ ಮೂರ್ತಿಗಳು ಚೆಲ್ಲಾಪಿಲ್ಲಿಯಾಗಿದ್ದರೂ ಸಹ ಈ ಜಿಲ್ಲೆಯ ಭಾಗವು ಸಹ ಅಂದಿನ ಜೈನಧರ್ಮದ ಕ್ಷೇತ್ರವಾಗಿತ್ತು ಎಂಬ ಕುರುಹುಗಳನ್ನು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುವದನ್ನು ನೋಡಬಹುದಾಗಿದೆ.

ಕ್ರಿ.ಶ. ೧೧೧೭ ರ ಶಾಸನ ತಲಕಾಡು ಯುದ್ಧದ ಸಮಗ್ರ ಚಿತ್ರಣವನ್ನು ನೀಡಿದ್ದರು ಸಹ ಲೌಕಿಕ-ಅಲೌಕಿಕ ಅಂಶಗಳಿಂದ ಕೂಡಿದ ಅಭೂತ ಪೂರ್ವ ಮಾಹಿತಿಯನ್ನು ಒಳಗೊಂಡಿದ್ದಾಗಿದೆ. ವಿಷ್ಣುವರ್ಧನನ ದಂಡನಾಯಕ ಗಂಗರಾಜ ಚೋಳರನ್ನು ಸೋಲಿಸಿ ಇಡೀ ನಾಡು ಹೊಯ್ಸಳರ ಚಕ್ರಾಧಿಪತ್ಯದ ಅಡಿಯಲ್ಲಿ ಇರುವಂತೆ ಮಾಡಿದ ಅಭೂತಪೂರ್ವ ಸಾಹಸ ಕಾರ್ಯಕ್ಕೆ ಮೆಚ್ಚಿದ ದೊರೆ ಕೊಡುಗೆ ನೀಡಲು ಮುಂದಾದಾಗ ಅಲೌಕಿಕ ಮಾರ್ಗವನ್ನು ಹಿಡಿದು ತನಗೆ ಹಿರಿದಾದ ಮತ್ತು ಸೇವೆ ಮಾಡಲು ಪ್ರಪಂಚದಲ್ಲಿ ಪವಿತ್ರವೆನಿಸಿದ 'ತಿಪ್ಪೂರು' ಜಿನಕ್ಷೇತ್ರವನ್ನು ಕೇಳಿಕೊಂಡ ನಿದರ್ಶನದ ಮಾಹಿತಿಯನ್ನು ತಮ್ಮದೇ ಆದ ಛಾಪುವಿನಲ್ಲಿ ತಿಳಿಸಿರುವುದು ಒಂದು ಗಮನಾರ್ಹ ಸಂಗತಿ. ಇದರಲ್ಲಿ ಲೇಖಕರು ಈ ಕಾಲದಲ್ಲಿ ಅಲ್ಲಿಯೆ ನೆಲಸಿದ ಜೈನ ಅನುವರ್ತಿ ಹಾಗೂ ಕವಿ ಬಾಲಚಂದ್ರದೇವರ ಇರುವಿಕೆಯ ಬಗ್ಗೆ ಸಾಕಷ್ಟು ಆಧಾರಗಳನ್ನು ಸಂಗ್ರಹಿಸಿರುವುದನ್ನು ಪರಿಗಣಿಸಬಹುದಾಗಿದೆ. ಬಾಲಚಂದ್ರದೇವ ತನ್ನ ಮಕ್ಕಳಿಗೆ ಆಸ್ತಿಯ ಹಕ್ಕನ್ನು ಹಂಚಿರುವ ವಿವರಣಾತ್ಮಕ ಲಿಪಿ ಶಾಸನ ಸಾಹಿತ್ಯ ದೃಷ್ಟಿಯಿಂದಲೂ ಮನೋಜ್ಞವಾಗಿದೆ. ಮತ್ತು ಬಾಲಚಂದ್ರದೇವ ರಚಿಸಿದ ಎರಡು ಗ್ರಂಥಗಳ ಬಗ್ಗೆ ಜನ್ನ ಕವಿಯ ಅನಂತನಾಥಪುರಾಣ ಮತ್ತು ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಒಟ್ಟಿನಲ್ಲಿ 'ತಿಪ್ಪೂರು' ಎಂಬ ಜಿನಕ್ಷೇತ್ರವು ಕಾಲಾ ನಂತರ ೧೪-೧೫ ನೇ ಶತಮಾನದೊತ್ತಿಗೆ ಮದ್ದೂರು ಶ್ರೀ ರಾಮಚಂದ್ರ ದೇವರಿಗೆ ಉಂಬಳಿಯಾಗಿ ಬಿಟ್ಟಿರುವ ಶಾಸನದ ಮಾಹಿತಿಯನ್ನು ಕಲೆಹಾಕುವಲ್ಲಿ ತಮ್ಮ ಕುಶಲತೆ ಮೆರೆದಿರುವುದು ಕಂಡು ಬರುತ್ತದೆ.

ಸ್ವತಃ ಸ್ವಗ್ರಾಮವಾದ ತೈಲೂರು ಗ್ರಾಮದ ವಳಗರೆಯಲ್ಲಿರುವ ಮತ್ತು ಉತ್ತರಕೋಡಿ ಬಳಿ ನೆಟ್ಟಿರುವ ಎರಡು ಶಾಸನಗಳು ಪೂರ್ವದ ಹಳಗನ್ನಡ ಅಕ್ಷರಗಳಿಂದ ಶೋಭಿಸಿರುವುದರ, ಅಲ್ಲಿ ದಾನ ನೀಡುವ ಬಗೆಯನ್ನು ಸ್ವಾರಸ್ಯ ಪೂರ್ಣವಾಗಿ ಮತ್ತು ಒಂದು ಊರಿಗೆ ಅಗತ್ಯವಾಗಿರಬೇಕಾದ ಕೆರೆ ನಿರ್ಮಾಣ ಆ ಊರಿನ ದೇವಸ್ಥಾನಗಳನ್ನು ಕಟ್ಟುವಿಕೆ ಮತ್ತು ಭೂಮಿಯನ್ನು ದತ್ತಿ ಬಿಟ್ಟಿರುವ ಮೂರು ಮುಖದ ಶಾಸನಕಲ್ಲು ಮತ್ತು ದೇವಾಲಯವನ್ನು ಹಾಳುಗೆಡುವವರಿಗೆ ಉಂಟಾಗುವ ಪಾಪದ ಬಗ್ಗೆ ಸಂಸ್ಕೃತ ಶ್ಲೋಕವಿರುವುದರ ಬಗ್ಗೆ ಮಾಹಿತಿಯನ್ನು ದಾಖಲಿಸಿರುವುದು ಮನಗಾಣಬಹುದಾಗಿದೆ.

ಕೆ.ಆರ್.ಪೇಟೆ ತಾಲ್ಲೂಕಿನ ಕಡೆ ಹೋಗಿ ಅಲ್ಲಿಯು ಸಹ ಶಾಸನದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಅಲ್ಲಿಯ ಒಂದು ಶಾಸನ ಒಬ್ಬ ಸಾಮಾನ್ಯ ಗೌಡನ ಗುಣಾವಳಿಯನ್ನು ಪ್ರಶಂಸಿಸಿರುವ ಮಾಹಿತಿ ಮತ್ತು ಹೊಯ್ಸಳ ವಿಷ್ಣುವರ್ಧನನ ಪಟ್ಟದ ರಾಣಿಯಾದ ಶಾಂತಲಾದೇವಿ ಕಲ್ಪನೆಗೆ ಅನುಗುಣವಾಗಿ ಕೃಷ್ಣರಾಜ ಪೇಟೆಯ ಮಾಳಿಗೆ ಯೂರನ್ನು ಆಳುತ್ತಿದ್ದ ಬಲ್ಲನಾಯಕನ ಪಿರಿಯರಸಿ ಮಹಾದೇವಿ ಶಾಂತಲದೇವಿಯ ಮಯ್ದುನ ಎಂಬ ಅಂಶವನ್ನು ಖಚಿತಪಡಿಸಿದ್ದಾರೆ. ಈಕೆಯು ತನ್ನ ತಮ್ಮನೊಡನೆ ಜೊತೆಗೂಡಿ ಜಿನಾಲಯಕ್ಕೆ ಮಾಡಿದ ದಾನದ ಪ್ರಸ್ತಾಪವನ್ನು ವಿವರಿಸಲಾಗಿದೆ. ಮತ್ತು (ಭಾರತ) ಕರ್ನಾಟಕದ ಸ್ಮಾರಕ ವಿನ್ಯಾಸದಲ್ಲಿ ವಿಶಿಷ್ಟ ಬಗೆಯದಾದ ಗರುಡರ ಕಂಬಗಳ ಬಗ್ಗೆ ಅಲ್ಲಿನ ಉಕ್ತವಾದ ಭಾಷೆ ಮತ್ತು ಗರುಡನೊಂದಿಗೆ ಹೋರಾಡುತ್ತಿರುವ ಶಿಲ್ಪ ರಚನೆಗಳ ಮಾಹಿತಿಯನ್ನು ಮನಮಿಡಿಯುವಂತೆ ಸಂಗ್ರಹಿಸಿದ್ದಾರೆ.

ಧರ್ಮ ಸಾಮರಸ್ಯಕ್ಕೆ ಸಂಬಂಧಿಸಿದಂತೆ ಸಿಂಧಘಟ್ಟದ ಶಾಸನ ಮತ್ತು ನಾಗಮಂಗಲ ತಾಲ್ಲೂಕಿನ ಕಂಬದ ಹಳ್ಳಿಯ ೩ ನೇ ಶತಮಾನದ ಶಾಸನಗಳಲ್ಲಿ ಇದ್ದ ಸಾಮಾನ್ಯ ಪ್ರಜೆಗಳ ಧರ್ಮ ಸಾಮರಸ್ಯವನ್ನು ತಮ್ಮ ಗ್ರಂಥದಲ್ಲಿ ನಮೂದಿಸಿರುವುದನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಮತ್ತು 'ಸೀತಾಪುರದ ಶಾಸನ' ದಲ್ಲಿ ಗಂಗರಕಾಲದ ಒಂದು ಶಾಸನದಲ್ಲಿ ಖುಷ್ಕಿ ಭೂಮಿಗೆ ನೀರಾವರಿ ಒದಗಿಸಿಕೊಡುವ ಬಗ್ಗೆ 'ಯಮದೂರು' ನಲ್ಲಿ ಕಂಡುಬರುತ್ತದೆ.

ರಾಜ ಸಂಬಂಧ ವಿಷಯವಾಗಿ ನಾಗಮಂಗಲ ತಾಲ್ಲೂಕಿನ ಅಳೀಸಂದ್ರ ಶಾಸನದಲ್ಲಿ ದಂಡನಾಯಕ ಮೂವರು ಹೆಣ್ಣುಮಕ್ಕಳನ್ನು ಮದುವೆಯಾದ ಸಂದರ್ಭ, ಆ ಮೂವರು ಯುವತಿಯವರು ನೃತ್ಯ, ಗೀತ, ಶಾಸ್ತ್ರದಲ್ಲಿ ಪರಿಣಿತರು ಮತ್ತು ಕಸಲಗೆರೆ ಮಾಸ್ತಿಕಲ್ಲಿನ ಸಾಧ್ವಿ ಮಹಾದೇವಿ ಸತಿಯಾದ ವಿಷಯವನ್ನು ಸಂಗ್ರಹಿಸಿದ್ದಾರೆ.

ಇವರು ಸಂಗ್ರಹಿಸಿದ ಶಾಸನಗಳ ಮಾಹಿತಿಯಲ್ಲಿ ಹಲವಾರು ಕವಿಗಳ ವಿಷಯವು ಪ್ರಸ್ತಾಪವಾಗಿವೆ. ಈ ಶಾಸನಗಳಲ್ಲಿ ಸಾಹಿತ್ಯ ಬಹಳ ಲಾಲಿತ್ಯ ಪೂರ್ಣವಾಗಿದೆ. ಇಲ್ಲಿ ದೇವಾಲಯಗಳಿಗೆ ಸಂಬಂಧಪಟ್ಟ ದತ್ತಿ ಶಾಸನಗಳನ್ನು ವರ್ಣಿಸುವುದರ ಚಿತ್ರಣ "ಜಟ್ಟಿಗ" ಎಂಬ ಉಲ್ಲೇಖವಿರುವುದನ್ನು ಮತ್ತು ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ದೇವರ ಪೂಜೆ ನೈವೇದ್ಯಗಳನ್ನು ಅರ್ಪಿಸಿದ ದಾನ ಶಾಸನಗಳ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ.

ಮಳವಳ್ಳಿ ತಾಲ್ಲೂಕಿನಲ್ಲಿ ದೊರೆತ ಶಾಸನಗಳಲ್ಲಿ ಅಲ್ಲಿ ಉಲ್ಲೇಖವಾಗಿರುವ ರೇವಣಾರಾಧ್ಯ ಮಠಕ್ಕೂ ಈ ಶ್ರೀಶೈಲ ಕ್ಷೇತ್ರಕ್ಕೂ ನಿಕಟ ಸಂಬಂಧವಿರುವ ಮಾಹಿತಿಯನ್ನು ಕಲೆಹಾಕಿದ್ದಾರೆ. ಇಲ್ಲಿಯ ಮಠಪತಿ ಶ್ರೀಶೈಲಕ್ಕೆ ಹೋಗಿ ಭೇಟಿಕೊಡುವ ಸಂದರ್ಭದಲ್ಲಿ

ಪರಿಷೆಗೂ ಮತ್ತು ಇತರ ಸೇವೆಗೆ ದತ್ತಿ ನೀಡಿರುವ ಮಾಹಿತಿಗಳು ಮತ್ತು 'ಕಲ್ನಾಡು' -೯೬೦ ರಲ್ಲಿ ದೊರೆತ ಶಾಸನ, 'ಕಲ್ನಾಡು'ಎಂದರೆ 'ಮರಣ ಹೊಂದಿದ ವೀರನೊಬ್ಬನ ಗೌರವಾರ್ಥ ಹಾಕಿಸಿದ ನೆನಪಿನ ಕಲ್ಲು' ಎಂಬರ್ಥವನ್ನು ಅಲ್ಲಿ ಬಳಸಿರುವ ಮದುವೆಯೋಲೆ, ಮುತ್ತತ್ತಿಯ ಕಾವೇರಿ ನದಿ ತೀರದಲ್ಲಿ ಮೊಸಳೆಯೊಂದಿಗೆ ಹೋರಾಡಿ ಪ್ರಾಣಬಿಟ್ಟ ವೀರನ ಸ್ಮರಣೆಗಾಗಿ ನೆಡಿಸಿರುವ ವೀರಗಲ್ಲಿನ ಬಗ್ಗೆ ಮಾಹಿತಿ, ಈ ತಾಲ್ಲೋಕನ್ನು ೧೫ ಮತ್ತು ೧೬ ನೇ ಶತಮಾನದಲ್ಲಿ ಆಳಿದ ಉಮ್ಮತ್ತೂರು ಪ್ರಭುಗಳಿಗೆ ಸಂಬಂಧಪಟ್ಟ ಮಾಹಿತಿಗಳನ್ನು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಹಾಗೆಯೇ ಶಾಸನಗಳಲ್ಲಿ ಸ್ತ್ರೀಯರ ಕೊಡುಗೆಗೆ ಸಂಬಂಧಿಸಿದ ಮಾಹಿತಿಗಳು ೧೪೪೫ ರಲ್ಲಿ ದೊರೆತ ಶಾಸನದಲ್ಲಿ ಪಾಂಡವಪುರ ತಾಲ್ಲೂಕಿನ ನೀರಾವರಿಗೆ ಸಂಬಂಧಿಸಿದ ಮಾಹಿತಿಗಳನ್ನು ಕ್ರಿ.ಶ. ೮೯೪ ಕ್ಕೆ ಸೇರಿದ ಶಾಸನದಲ್ಲಿ ಶ್ರೀರಂಗಪಟ್ಟಣದ ಪ್ರಾಚೀನ ಇತಿಹಾಸಕ್ಕೆ ಸಂಬಂಧಿಸಿದಂತೆ ಅಲ್ಲಿಯ ಸಂಸ್ಕೃತಿಯನ್ನು ವೇದಾಂತ ಪಾರಂಗತರಾದ ವಿದ್ವಾಂಸರು ದೇವಾಲಯಗಳ ಗೋಪುರಕ್ಕೆ ಸಂಬಂಧಿಸಿದಂತೆ ಮತ್ತು ಸಾಂಸ್ಕೃತಿಕ ಹಾಗೂ ಧಾರ್ಮಿಕ ವೈಭವವನ್ನು ಪ್ರತಿಬಿಂಬಿಸುವ ಶಾಸನಗಳಿಗೆ ಸಂಬಂಧಿಸಿದ ಮೇಲುಕೋಟೆಯಲ್ಲಿ ವೈಷ್ಣವ ಸಂಪ್ರದಾಯ ಮತ್ತು ಗ್ರಂಥಭಂಡಾರಗಳ ಮಾಹಿತಿಯನ್ನು ಕಲೆಹಾಕಿರುತ್ತಾರೆ.

ಇವುಗಳ ಜೊತೆಗೆ ವೀರಗಲ್ಲು ಮತ್ತು ಮಾಸ್ತಿಕಲ್ಲು ಅವುಗಳನ್ನು ಗುರ್ತಿಸುವ ಕ್ರಮ ಮತ್ತು ಅದರಲ್ಲಿ ದಾನ ನೀಡಿದ ವಿಚಾರಗಳನ್ನು ಹೀಗೆ ತೈಲೂರರು ಮಂಡ್ಯಜಿಲ್ಲೆಯ ಮೇಲೆ ಗಂಗರಸರಿಂದ ಸೂಚಿತವಾಗಿ ಪ್ರಾರಂಭವಾಗುವ ಆಳ್ವಿಕೆ ಅದಕ್ಕೂ ಹಿಂದೆ ಅಥವಾ ಅದೇ ಕಾಲದಲ್ಲಿ ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಪಲ್ಲವರ ಛಾಯೆಯು ಬಿದ್ದು ನಂತರ ಚೋಳರ ಸ್ವಾಧೀನವಾಗಿ, ಹೊಯ್ಸಳ ಪ್ರಭಾವ ವ್ಯಾಪಿಸಿ ವಿಜಯನಗರ ಅರಸರ ತಾಣವಾಗಿ, ಮೈಸೂರು ಅರಸರ ದಳವಾಯಿಗಳ ರಾಜ್ಯಭಾರ, ಹೈದರ್ ಮತ್ತು ಟಿಪ್ಪು ನಂತರ ಬ್ರಿಟಿಷರ ಆಳ್ವಿಕೆಯ ಎಲ್ಲಾ ಮಾಹಿತಿಗಳನ್ನು ಈ ಜಿಲ್ಲೆಯಲ್ಲಿ ದೊರೆತ ಶಾಸನಗಳಿಂದ ಮಾಹಿತಿಯನ್ನು ಕಲೆಹಾಕಿ ಗತಕಾಲದ ಇತಿಹಾಸದ ತಿಳುವಳಿಕೆಯನ್ನು ಈ ಜಿಲ್ಲೆಯ ಜನತೆಗೆ ನೀಡಿರುವುದು ಉಲ್ಲೇಖಾರ್ಹವಾಗಿದೆ.

ಪ್ರಸ್ತುತ ಸಂಶೋಧನಾ ಗ್ರಂಥದಲ್ಲಿ 'ದೇವಾಲಯ ಸಂಸ್ಕೃತಿ' ಎನ್ನುವ ಅಂಶಗಳ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಆಧಾರ ಸಹಿತ ಕಲೆಹಾಕಿರುವುದನ್ನು ನಾವು ನೋಡಬಹುದಾಗಿದೆ.

ದೇವಾಲಯಗಳು ಎಂದರೆ ಯಾವುದೇ ಒಂದು ದೃಷ್ಟಿಯಿಂದ

ನೋಡುವಂತಹದಲ್ಲ. ಆಯಾ ಕಾಲದಲ್ಲಿನ ಆಯಾ ಪ್ರದೇಶದಲ್ಲಿನ ಸಂಸ್ಕೃತಿ, ಧರ್ಮ,ನಾಗರೀಕತೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಸಂಗೀತ, ನೃತ್ಯ, ತತ್ವಶಾಸ್ತ್ರ ಜೀವನ, ಪರಿಸರ ಕೃಷಿ, ಗೋಸಂಪತ್ತು, ಈ ಎಲ್ಲಾ ದೃಷ್ಟಿಯಿಂದ ನೋಡಬೇಕಾಗಿದೆ ಎಂಬ ದೃಷ್ಟಿಕೋನವನ್ನು ನೀಡಿರುವುದನ್ನು ಗಮನಿಸಬಹುದಾಗಿದೆ.

ಶ್ರೀಯುತರು ಕರ್ನಾಟಕದ ವಾಸ್ತು ಪರಂಪರೆಯ ಹಿನ್ನಲೆಯಲ್ಲಿ ಮಂಡ್ಯ ಜಿಲ್ಲೆಯ ದೇವಾಲಯಗಳನ್ನು ಪರಿಚಯ ಮಾಡಿರುವುದು ಉಲ್ಲೇಖಾರ್ಹ. ಈ ಹಿನ್ನಲೆಯಲ್ಲಿ ಜಿಲ್ಲೆಯ ದೇವಾಲಯಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಅವಲೋಕಿಸಬಹುದಾಗಿದೆ. ಮತ್ತು ಗಂಗರಕಾಲ ಮತ್ತು ಚೋಳರ ಶೈಲಿ ಮತ್ತು ಹೊಯ್ಸಳರ ಮಾರ್ಗ ಮತ್ತು ಹೊಯ್ಸಳರ ಮಾರ್ಗಕ್ಕೆ ವಿಜಯನಗರ ಶೈಲಿ ಮತ್ತು ಮೈಸೂರು ಅರಸರ ಅಭಿವೃದ್ಧಿಗಳು.

ಶ್ರೀ ತೈಲೂರರು ಜಿಲ್ಲೆಯಲ್ಲಿನ ದೇವಾಲಯಗಳಲ್ಲಿ ಗಂಗರ ಕಾಲದ ದೇವಾಲಯದ ವಾಸ್ತುಶಿಲ್ಪದ ಮಾದರಿ ಮತ್ತು ದ್ರಾವಿಡಶೈಲಿಯ ವಿನ್ಯಾಸದ ಮಾಹಿತಿಯನ್ನು ಎಳೆ ಎಳೆಯಾಗಿ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಈ ಮಾದರಿಯಲ್ಲಿ ಕುಳ್ಳಾದ ಕಟ್ಟಡಗಳು, ಛಾವಣಿ ತಳಭಾಗ ಮತ್ತು ಗಂಗರ ಕಾಲದಲ್ಲಿ ಜೀರ್ಣೋದ್ಧಾರ ಗೊಂಡಿರುವ ಮದ್ದೂರು ತಾಲ್ಲೂಕು ಆತಗೂರು ಗ್ರಾಮದ ಚಲ್ಲೇಶ್ವರ ದೇವಾಲಯವನ್ನು ಗಂಗರ ಕಾಲದ ವಾಸ್ತುವಿಗೆ ನಿರ್ದಶನವಾಗಿ ತಿಳಿಸಿದ್ದಾರೆ ಜೊತೆಗೆ ಅಲ್ಲಿನ ಗುಹಾಂತರ ದೇವಾಲಯಗಳು ಪೂರ್ಣ ಗೊಂಡಿದ್ದರೆ ಇವು ಸಹ ಬಾದಾಮಿಯ ಗುಹಾಂತರ ದೇವಾಲಯುಗಳಿಗೆ ಸರಿಸಮನಾಗುತ್ತಿತ್ತೆನೊಎಂಬ ಅಭಿಪ್ರಾಯವನ್ನು ಮಂಡಿಸಿದ್ದಾರೆ ಮತ್ತು ಜಿಲ್ಲೆಯಲ್ಲಿನ ಪ್ರಾಚೀನ ಜೈನಮಂದಿರಗಳ ಕಡೆಗೆ ಬೇಟಿಕೊಟ್ಟು ಅರೆತಿಪ್ಪೂರು ಅಲ್ಲಿನ ಜಿನಬಸದಿಗಳು ಶ್ರವಣ ಬೆಳಗೊಳ ಗೋಮಟ್ಟೇಶ್ವರನ ನಿರ್ಮಾಣವಾಗುವುದಕ್ಕೆ ಮಂಚೆಯೇ ಪ್ರಖ್ಯಾತವಾಗಿದ್ದವು.

ಕೆ.ಆರ್. ಪೇಟೆಯಲ್ಲಿನ ಕುರುಬರ ಬಸ್ತಿಯ ಗೊಮ್ಮಟದ ವರ್ಣನೆಯ ಮಾಹಿತಿ ಮತ್ತು ವಾಸ್ತುಶಿಲ್ಪ ಕಲೆಯ ಬಗ್ಗೆ ಮಳವಳ್ಳಿ ತಾಲ್ಲೂಕಿನ ಧನಗೂರಿನಲ್ಲಿರುವ ವೀರಭದ್ರ ಮತ್ತು ಗೌರೀಶ್ವರ ದೇವಾಲಯಗಳು ಗಂಗರ ಕಾಲದಲ್ಲಿ ನಿರ್ಮಿತವಾದವು ಎಂಬುದನ್ನು ಆಧಾರಗಳ ಹಿನ್ನೆಲೆಯಲ್ಲಿ ಮಾಹಿತಿ ಕಲೆಹಾಕಿದ್ದಾರೆ. ಮತ್ತು ಕಂಬದಹಳ್ಳಿಯ ಪಂಚಕೂಟ ಬಸದಿಯ ವಾಸ್ತುಶಿಲ್ಪ ಇದು ಮಂಡ್ಯ ಜಿಲ್ಲೆಯಲ್ಲಿ ಕಾಣಬರುವ ಪ್ರಥಮ ಹಂತದ ದ್ರಾವಿಡಶಿಲ್ಪ ಎಂಬ ಅಂಶವನ್ನು ತಮ್ಮ ಗ್ರಂಥದಲ್ಲಿ ದಾಖಲಿಸಿರುವುದು ಒಂದು ಸಂಗತಿಯಾಗಿದೆ.

ಚೋಳರ ಶೈಲಿಯ ಆಧಾರದ ಮೇಲೆ ನಿರ್ಮಾಣದ ದೇವಾಲಯಗಳ

ಮಾಹಿತಿಯನ್ನು "ರಾತ್ರಿ ಕಳೆದು ಬೆಳಗಾಗುವುದರೊಳಗೆ ಚೋಳರು ಕಟ್ಟಿಸಿದ ಗುಡಿಗಳು ದೇವಾಲಯಗಳು"[೧] ಎಂಬಂತೆ ಲೇಖಕರು ತಮ್ಮ ಗ್ರಂಥದಲ್ಲಿ ವಿವರಿಸಿದ್ದಾರೆ.
ಚೋಳರ ಆಳ್ವಿಕೆಯಲ್ಲಿ ದ್ರಾವಿಡ ಶೈಲಿ ಒಂದು ವಿಶಿಷ್ಟ ಘಟ್ಟ ಮಳವಳ್ಳಿ ತಾಲ್ಲೂಕಿನಲ್ಲಿರುವ ಮಾರೇಹಳ್ಳಿಯ ಲಕ್ಷ್ಮಿನರಸಿಂಹ ದೇವಾಲಯ ಈಬೃಹತ್ ದೇವಾಲಯವು ಹಲವು ವಿಶೇಷತೆಗಳನ್ನು ಹೊಂದಿದೆ ಜೊತೆಗೆ ಮದ್ದೂರಿನ ಉಗ್ರನರಸಿಂಹ ದೇವಾಲಯವು ಈ ಕಲೆಯ ವಾಸ್ತು ಶಿಲ್ಪ ಆಧಾರದ ಮೇಲೆ ನಿರ್ಮಾಣವಾಗಿರುವುದು ಮತ್ತು ಕರ್ನಾಟಕ ಗರ್ಭಗುಡಿಯ ಶಿಲ್ಪ ಕಲೆಯಲ್ಲಿ ಅಮೋಘವೆನಿಸಿದ ಮದ್ದೂರಿನ ಅಲ್ಲಾಳನಾಥ ಅಥವಾ ವರದರಾಜ ಸ್ವಾಮಿ ಮೂರ್ತಿಯ, ಶಿಲ್ಪಕಲೆಯ ವೈಭವೀಕರಣವನ್ನು ಮತ್ತು ಆ ಶಿಲ್ಪದ ವಿಶೇಷತೆ ಹಿಮ್ಮುಖ ಕೆತ್ತನೆ ಈ ಕಾರಣಕ್ಕಾಗಿಯೇ ಲೇಖಕರು ಈ ದೇವಾಲಯವನ್ನು "ಎಲ್ಲಾ ದೇವರ ಮುಂದೆನೋಡು, ಮದ್ದೂರು ಅಲ್ಲಾಳನಾಥನ ಹಿಂದೆ ನೋಡು"[೨] ಎನ್ನುವ ಮಾತನ್ನು ಹೇಳಿದ್ದಾರೆ ಮತ್ತು ಬೆಳಗೋಳದ ವೃತ್ತಕಾರದ ದೇವಾಲಯಗಳು,ಅಲ್ಲಿನ ನಾಗರ ಪ್ರತಿಮೆಗಳು.

ಚೋಳ ಸಾಮ್ರಾಜ್ಯದ ಎಲ್ಲೆಯನ್ನು ಗುರ್ತಿಸುವಂತಹ ಐತಿಹ್ಯವಾದ 'ಚೋಳಗಂಬ' ಹಾಗೂ ನಾಗಮಂಗಲ ತಾಲ್ಲೂಕಿನ ೧೧ ನೇ ಶತಮಾನದಲ್ಲಿ ಚೋಳರ ಆಳ್ವಿಕೆಯಲ್ಲಿದ್ದ ನರಸಿಂಹ ಗುಡಿಗಳು ಚೋಳರ ಶೈಲಿಗೆ ಸಂಬಂಧಿಸಿದುವುಗಳಾಗಿವೆ ಎಂಬುದನ್ನು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

ಹೊಯ್ಸಳರ ಕಾಲದಲ್ಲಿ ವೈವಿಧ್ಯಮಯವಾಗಿ, ಹೊಸ ವಿನ್ಯಾಸಗಳೊಡನೆ ಅಲಂಕರಿಸಿ ಶೈವ, ವೈಷ್ಣವ, ಜೈನ ಧರ್ಮದ ದೇವಾಲಯಗಳು ನಿರ್ಮಾಣಗೊಂಡ ಬಗೆಗಳನ್ನು ಉಲ್ಲೇಖಿಸಿರುವುದು ಕಂಡು ಬಂದಿದೆ. ಇವರ ಕಾಲದಲ್ಲಿ ದೇವಾಲಯಗಳು ಏಕಕೂಟಾಚಲ, ದ್ವಿಕೂಟಾಚಲ, ತ್ರಿಕೂಟಚಲವಾಗಿರುತ್ತದೆ. ಮತ್ತು ಕೆ.ಆರ್. ಪೇಟೆ ತಾಲ್ಲೂಕು ಹೊಯ್ಸಳ ಕಲೆಯ ತವರು ಅಲ್ಲಿರುವ ಹೊಸ ಹೊಳಲಿನ ಲಕ್ಷ್ಮಿನಾರಾಯಣ ದೇವಾಲಯ ವರ್ಣನೆಯನ್ನು ಲೇಖಕರು ಒಂದು ನಾಣ್ಣುಡಿಯ ಮೂಲಕ ತಿಳಿಸಿರುವುದು ಕಂಡುಬಂದಿದೆ. "ಬೇಲೂರು ದೇವಾಲಯದ ಒಳಗೆ ನೋಡು, ಹಳೇಬೀಡು ದೇವಾಲಯದ ಹೊರಗೆ ನೋಡು ಹೊಸಹೊಳಲು ದೇವಾಲಯವನ್ನು ಒಳಗೂ ನೋಡು, ಹೊರಗೂ ನೋಡು,"[೩] ಹೊಯ್ಸಳ ಶೈಲಿಯ ವಿನೂತನವಾದುದು ಪಂಚಕೂಟ ದೇವಾಲಯ ಈ ದೇವಾಲಯದ ಶಿಖರಗಳು ಶಿಲ್ಪಿಯ ಸೌಂದರ್ಯದ ಪ್ರಜ್ಞೆಗೆ ಸಾಕ್ಷಿಯಾಗಿರುವುದನ್ನು ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯದ ವಿಶಿಷ್ಟತೆಯನ್ನು ಅಘಲಯದ ಮಲ್ಲೇಶ್ವರ ದೇವಾಲಯ, ನಿರ್ಮಾಣದ ಕಾಲವನ್ನು ಸೂಚಿಸುವ ಶಾಸನಗಳ

ಬಗ್ಗೆ ಮತ್ತು ಹೊಯ್ಸಳ ಕಲಾಕೃತಿಗಳು ವ್ಯಾಪಕವಾಗಿದ್ದ ವಿಶೇಷವಾಗಿ ಗರ್ಭಗುಡಿಯ ಶಿಲ್ಪಕಲೆಯಲ್ಲಿ ಭವ್ಯ ಮತ್ತು ಅನುಪಮವಾದ ಕಲ್ಲಹಳ್ಳಿಯ 'ಲಕ್ಷ್ಮಿವರಾಹನಾಥ' ವಿಗ್ರಹವು ಕರ್ನಾಟಕ ಶಿಲ್ಪಕಲೆಗೆ ಅಮೂಲ್ಯ ಕೊಡುಗೆಯಾಗಿರುವ ಅಂಶವನ್ನು, ಬಸರಾಳು ಗ್ರಾಮದಲ್ಲಿರುವ 'ಮಲ್ಲಿಕಾರ್ಜುನ ದೇವಾಲಯದ' ವರ್ಣನೆ, ಶೈವ ಮತ್ತು ವೈಷ್ಣವ ಧರ್ಮದ ಸಾಮರಸ್ಯಕ್ಕೆ ಕನ್ನಡಿಯಾಗಿ ಪ್ರತಿಬಿಂಬಿತವಾಗಿರುವ ಅಂಶಗಳನ್ನು ವಿವರವಾಗಿ .ಸ್ಪಷ್ಟೀಕರಿಸಿದೆ. ಇದರ ಜೊತೆ ಜೊತೆಗೆ ಶೈವ, ವೈಷ್ಣವ, ಜೈನ ಸಿದ್ಧಾಂತಗಳನ್ನು ವಿವರಿಸಿದ್ದಾರೆ. ಆ ದೇವಾಲಯಗಳಿಗೆ ಸಂಬಂಧಿಸಿದಂತೆ ನಂಬಿನಾರಾಯಣ ದೇವಾಲಯ, ಚನ್ನಕೇಶವ ದೇವಾಲಯ, ಸಾರಂಗಪಾಣಿ, ಸೋಮೇಶ್ವರ ದೇವಾಲಯಗಳು ಇವುಗಳ ಜೊತೆಗೆ ವಿಜಯನಗರದ ಶೈಲಿ ಮತ್ತು ಮೈಸೂರು ಅರಸರು ನೀಡಿದ ಕೊಡುಗೆಯನ್ನು ಕಲೆಹಾಕಿದ್ದಾರೆ.

ಈ ಜಿಲ್ಲೆಯಲ್ಲಿನ ಪಾಂಡವಪುರ ತಾಲ್ಲೂಕಿನ ಸೀತಾಪುರದಲ್ಲಿನ ರಾಮಚಂದ್ರ ದೇವಾಲಯವು ಹಂಪಿಯ ಶ್ರೀಕೃಷ್ಣ ದೇವಾಲಯವನ್ನು ಹೋಲುತ್ತದೆ. ಕೇಶವ ದೇವಾಲಯ ಶಿಲ್ಪ ಕಲಾದೃಷ್ಟಿಯಿಂದ ಗಂಗಾಧರೇಶ್ವರ ದೇವಾಲಯ ಸೀತಾರಾಮಾಂಜನೆಯ ಲಕ್ಷ್ಮಣ ವಿಗ್ರಹಗಳು, ಮೇಲುಕೋಟೆ ಚಲುವನಾರಾಯಣಸ್ವಾಮಿ ದೇವಾಲಯ.

ಈ ದೇವಾಲಯಗಳ ಜೀರ್ಣೋದ್ಧಾರಕ್ಕೆ ಪಣತೊಟ್ಟ ಮೈಸೂರು ಅರಸರ ಕೊಡುಗೆಗಳು ಶ್ರೀರಂಗ ಪಟ್ಟಣದ ನರಸಿಂಹ ದೇವಾಲಯ. ಲಕ್ಷ್ಮಿ ಜನಾರ್ಧನ ಇಲ್ಲಿಯ ದೇವಾಲಯಗಳಿಗೆ ಸಕಲೇಶ್ವರ ದೇವಾಲಯಗಳು ಮತ್ತು ಶಿಲ್ಪ ಶಾಸ್ತ್ರ ದೃಷ್ಟಿಯಿಂದ ಮುಖ್ಯವಾಗಿರುವ ಕೆ.ಆರ್. ಪೇಟೆ ತಾಲ್ಲೂಕಿನ ಭಾರತೀಪುರದಲ್ಲಿರುವ ರಾಮಕೃಷ್ಣ ಮತ್ತು ಈಶ್ವರ ದೇವಾಲಯಗಳು ಭೂಮಿಯ ಆಕಾರ ಹಾಗೂ ಚಲನೆಯ ಪ್ರಕಾರವಾಗಿ ಭುವನೇಶ್ವರಿ ಮಂಟಪದ ವಿಸ್ತಾರ ವರ್ಣನೆಯನ್ನು ಮತ್ತು ಮೇಲುಕೋಟೆಯಲ್ಲಿ ನಡೆಯುವ ವೈರಮುಡಿ ಉತ್ಸವ, ಡೋಲೋತ್ಸವ ಕಾರ್ಯಕ್ರಮಗಳನ್ನು ಸ್ವತಃ ವೀಕ್ಷಿಸಿ ತಮ್ಮ ಲೇಖನದಲ್ಲಿ ಸಾದರಪಡಿಸಿರುವುದು ಒಂದು ವೈಜ್ಞಾನಿಕ ಸಂಗತಿಯಾಗಿದೆ.

ಭರತ ಖಂಡದ ಹಲವು ದೇವಾಲಯಗಳಿಗೆ, ನದಿಗಳಿಗೆ, ಬೆಟ್ಟಗುಡ್ಡಗಳಿಗೆ ಪವಿತ್ರ ಸ್ಥಳಗಳಿಗೆ ಪುರಾಣದ ಅಥವಾ ಚಾರಿತ್ರಿಕವಾದ ಐತಿಹ್ಯವನ್ನು ಲೇಪಿಸುವುದು ಒಂದು ವಿಚಾರವಾದರೂ , ಪ್ರಾಚೀನ ಕಾಲದ ವಾಸ್ತವಿಕ ಘಟನೆಯೊಂದರ ಆಧಾರದ ಮೇಲೆ ಕೆಲವಷ್ಟೆ ಕಾಲ್ಪನಿಕ ಅಂಶವನ್ನು ಒಳಗೊಂಡು ಬೆಳೆದುಬಂದಿರುವ ಆಕರ್ಷಣೀಯವಾದ ಹಾಗೂ ಭಕ್ತಿಭಾವದ ನಂಬಿಕೆಯಾಗಿ ಉಳಿದಿದ್ದು ಇಂಥ ನಂಬಿಕೆಯಲ್ಲಿ ಪುರಾಣ ಅಥವಾ ಚಾರಿತ್ರಿಕ ಘಟನೆಗಳು ಪಳೆಯುಳಿಕೆಯಂತೆ

ಗೋಚರಿಸುವುದು ಉಂಟು.

ಈ ನಿಟ್ಟಿನಲ್ಲಿ ತೈಲೂರರು ಮಂಡ್ಯ ಜಿಲ್ಲೆಯ ಕೆಲವಷ್ಟು ಐತಿಹ್ಯಗಳನ್ನು ತಮ್ಮ ಗ್ರಂಥಗಳಲ್ಲಿ ಅಳವಡಿಸಿರುವುದನ್ನು ನಂಬಬಹುದಾಗಿದೆ. ಮಂಡ್ಯದ ಲಕ್ಷ್ಮಿ ಜನಾರ್ಧನ ಮತ್ತು ಸಕಲೇಶ್ವರ ಮೂರ್ತಿಗಳನ್ನು ಮಾಂಡವ್ಯ ಮುನಿಗಳು ಲೋಕಸರ ಸ್ಥಳದಲ್ಲಿ ಲೋಳೆಸರ ಔಷಧಿ ನೀಡುತ್ತಿದ್ದುದ್ದು ದಂತಕತೆಯಾಗಿ ಪ್ರಚಲಿತವಾಗಿರುವುದು. ಋಷಿ ಮುನಿಗಳು ತಪಗೈಯುತ್ತಿದ್ದ ಸ್ಥಳ, ನದಿಯ ತೀರಗಳು, ಅರ್ಜುನಪುರಿ ಹೆಸರು ಬರಲು ಕಾರಣವಾದ ಅಂಶಗಳು, ಸ್ವಯಂ ಉದ್ಭವವಾದ ಲಿಂಗಗಳು, ದೇವತೆ ಮತ್ತು ರಾಕ್ಷಸರು ಯುದ್ಧ ಮಾಡಿದ ಸ್ಥಳಗಳ ಕುರುಹುಗಳು, 'ಮುತ್ತತ್ತಿ' ಎನ್ನುವ ಹೆಸರಿನ ವ್ಯುತ್ಪತ್ತಿಗೆ ಪೌರಾಣಿಕವಾದ ಅಂಶಗಳು ಹೇಗೆ ಸಹಕಾರಿಯಾಗುತ್ತದೆ ಎಂಬ ಅಂಶಗಳು ಯಾರು, ಯಾವಾಗ, ಎಲ್ಲಿ ವಿಗ್ರಹಗಳನ್ನು ಪ್ರತಿಸ್ಥಾಪಿಸಿದರು, ಗೌತಮ ಕ್ಷೇತ್ರದ ಕಲ್ಪನೆ, ಆರತಿ ಉಕ್ಕಡಮ್ಮನಿಗೆ ಅಹಲ್ಯಾದೇವಿ ಎನ್ನುವ ಹೆಸರು ಪರ್ಯಾಯವಾಗಿ ಬಂದ ಬಗೆ, ಮೇಲುಕೋಟೆಗೆ ನಾರಾಯಣಾದ್ರಿ , ವೇದಾದ್ರಿ, ಯಾದವಾದ್ರಿ, ಯತಿಶೈಲ ಎಂಬ ಹೆಸರು ಬರಲು ಮುಖ್ಯವಾದ ಐತಿಹ್ಯಗಳು, "ಮಣಿಪುರ" ಸ್ಥಳ ನಾಗಮಂಗಲ ತಾಲ್ಲೂಕಿನ ಒಂದು ಗ್ರಾಮವಾಗಿತ್ತು ಎನ್ನುವ ಐತಿಹ್ಯದ ಮಾಹಿತಿ. ನಾಗಮಂಡಲ– ನಾಗಮಂಗಲವಾಗಿ, ಪರಶುರಾಮಗಿರಿ ಮುಂತಾದ ಐತಿಹ್ಯಗಳನ್ನು ಸಂಗ್ರಹಿಸಿ, ತಮ್ಮ ಗ್ರಂಥದಲ್ಲಿ ದಾಖಲಿಸಿರುವುದು ತಿಳಿದುಬಂದಿದೆ.

ಐತಿಹ್ಯಗಳು ಸ್ಥಳೀಯ ನಂಬಿಕೆ, ಧಾರ್ಮಿಕ ಶ್ರದ್ಧೆ ಸಂಪ್ರದಾಯಗಳ ಪ್ರಾಬಲ್ಯಕ್ಕನುಗುಣವಾಗಿ ಚಿತ್ರಿಸಿರುವುದನ್ನು ಈ ಗ್ರಂಥದಲ್ಲಿ ಕಾಣಬಹುದು. ಇಂತಹ ಐತಿಹ್ಯಗಳು ವಾಸ್ತ ವಿಕಾಂಶ ಏನೇ ಇದ್ದರೂ ಜನಸಾಮಾನ್ಯರ ಗಮನಕ್ಕೆ ಹಾಗೂ ಅದ್ಭುತವೆನಿಸಬಹುದು.ಅವರಲ್ಲಿ ಭಕ್ತಿ ಭಾವವನ್ನು ಉಂಟುಮಾಡಿದರೂ, ಬಹುತೇಕವಾಗಿ ಪ್ರಕೃತಿಸಿರಿಯನ್ನು ಒಳಗೊಂಡಿರುವ ಇಂತಹ ಐತಿಹ್ಯ ಸ್ಥಳಗಳನ್ನು ಜನರು ತಮಗೆ ಸೇರಿದ್ದೆಂಬ ಅಭಿಮಾನ ವ್ಯಕ್ತಪಡಿಸುತ್ತಾರೆ ಎಂಬ ಅಭಿಪ್ರಾಯವನ್ನು ತಿಳಿಸಬಹುದು.
ಮಂಡ್ಯಜಿಲ್ಲೆಯೂ ಸಹ ವಿದ್ಯಾರ್ಜನೆಯನ್ನು ನೀಡಲು ಈ ಜಿಲ್ಲೆಯಲ್ಲಿ ಬಾಳಿ ಬೆಳಗಿದ, ವಿದ್ಯಾ ಕೇಂದ್ರಗಳಾಗಿ ಸೇವೆ ಸಲ್ಲಿಸಿದ ಅನೇಕ ಅಗ್ರಹಾರಗಳನ್ನ ಒಳಗೊಂಡಿತ್ತು ಎಂಬ ಆಧಾರ ಸಹಿತ ಮಾಹಿತಿಯನ್ನು ಶ್ರೀಯುತರು ದಾಖಲಿಸಿರುವುದನ್ನು ನಾವು ಕಾಣಬಹುದು ಪಂಪಭಾರತದಲ್ಲಿ ಉಲ್ಲೇಖಿತವಾಗಿರುವ 'ಅರಿಕೇಸರಿಯ' ಪಂಪನಿಗೆ ಅಗ್ರಹಾರವನ್ನು ಕೊಡುಗೆಯಾಗಿ ನೀಡಿದನು ಎಂಬ ಅಂಶಗಳಂತೆ ಮಂಡ್ಯ ಜಿಲ್ಲೆಯು ಸಹ ಅಗ್ರಹಾರಗಳನ್ನು ಮತ್ತು ಮಠಗಳನ್ನು ಹೊಂದಿತ್ತು ಎಂಬ ಇವರ ಮಾಹಿತಿಯನ್ನು ನಾವು ಗಮನಿಸಬಹುದಾಗಿದೆ.

ಸ್ಥಳಪುರಾಣದ ಪ್ರಕಾರ ಜಿಲ್ಲೆಯ ಪ್ರಾಚೀನ ಅಗ್ರಹಾರವೆಂದರೆ ನಾಗಮಂಗಲ ಹೊಯ್ಸಳ ಪೂರ್ವದಲ್ಲಿಯೇ ಇದು ಚತುರ್ವೇದ ಭಟ್ಟಾರಕ ರತ್ನ ಅಗ್ರಹಾರವೆಂದು, ಇದು ಅಂದಿನ ಪ್ರಮುಖ ವಿದ್ಯಾಕೇಂದ್ರ ಮತ್ತು ವಾಣಿಜ್ಯ ಕೇಂದ್ರವಾಗಿತ್ತು, ಮಳವಳ್ಳಿಯ ಸಮೀಪದ ಮಾರೇಹಳ್ಳಿ, ಹೊಯ್ಸಳರ ಕಾಲದಲ್ಲಿ ಮದ್ದೂರು, ಶ್ರೀರಂಗಪಟ್ಟಣದ ಬೆಳಗೊಳ ಮುಂತಾದ ಸ್ಥಳಗಳು ಅಂದು ವಿದ್ಯಾರ್ಜನೆ ಮಾಡುವ ಕೇಂದ್ರಗಳಾಗಿದ್ದವು ಎಂಬ ಮಾಹಿತಿಯನ್ನು ಒಪ್ಪತಕ್ಕದಾಗಿದೆ ಇವುಗಳ ಜೊತೆಗೆ ಮಠಗಳು ಧರ್ಮಬೋಧನೆ ಮತ್ತು ಧರ್ಮ ಪ್ರಸಾರ ತಾಣಗಳಾಗಿದ್ದು, ಇವು ಮುಂದೆ ಗುರುಕುಲಗಳಾಗಿ ಬೆಳೆದು ಕಾಲ ಉರುಳಿದಂತೆ ಬಹುತೇಕ ಆಶ್ರಮಗಳು ವಿದ್ಯಾಪ್ರಸಾರ ಹಾಗೂ ಪ್ರಚಾರ ಕೇಂದ್ರಗಳಾಗಿ ರೂಪುಗೊಂಡ ಬಗೆಯನ್ನು ಅದರಲ್ಲೂ ನಾಗಮಂಗಲದ ಆದಿಚುಂಚನಗಿರಿಯಲ್ಲಿರುವ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಪ್ರಾಚೀನ ಮಠ ಈ ಮಠದ ವೈಶಿಷ್ಟ್ಯತೆಗಳು ಆ ಮಠಗಳು ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಪ್ರಸ್ತುತ ಸಂದರ್ಭದಲ್ಲಿ ಹೇಗೆ ಶ್ರಮಿಸುತ್ತಿವೆ ಎಂಬ ಅಂಶಗಳನ್ನು ದಾಖಲಿಸುತ್ತಾ ಮೇಲುಕೋಟೆಯಲ್ಲಿರುವ ರಾಮಾನುಜರ ವಿಶಿಷ್ಟ ದ್ವೈತ ಸಿದ್ಧಾಂತದ ಹಿನ್ನಲೆಯಲ್ಲಿರುವ ಯತಿರಾಜ ಮಠ, ಅಹೋಬಲಮಠಗಳ ಕಾರ್ಯ ವೈಖರಿಯ ಬಗ್ಗೆ ಮತ್ತು ಆ ಮಠಗಳು ಹೊಂದಿದ್ದ ಪ್ರಾಚೀನ ಗ್ರಂಥಗಳು, ಹಾಗೂ ಧರ್ಮ ಜಾಗೃತಿ ಕಾರ್ಯಕ್ರಮಗಳುವ, ಮಳವಳ್ಳಿ ತಾಲ್ಲೂಕಿನಲ್ಲಿದ್ದ ಮಂಟೇಸ್ವಾಮಿ ಮಠ, ಶ್ರೀ ಶೈಲ ಕ್ಷೇತ್ರಕ್ಕೆ ಸಂಬಂಧಿಸಿದ ರೇವಣಾರಾಧ್ಯ ಮಠದ ಪ್ರಾಚೀನತೆ ಪಾಂಡವಪುರದ ಬೇಬಿ ಸಿದ್ದೇಶ್ವರ ಮಠ, ಕೆ.ಆರ್.ಪೇಟೆಯ ಗವಿಮಠ ಹೀಗೆ ಲೇಖಕರು ಮಠಗಳ ಚಟುವಟಿಕೆಯಲ್ಲಿ ಮಂಡ್ಯ ಜಿಲ್ಲೆ ವಿಶೇಷವಾದ ಕೊಡುಗೆ ಕೊಟ್ಟಿದ ಅಂಶಗಳನ್ನು ತಮ್ಮ ಗ್ರಂಥದಲ್ಲಿ ಸ್ಪಷ್ಟವಾಗಿ ನಮೂದಿಸಿರುವುದನ್ನು ನಾವು ಅರಿಯಬಹುದಾಗಿದೆ. ತೈಲೂರರು ಪ್ರಾಚೀನ ಹಾಗೂ ಮಧ್ಯಕಾಲೀನ ಸಾಹಿತ್ಯ ಮಂಡ್ಯ ಜಿಲ್ಲೆಯ ಸಾಹಿತ್ಯಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವಾರು ಮೂಲಗಳಿಂದ ಮಾಹಿತಿಯನ್ನು ಕಲೆಹಾಕಿ ತಮ್ಮದೇ ಆದ ಬರವಣಿಗೆಯಲ್ಲಿ ಅಭಿವ್ಯಕ್ತಿಸಿರುವುದನ್ನು ಅವರ ಗ್ರಂಥದಲ್ಲಿ ತಿಳಿಯಬಹುದಾಗಿದೆ.

ಸಾಮಾನ್ಯವಾಗಿ ಕನ್ನಡ ಸಾಹಿತ್ಯದ ಬೆಳವಣಿಗೆಗೆ ರಾಜಾಶ್ರಯ ಬಹುಮಟ್ಟಿಗೆ ಕಾರಣವಾದರೂ, ಸ್ವತಃ ಅರಸರು, ಮಾಂಡಲೀಕರು, ಅಧಿಕಾರಿಗಳು ಕೃತಿ ರಚನೆಗೆ ನೆರವು ನೀಡಿರುವಂತಹ ಅಂಶಗಳು ಮತ್ತು ಧರ್ಮಕ್ಕೂ ಸಾಹಿತ್ಯಕ್ಕೂ ನಿಕಟ ಸಂಬಂಧವಿರುವ ಅಂಶಗಳನ್ನು ಜೊತೆಗೆ ಕೃತಿಕಾರನ ವಿಷಯದ ಗ್ರಂಥದ ರಚನೆಗೆ ಧರ್ಮವು ಕಾರಣವಾಗಿರುವುದು, ಹೀಗಾಗಿ ಕನ್ನಡ ಸಾಹಿತ್ಯ ಉಗಮ ಮತ್ತು ಬೆಳವಣಿಗೆಗೆ

ಧರ್ಮವೇ ಪ್ರೇರೇಕ ಶಕ್ತಿಯಾಗಿರುವ ಅಂಶಗಳನ್ನು ಕೃತಿಗಳಲ್ಲಿ ಕಾಣಬಹುದಾಗಿದೆ.

ಈ ಹಿನ್ನೆಲೆಯಲ್ಲಿ ತೈಲೂರರು ತಮ್ಮ ಗ್ರಂಥದಲ್ಲಿ ಮಂಡ್ಯ ಜಿಲ್ಲೆಯ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದ ರಾಜರ ಆಶ್ರಯ ದಾತರು ರಚಿಸಿರುವ ಸಾಹಿತ್ಯ ಪ್ರಕಾರಗಳಾದ ಕಥೆ, ಅಲಂಕಾರಿಕ ಗ್ರಂಥ, ಸಾಂಗತ್ಯ ರೂಪದ, ಕವಿತೆ, ನಾಟಕಗಳು ಪುರಾಣ ಪ್ರಕಾರಗಳನ್ನು ಮತ್ತು ಈ ಜಿಲ್ಲೆಯಲ್ಲಿ ಉದಯಿಸಿರುವ ಕವಿಗಳ ಮಾಹಿತಿಯನ್ನು ಇತರ ಸಾಹಿತ್ಯ ಗ್ರಂಥಗಳಿಂದ ವಿಶ್ಲೇಷಿಸಿ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುವುದನ್ನು ನಾವು ಕಾಣಬಹುದಾಗಿದೆ.

ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿನ ಸಿಂಗರಾರ್ಯರು ರಚಿಸಿದ 'ಮಿತ್ರಾವಿಂದ ಗೋವಿಂದ' ನಾಟಕ ತಿರುಮಲಾರ್ಯನ 'ಅಪ್ರತಿಮ ವೀರ ಚರಿತೆ', ಶಾಸ್ತ್ರ ಗ್ರಂಥಗಳು ಚಿಕ್ಕದೇವರಾಜ ವಂಶಾವಳಿ, ಮಲ್ಲಿಕಾರ್ಜುನನ, ಶ್ರೀರಂಗ ಮಹಾತ್ಮೆ ಸಂಚಿಹೊನ್ನಮ್ಮಳ ಹದಿಬದೆಯ ಧರ್ಮ, ಶೃಂಗಾರಮ್ಮನ ಪದ್ಮಿನಿ ಕಲ್ಯಾಣ ಮತ್ತು ವೀರಶೈವ ಕವಿಯಾದ ಷಡಕ್ಷರ ದೇವನ ಕೃತಿಗಳು, ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ ಷಡಕ್ಷರ ದೇವನ ಕೃತಿಗಳು ಮೇರುಕೃತಿಯ ಲಕ್ಷಣಗಳನ್ನು ಒಳಗೊಂಡಿರುವುದರ ಗೋವಿಂದ ವೈದ್ಯ, ಕಂಠೀರವ ನರಸರಾಜ ಒಡೆಯರ್ ಈ ಕೃತಿಯಲ್ಲಿ ಕಾವ್ಯದೊಂದಿಗೆ ಇತಿಹಾಸವೂ ಹಾಸುಹೊಕ್ಕಾಗಿರುವ ಅಂಶವನ್ನು ಗಮನಿಸಿರುವುದು, ಭಾಸ್ಕರ ಬೇಹಾರಗಣಿತ, ತಿಮ್ಮರಸನ ಮಾರ್ಕಂಡೇಯ ರಾಮಾಯಣ, ದೇವಚಂದ್ರನ 'ರಾಜಾವಳಿ' ಕಥೆ, ಟಿಪ್ಪುಸುಲ್ತಾನ್ ಆಡಳಿತಾವಧಿಯಲ್ಲಿ ರಚಿಸಿದ ಕೃತಿಗಳನ್ನು ಸಂಗ್ರಹಿಸಿ, ಈ ಜಿಲ್ಲೆಗೆ ಸಾಹಿತ್ಯ ಶ್ರೀಮಂತಿಕೆಯನ್ನು ನೀಡಿದ ಕವಿಗಳ ಕೊಡುಗೆಯನ್ನು ಅಮೂಲಾಗ್ರವಾಗಿ ದಾಖಲಿಸಿದ್ದಾರೆ.

ಧರ್ಮದ ಹಿನ್ನೆಯಲ್ಲಿಯೂ ಸಹ ಹಲವಾರು ಕೃತಿಗಳು ಈ ಜಿಲ್ಲೆಯಲ್ಲಿ ರಚಿತಗೊಂಡಿರುವ ಅಂಶಗಳನ್ನು ನಾವು ಗಮನಿಸಬಹುದಾಗಿದೆ. ಗೀತಗೋಪಾಲ, ಭಾಗವತ, ಶೇಷಧರ್ಮ, ಭಾರತ ಮತ್ತು ಚಿತ್ರಕಲಾ ದೃಷ್ಟಿಯಿಂದ ಶ್ರೀರಂಗಪಟ್ಟಣದ ದರಿಯಾದೌಲತ್ ಜನಪದ ಶೈಲಿಯ ಚಿತ್ರಣಗಳ ದೃಷ್ಟಿಯಿಂದ, 'ಲಕ್ಷ್ಮಿದೇವಾಲಯ' ಪಟ್ಟಾಭಿಷೇಕ ಚಿತ್ರಗಳು, ತಂಜಾವೂರು ಶೈಲಿಯ ಚಿತ್ರಗಳು ಕಾಣಸಿಗುವುದನ್ನು ನೋಡಬಹುದಾಗಿದೆ.

ಸಂಸ್ಕೃತಿಗೆ ಸಂಬಂಧಿಸಿದ ಶ್ರೀರಂಗಪಟ್ಟಣದ ದಸರಾ ಹಬ್ಬದ ಕಾರ್ಯಕ್ರಮ, ಮಹಾನವಮಿಯ ಒಡ್ಡೋಲಗ ಅರಸರ ಆಗಮನ, ಮಹಾನವಮಿಯ ಆಯುಧಪೂಜೆ, ವಿಜಯ ದಶಮಿಯ ಜಂಬೂ ಸವಾರಿಗಳನ್ನು ನೋಡಿ ವಿಶ್ಲೇಷಿಸಿ ದಾಖಲಿಸಿರುವುದು

ಮತ್ತು ಶ್ರೇಷ್ಠ ಕೀರ್ತನಕಾರರು, ದಾಸರು, ಭೇಟಿಕೊಟ್ಟು ಅವರು ರಚಿಸಿದ ಕೀರ್ತನೆಗಳ ಮಹತ್ವವನ್ನು ಮೇಲುಕೋಟೆಯ ವೈರಮುಡಿ ಉತ್ಸವವನ್ನು ಅಲ್ಲಿ ಮಿಳಿತ ಗೊಂಡಿರುವ ಶಿವಭಕ್ತಿ ಮತ್ತು ಜೈನಭಕ್ತಿ ಅಂಶಗಳನ್ನು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯೆನಿಸಿದ ಗೋವಿನಕಥೆಯನ್ನು ಈ ಜಿಲ್ಲೆಯ ದೇವತೆ ಶ್ರೀನಾರಸಿಂಹನ ಅಂಕಿತದಲ್ಲಿ ಸಮರ್ಪಿಸಿರುವ ಅಂಶಗಳ ಜೊತೆ ಈ ಪ್ರದೇಶದ ಕೃಷಿಯೊಂದಿಗೆ ಗೋವುಗಳ ಲಾಲನೆ ಪಾಲನೆ ಜನಜೀವನದ ಸಂಸ್ಕೃತಿಯನ್ನು ಪರಿಚಯಿಸುವ ದೃಷ್ಟಿಯಿಂದ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವುದನ್ನು ನಾವು ತಿಳಿಯಬಹುದಾಗಿದೆ.

ಜನಪದ ಸಂಸ್ಕೃತಿಯನ್ನು ಬಿಂಬಿಸಲು ಮಂಡ್ಯ ಜಿಲ್ಲೆಯು ನೀಡಿದ ಶ್ರೇಷ್ಠ ಕೊಡುಗೆಗಳನ್ನು ಸ್ವತಃ ತೈಲೂರರು ನೋಡಿ ದಾಖಲಿಸಿದ್ದಾರೆ.

ಮಂಡ್ಯ ಜಿಲ್ಲೆಯ ಮಣ್ಣಿನ ಮಕ್ಕಳ ನೈಜ ಪರಿಸರದ ಬದುಕಿನ ಅಂತರಂಗಗಳನ್ನು ಮತ್ತು ಜನಪದ ಕಲೆಗಳ ಪ್ರಕಾರಗಳನ್ನು ಕಲೆಗಳಲ್ಲಿನ ಪೂಜೆಕುಣಿತ, ಕೋಲಾಟಗಳು, ಲೌಕಿಕ ವೃತ್ತಿ ಗಾಯಕರು, ಗ್ರಾಮ ದೇವತೆ ಹಬ್ಬಗಳ ವಿಚಾರ, ಜನಪದ, ಪಕ್ಷಿಧಾಮ, ಜಿಲ್ಲೆಯ ಜನಪದರು ಸಾಮನ್ಯವಾಗಿ ಬಳಸುತ್ತಿದ್ದ ಉಪಕರಣಗಳು, ಸಾಮಗ್ರಿಗಳು, 'ಕರಗಹಬ್ಬದ' ಚಿತ್ರಣ, ದಂತಕತೆಗಳ ಇತಿಹಾಸ, ಮೇಳದ ಕುಣಿತ ಆರತಿ ಉಕ್ಕಡ ದೇವಿಯ ಜಾತ್ರೆ ಮತ್ತು ಪಂಜು ಕೋಲಾಟ, ಬೆಂಕಿ ಭರಾಟೆ, ಕತ್ತಿ ವರಸೆ ಆಟಗಳು, ಮೂಡಲ ಪಾಯ ಯಕ್ಷಗಾನ ರಂಗ ಕುಣಿತ, ಚೌಡಿಕೆ ಕಲೆಗಳು, ಸೂತ್ರದ ಬೊಂಬೆಯ ಕೋಲಾಟ, ಗ್ರಾಮೀಣ ಕಲೆಯಾದ, ಕತ್ತಲಿನಲ್ಲಿ ಬೆಳಕಿನ ಚಿತ್ತಾರ ಪಟದಕುಣಿತ,ಭಾಗವಂತಿಕೆ, ಸೋಮನ ಕುಣಿತ,ಪೂಜಾ ಕುಣಿತ,ಸಂಪ್ರದಾಯಗಳು,ಸ್ವಯಂ ಹೆರಿಗೆ ಪ್ರಸ್ತಾಪ, ಗೊಲ್ಲರದೊಡ್ಡಿ, ಕೃಷ್ಣಮುದ್ರೆ, ಗಾದೆಯಮಾತುಗಳು ಮತ್ತು ರಾಗಿಯ ಸಂಸ್ಕೃತಿ, 'ರಾಗಿ ತಿಂದು ನಿರೋಗಿಗಳಾಗಿರಿ' ಎಂಬಂತೆ ಈ ಎಲ್ಲಾ ವಿಷಯಗಳನ್ನು ಸ್ವತಃ ಕಣ್ಣಾರೆ ಕಂಡು ದಾಖಲಾಸಿರುವುದು ಗಮನಾರ್ಹ ಅಂಶವಾಗಿದೆ.

ಅಡಿ ಟಿಪ್ಪಣಿ :-

೧ ತೈಲೂರು ವೆಂಕಟಕೃಷ್ಣ, ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, ಭಾನುಪ್ರಕಾಶನ - ೧೯೯೨, ಪುಟ ಸಂಖ್ಯೆ-೨೫

೨. ಅದೇ..ಪು..೨೬

೩. ಅದೇ... ಪು..೨೯

ii) ಸ್ಥಳನಾಮಗಳ ಅಧ್ಯಯನ

ಶ್ರೀ ತೈಲೂರರು ಪದವಿ ಪಡೆದದ್ದೂ ವಿಜ್ಞಾನ ವಿಭಾಗದಲ್ಲಿ ಕೃತಿ ರಚನೆ ಮಾಡಿದ್ದು ಸಾಹಿತ್ಯಕ ಕ್ಷೇತ್ರದಲ್ಲಿಯಾದರೂ. ಸಂಶೋಧನೆಯ ಬಗ್ಗೆ ಹೆಚ್ಚು ಕುತೂಹಲ ಹೊಂದಿದ್ದರಿಂದ ೨೦೦೪ ರಲ್ಲಿ 'ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ' ಎಂಬ ಸಂಶೋಧನಾ ಗ್ರಂಥವನ್ನು ರಚಿಸಿದ್ದಾರೆ. ಈ ಗ್ರಂಥವು ಕನ್ನಡ ಸಾರಸ್ವತ ಲೋಕಕ್ಕೆ ಅವರು ನೀಡಿದ ಅಪೂರ್ವ ಕೃತಿ ಎನ್ನಬಹುದು.

ಸ್ಥಳನಾಮದ ಅಂತರಾಳದ ಒಳಹೊಕ್ಕಾಗ ಮನುಷ್ಯ ಮತ್ತು ಪ್ರಕೃತಿಯ ಅವಿನಾಭಾವದ ಸಂಬಂಧ ದರ್ಶನವಾಗುವುದು ಸಹಜ, ಜೊತೆಗೆ ಸಂಸ್ಕೃತಿ, ಆಧ್ಯಾತ್ಮ ಇತಿಹಾಸ ಭಾಷಾ ವೈಜ್ಞಾನಿಕ ಮತ್ತು ಇನ್ನಿತರ ಮಹತ್ವ ಸಂಗತಿಗಳು ಎಳೆ ಎಳೆಯಾಗಿ ಗೋಚರಿಸುತ್ತವೆ, ಎಂಥವರೇ ಆಗಲಿ ಸ್ಥಳನಾಮ ಶಾಸ್ತ್ರದ ಬಗ್ಗೆ ಸ್ವಲ್ಪ ಆಸಕ್ತಿ ತೋರಿಸಿದರೆ ಸಾಕು ಅಯಸ್ಕಾಂತದಂತೆ ತನ್ನ ಕಡೆಗೆ ಸೆಳೆದುಕೊಳ್ಳುತ್ತದೆ.

ಈ ನಿಟ್ಟಿನಲ್ಲಿ ತೈಲೂರರು ತಮ್ಮ ಜಿಲ್ಲೆಯ ಊರುಗಳ ಹೆಸರುಗಳನ್ನು ತೆಗೆದುಕೊಂಡು ಒಂದೊಂದಾಗಿ ಅವುಗಳ ಹಿನ್ನೆಲೆ, ನಿಷ್ಪತ್ತಿ ಅವು ಧ್ವನಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಜಿಲ್ಲೆಯಾದ್ಯಂತ ಸಂಚರಿಸಿ ಈ ಅಂಶಗಳನ್ನು ತಮ್ಮ ಗ್ರಂಥದಲ್ಲಿ ಪ್ರಕಟಿಸಿರುವುದು ಒಂದು ಉತ್ತಮ ಕಾರ್ಯವಾಗಿದೆ ಎಂದು ಅಭಿಪ್ರಾಯ ಪಡಬಹುದು. "ಐತಿಹಾಸಿಕ ದಾಖಲೆಗಳು ಮೌನ ವಹಿಸಿದಾಗ ಸ್ಥಳನಾಮಗಳು ಮಾತನಾಡುತ್ತವೆ. ಕಾಲಗರ್ಭದಲ್ಲಿ ಅಡಗಿ ಹೋದ ಎಷ್ಟೋ ಅಪೂರ್ವ ಸಂಗತಿಗಳನ್ನು ಸ್ಥಳನಾಮಗಳು ಉಳಿಸಿಕೊಂಡಿರುತ್ತವೆ, ಸ್ಥಳನಾಮ ಘಟಕಗಳು ಅನೇಕ ಸಾಂಸ್ಕೃತಿಕ, ಭೌಗೋಳಿಕ ವಿಷಯಗಳನ್ನು ಸೂಚಿಸುತ್ತವೆ, ಅವುಗಳ ನಿಜವಾದ ವ್ಯಾಖ್ಯಾನಕ್ಕೆ ಶಾಸನಗಳು ಐತಿಹ್ಯಗಳು ಸಹಾಯಕವಾಗಿರುವಂತೆ ಆ ಊರಿನ ಭೇಟಿ ಅಥವಾ ಕ್ಷೇತ್ರಕಾರ್ಯವೂ ಸಹಾಯ ಮಾಡುತ್ತದೆ."[೧] ಈ ಹಿನ್ನೆಲೆಯಲ್ಲಿ ತೈಲೂರರು ಜಿಲ್ಲೆಯ ಬಹುಪಾಲು ಹಳ್ಳಿಗಳಿಗೆ ಹೋಗಿ ಕ್ಷೇತ್ರಕಾರ್ಯ ಕೈಗೊಂಡು ಅಲ್ಲಿನ ಎಲ್ಲಾ ಅಂಶಗಳನ್ನ ದಾಖಲಿಸಿರುವುದನ್ನು ನಾವು ತಿಳಿಯಬಹುದಾಗಿದೆ,

ಪ್ರಾರಂಭದಲ್ಲಿ ತೈಲೂರರು ಸ್ಥಳ ನಾಮಗಳ ವ್ಯಾಖ್ಯಾನವನ್ನು ಮತ್ತು ಅದರ ಉದ್ದೇಶಗಳನ್ನು ಅರ್ಥೈಸಿದ್ದಾರೆ. ಸ್ಥಳನಾಮಗಳು ಎಂದರೆ ಒಂದು ಸ್ಥಳದ ಅಥವಾ ಇನ್ನ್ಯಾವುದೇ ಇತಿಹಾಸವನ್ನು ತಿಳಿಯಲು ಶಾಸನ, ಸ್ಮಾರಕ, ನಾಣ್ಯ, ಸಂಬಂಧಪಟ್ಟ ಗ್ರಂಥಗಳು, ಐತಿಹ್ಯಗಳು ಮತ್ತು ಪಳೆಯುಳಿಕೆಗಳು ಸಹಾಯಕ್ಕೆ ಬರುತ್ತವೆ. ಒಂದು

ಊರಿನ ಅಥವಾ ಪಟ್ಟಣದ ಹೆಸರಿನ ಮೂಲ ಹುಡುಕಲು ಹೊರಟರೆ ಋಷಿಮೂಲ ಹುಡುಕಿದಂತಾಗುತ್ತದೆ. ಅದಕ್ಕೊಂದು ನೀತಿ ನಿಯಮವಿದೆ. ಅದನ್ನು ಸ್ಥಳನಾಮಗಳ ಅಧ್ಯಯನ ಎಂದು ಕರೆಯಲಾಗುತ್ತದೆ, ಅತಂಹ ಅಧ್ಯಯನ ವಿಜ್ಞಾನವಾಗಿ ಬೆಳೆಯುತ್ತದೆ. ಸಸ್ಯ ವಿಜ್ಞಾನ, ಶಿಲಾವಿಜ್ಞಾನ ಪುರಾತತ್ವವಿಜ್ಞಾನ ಇತಿಹಾಸ, ಜಾನಪದ, ಭೂಗೋಳ ಮೊದಲಾದ ವಿಷಯಗಳು ಅಧ್ಯಯನದ ಶಿಸ್ತುಗಳಿಗೆ ಒಳಪಡುತ್ತೆವೆ. ಅದರೊಂದಿಗೆ ಹುಟ್ಟಿಕೊಳ್ಳುವ ಐತಿಹ್ಯವನ್ನು ತಳ್ಳಿಹಾಕುವಂತಿಲ್ಲ "ಸ್ಥಳನಾಮಗಳ ಅಧ್ಯಯನದಿಂದ ಒಂದು ಜನಾಂಗದ ಅಭಿರುರುಚಿ, ಅನುಭವ ಸಂಸ್ಕೃತಿ ಸೃಜನಶೀಲ ಕ್ರಿಯೆಗಳನ್ನು ಅರಿಯಬಹುದು."[೨]

ಶ್ರೀಯುತರು ಸ್ಥಳನಾಮಗಳ ಅಧ್ಯಯನದ ವಿಧಾನಗಳು ಮತ್ತು ಅದರ ನಿಷ್ಪತ್ತಿ ನಿರ್ಣಯಗಳು ಹೇಗೆ ಪ್ರಮುಖವಾದವು ಈ ನಿಷ್ಪತ್ತಿ ಕಾರ್ಯವನ್ನು ಭೌಗೋಳಿಕ ಪರಿಸರ ಸಾಂಸ್ಕೃತಿಕ ಹಾಗೂ ಇನ್ನಿತರ ಸಂಗತಿಗಳನ್ನು ಸ್ವತಃ ಜಿಲ್ಲೆಯ ಎಲ್ಲಾ ಸ್ಥಳಗಳಿಗೆ ಕ್ಷೇತ್ರ ಕಾರ್ಯಕೈಗೊಂಡು ಎಲ್ಲಾ ಅಂಶಗಳನ್ನು ದಾಖಲಿಸಿರುವುದನ್ನು ನಾವು ಈ ಗ್ರಂಥದಲ್ಲಿ ಗಮನಿಸಬಹುದಾಗಿದೆ.

ತೈಲೂರರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕ್ಷೇತಕಾರ್ಯ ಕೈಗೊಂಡು ಆ ಹಳ್ಳಿಗಳ ಸ್ವಭಾವ, ಗ್ರಾಮೀಣ ಸೊಗಡು ಕೃಷಿಯಲ್ಲಿ ಸಾಂಸ್ಕೃತೀಕರಣ, ಆಧ್ಯಾತ್ಮೀಕರಣ ಮತ್ತು ಸ್ವಾವಲಂಬನೆಗೆ ಸಂಬಂಧಿಸಿದ ಹಿನ್ನಲೆಯಲ್ಲಿ ರಚಿತವಾದ ಅಂಶಗಳನ್ನು ದಾಖಲಿಸಿರುವುದು ಗಮನಾರ್ಹವಾದದು. ಜಿಲ್ಲೆಂಯುಲ್ಲಿನ ಅಧಿಕ ಸಂಖ್ಯೆಯಲ್ಲಿ ಅಂಕಿತ ನಾಮಗಳೊಂದಿಗೆ ಸೇರ್ಪಡೆಯಾದ ಹಳ್ಳಿಗಳ ಮಾಹಿತಿ, "ಹಳ್ಳಿ ಎಂದರೆ ಗ್ರಾಮ ಈ ಹಿನ್ನಲೆಯಲ್ಲಿ ರಚಿತವಾದ ಅಂಶನಗಳು ಅಂಕನಹಳ್ಳಿ, ಆಲದಳ್ಳಿ ಲೋಕನಹಳ್ಳಿ, ಬ್ಯಾಡರಹಳ್ಳಿ"[೩]. ಇವುಗಳನ್ನು ಕಾಲಾನುಕಾಲಕ್ಕನುಗುಣವಾಗಿ ಬೆಳೆದಿರುವ ಅಂಶವನ್ನು ದಾಖಲಿಸಿರುವುದು ಒಳ್ಳೆಯ ಕಾರ್ಯವೆಂದು ಅಭಿಪ್ರಾಯ ಪಡಬಹುದು.

ಪುರ, ಕೋಟೆಕೊತ್ತಲಗಳಿಗೆ ಸಂಬಂಧಿಸಿದ ಜನಸಾಂದ್ರತೆಯುಳ್ಳ ವಾಸಸ್ಥಳ ಬಗ್ಗೆ ಕ್ಷೇತ್ರಕಾರ್ಯ ಕೈಗೊಂಡು ಅಂಕುಶಾಪುರ, ಮೇಳಾಪುರ. 'ಊರು' ಒಂದೆಡೆ ನೆಲೆ ನಿಲ್ಲುವ ಸ್ಥಳ, ಕರಿಕಲ್ಲು ಅಣ್ಣೂರು, ಧನಗೂರು, ಕೆರೆ, ಗೆರೆ, ಸಾಗರ, ಸಮುದ್ರ, ಕಟ್ಟೆಗಳು ಮತ್ತು ಜಲ ಸೂಚಕವಾಗಿ ಸಂಕೇತವಾಗಿರುವ ಸ್ಥಳಗಳಾದ ಆಲಕೆರೆ, ಎಲೆಕೆರೆ, ಉಪ್ಪಿನಕೆರೆ, ಕೊಪ್ಪ, ಕೊಪ್ಪಲುಜನ ಗುಂಪಾಗಿ ವಾಸಿಸುವ ಒಂದು ಹಳ್ಳಿ, 'ವಾಡಿಗೆ'– ಸಂಬಂಧಿಸಿದಂತೆ ಧಾನ್ಯ ಬೆಳೆಯುವ ಜಾಗ,ಸೈನ್ಯದ ಬೀಡು. ಬಿಡಾರ, ಆಬಲವಾಡಿ, ಯತ್ತಂಬಾಡಿ, ಹಳುವಾಡಿ, ಘಟ್ಟ, ಬೆಟ್ಟಗುಡ್ಡಗಳಿಗೆ ಸಂಬಂಧಿಸಿದ ಪ್ರದೇಶದ, ನಿಗದಿತ ಎಲ್ಲೆಯ ಗುರುತಿನ ಅಂಶಗಳನ್ನು ಅವರ ಗ್ರಂಥದಲ್ಲಿ ಉಲ್ಲೇಖಿಸಿರುವುದನ್ನು

ಒಪ್ಪಬಹುದಾಗಿದೆ.

ಕಲ್ಲು, ಎರೆ, ಅರೆ, ಮಣ್ಣು, ಗಾಪಿ, ತಗ್ಗು, ಗುಂಡಿ, ಹುಂಡಿ, ಗುಂದ, ಕಸುಬು ಆಧಾರಿತ ಜನಾಂಗ ವಾಸವಾಗಿದ್ದು ಊರಿನ ಐತಿಹ್ಯ, ಕುಂದ, ಗುಂದ ಮಂಟ್ಪಿ, ಗೂಡು-ಬೀಡು ಕಳಲೆ, ಬಾಗಿಲು ಹಟ್ಟಿ ಕೋಟೆ, ಮುಂತಾದ ಪ್ರಾಕೃತಿಕ ಸ್ವಭಾವ ಅಥವಾ ಗುಣ ಲಕ್ಷಣಗಳಿಂದ ಕೂಡಿದ, ನಿಷ್ಪನ್ನವಾದ ಸಹಜ ನಾಮಗಳನ್ನು ಹೆಸರಿಸುವುದನ್ನು ಕಾಣಬಹುದಾಗಿದೆ. "ಕಲ್ಲಾರೆಪುರ, ಕಲ್ಲುಣಿ, ಅರೇನಹಳ್ಳಿ, ಕಂದೇಗಾಲ, ತಗ್ಗಹಳ್ಳಿ, ತಳಗವಾದಿ, ಹುಂಡಿ, ಅಲಗೂಡು."[9] ಮುಂತಾದವು ಸೂಚಿತವಾಗಿವೆ ಇವುಗಳ ಜೊತೆಗೆ ದೊಡ್ಡಿ ಮತ್ತು ಕಾವಲ್ (ಕಾವಲು) ಸ್ಥಳನಾಮಗಳು ಮಂಡ್ಯ, ಮದ್ದೂರು, ಮಳವಳ್ಳಿ , ತಾಲೂಕಿನಲ್ಲಿ ಹೆಚ್ಚಾಗಿ ಕಂಡುಬರುವ ಅಂಶಗಳು, ವ್ಯಕ್ತಿಗಳಿಂದ ಕರೆಯಲ್ಪಡುವ ದೊಡ್ಡಿ ಹೆಸರುಗಳ ಹಿನ್ನೆಲೆ, ಭೂ ವಿವರಕ್ಕೆ ಸಂಬಂಧಿಸಿದ ದೊಡ್ಡಿಗಳು ಹಾಗೂ ಕಸುಬು ಆಧಾರಿತ ಜಾತಿಯ ಹಿನ್ನೆಯಲ್ಲಿ ಇರಬಹುದಾದ ಸ್ಥಳನಾಮಗಳು ಮತ್ತು ಅವು ಊರಿಗೆ ಹೇಗೆ ಪೂರಕವಾಗಿರುತ್ತವೆ ಎಂಬುದನ್ನು ಹೆಸರಿಸುವ ಮೂಲಕ ಉಲ್ಲೇಖಿಸಿರುವುದನ್ನು ತಿಳಿಯಬಹುದಾಗಿದೆ. "ಅಂಕಣ್ಣನದೊಡ್ಡಿ, ಚಾಪುರದೊಡ್ಡಿ, ಎಲೆದೊಡ್ಡಿ, ಅಣ್ಣಳ್ಳಿದೊಡ್ಡಿ, ಉಪ್ಪಾರದೊಡ್ಡಿ, ಅಗಸರದೊಡ್ಡಿ, ಈಡಿಗರ ದೊಡ್ಡಿ."[10]

ಸಸ್ಯ ಮತ್ತು ಪ್ರಾಣಿಗಳ ಹಿನ್ನೆಲೆಯಲ್ಲಿ, ದಿಕ್ಕುಗಳನ್ನು ಗುರ್ತಿಸಲ್ಪಡುವ ದೆಸೆಯಿಂದ ನಿಷ್ಪನ್ನವಾದ ಸ್ಥಳಗಳು ಮತ್ತು ಗ್ರಾಮನಾಮಗಳು ವೈವಿಧ್ಯಮಯವಾಗಿರುವುದನ್ನು ಅತ್ತಿಗುಪ್ಪೆ, ಆಲದಹಳ್ಳಿ ಮೂಡಲು, ಪಡುವಣ, ತೆಂಕನಹಳ್ಳಿ, ಹೂವಿನಹಳ್ಳಿ, ನವಿಲೆ, ಬಿಂಡಗ ನವಿಲೆ, ಹುಲಿವಾಹನ, ಅಘಲಯ, ಆನೆಗೊಳ, ಕಡಬ, ಕೆನ್ನಾಳು, ಹೆಮ್ಮಿಗೆ, ಸುಖಧರೆ, ಸಾರಂಗಿ, ಇಂತಹ ಕುತೂಹಲ ಕೆರಳಿಸುವಂತಹ ಸ್ಥಳನಾಮಗಳನ್ನು ಆಸಕ್ತಿಯಿಂದ ಕ್ಷೇತ್ರಕಾರ್ಯ ಕೈಗೊಂಡು ಸಂಗ್ರಹಿಸಿ ದಾಖಲಿಸಿರುವುದು ಒಳ್ಳೆಯ ಕಾರ್ಯವೆಂದು ಅಭಿಪ್ರಾಯಪಡಬಹುದು.

ಧರ್ಮ ಮತ್ತು ದೇವರು, ಅದರಲ್ಲೂ, ವಿಶೇಷವಾಗಿ ಈಶ್ವರನ ಹೆಸರಿನಲ್ಲಿ ಕಟ್ಟಿಕೊಂಡ ಗ್ರಾಮಗಳು ಲಿಂಗಾಪುರ, ಶಿವಪುರ, ಶಿವಾರ ,ವೈದ್ಯನಾಥಪುರ ವೈಷ್ಣವ ಧರ್ಮಕ್ಕೆ ಸಂಬಂಧಿಸಿದಂತೆ ಕೃಷ್ಣಾಪುರ, ರಂಗಾಪುರ, ರಾಂಪುರ, ಜೈನಧರ್ಮಕ್ಕೆ ಸಂಬಂಧಿಸಿದಂತೆ, ಜೈನಹಳ್ಳಿ, ಬಸ್ತಿಹಳ್ಳಿ, ದೇವ-ದೇವಿಯರ ಹೆಸರಿನಲ್ಲಿ ಬಿಳಿದೇಗುಲ, ದೇವಲಾಪುರ, ದೇವಿರಹಳ್ಳಿ 'ವ್ಯಕ್ತಿನಾಮ'ಗಳ ಹಿನ್ನಲೆಯಲ್ಲಿ ಆ ವ್ಯಕ್ತಿಯ ಕಸುಬು, ವರ್ತನೆ ಆಕಾರವೂ ಸೇರಿದಂತೆ ರಚಿತವಾದ ಅಪ್ಪುಗೌಡನಹಳ್ಳಿ, ಬೊಮ್ಮನಹಳ್ಳಿ, ಕಪರನ ಕೊಪ್ಪಲು, ಕ್ಯಾತನಹಳ್ಳಿ, ಪಾಳೇಗಾರನ ಹೆಸರಿನ ಹಿನ್ನೆಲೆಯಲ್ಲಿ ನಂಬಿನಾಯಕನಹಳ್ಳಿ, ಆಳರಸರ ಹಿನ್ನೆಯಲ್ಲಿ ರಚಿತವಾದ, ನದಿ ಪಾತ್ರದಲ್ಲಿ ದಡದ ಪಕ್ಕದಲ್ಲಿರುವ

ತೊರೆಬೊಮ್ಮನಹಳ್ಳಿ, ತೊರೆಶೆಟ್ಟಹಳ್ಳಿ, ಬಲಮುರಿ, ಪಶ್ಚಿಮವಾಹಿನಿ, ಗಗನಚುಕ್ಕಿ ಸ್ಥಳಗಳ ಹಿನ್ನಲೆಯಲ್ಲಿ ಮಾಹಿತಿಯನ್ನು ಕಲೆಹಾಕಿರುವುದು ಸ್ಪಷ್ಟವಾಗಿ ಕಂಡುಬಂದಿದೆ.

ತೈಲೂರರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಅದರಲ್ಲೂ ಮಂಡ್ಯ ತಾಲ್ಲೂಕಿಗೆ ಸಂಬಂಧಿಸಿದ ಪ್ರಾಕೃತಿಕ ಸ್ವಾಭಾವಿಕ ನಾಮಗಳು ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನಾಮಗಳ ಮತ್ತು ಜನ ಜೀವನದ ಚಾರಿತ್ರಿಕ ಅವಸ್ಥೆಗಳನ್ನು ದಾಟಿಕೊಂಡು ಬಂದಿರುವ ವೃತ್ತಾಂತ ಸ್ಥಳನಾಮಗಳನ್ನು ಬಹಳ ಅಚ್ಚುಕಟ್ಟಾಗಿ ನಮೂದಿಸಿರುವುದು ಕಂಡುಬರುತ್ತದೆ. ಈ ತಾಲ್ಲೂಕಿನ ೧೯೦ ಗ್ರಾಮಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು 'ಮಂಡ್ಯ' ಈ ಪದದ ನಿಷ್ಪತ್ತಿ ಹೇಗಾಯಿತು, ಅದು ಅಲ್ಲಿಯ ಪ್ರಾಣಿಸೂಚಕ ಮತ್ತು ಸಸ್ಯ ಸೂಚಕವಾಗಿ ಬಂದಿದೆಯೇ ಎಂಬುವುದರ ಮಾಹಿತಿಯನ್ನು ಇನ್ನುಳಿದ ಗ್ರಾಮ ನಾಮಗಳಾದ ಕೀಲಾರ, ಗುತ್ತಲು, ಕೊತ್ತತ್ತಿ, ದುದ್ಧ, ಬೀಚನಹಳ್ಳಿ, ಬಸರಾಳು – ಬಸಿರಾಳು – ಬಸರಾಳು, ಬೂದನೂರು, ಬೇಬಿ – ಬೀಬಿ, ಲೋಕಸರ, ಗೊರವಾಲೆ, ಹೊಳಲು ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಿರುವುದು ಗಮನಾರ್ಹವಾದುದು.

ಮದ್ದೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಅರ್ಜುನಪುರಿ,ವೈದ್ಯನಾಥಪುರ, ಆತಗೂರು – ಶಾಸನ, ಕೆಸ್ತೂರು–ತರಿಭೂಮಿಗೆ ಸಂಬಂಧಿಸಿದ, ವ್ಯಕ್ತಿಸೂಚಕವಾಗಿ ಕಂಪಲಾಪುರ ಸಸ್ಯಸಂಪತ್ತಿಗೆ ಸಂಬಂಧಿಸಿದ ಬೋಳಾರೆ (ಬೋಳ+ಅರೆ), ನವಿಲೆ, ಹೊಳಲು – ಹೆಬ್ಬಳಲು–ಹೆಬ್ಬೆರಳು, ಕಾಡು–ಕೋಟೆ, ಬಿದರಕೋಟೆ ನೆಲೆನಿಂತ ಜಾಗ– ನಿಲುವಾಗಿಲು, ಹೆಮ್ಮನಹಳ್ಳಿ–ಹೆಮ್ಮಾವಿನಹಳ್ಳಿ–ಹೆಮ್ಮನಹಳ್ಳಿ–ಯಮ್ಮನಹಳ್ಳಿ, ರಾಂಪುರ, ಊಟ ವಸತಿ ಒದಗಿಸಿದ ಸ್ಥಳದ ಹಿನ್ನಲೆ–ಛತ್ರದಹೊಸಹಳ್ಳಿ ಇತ್ಯಾದಿ ಅಂಶಗಳ ಮಾಹಿತಿ ಸಮರ್ಪಕವಾಗಿರುವುದು ಕಂಡುಬಂದಿದೆ.

ಮಳವಳ್ಳಿ ತಾಲ್ಲೂಕಿಗೆ ಸಂಬಂಧಿಸಿದಂತಹ ವ್ಯಕ್ತಿನಾಮ ಸೂಚಕವಾಗಿ ಮಾರೇಹಳ್ಳಿ ಸ್ವಾಭಾವಿಕ ಹಿನ್ನಲೆಯಲ್ಲಿ (ಕಲ್ಕುಣಿ, ಕಲ್ಲುಕುಟಕರ ಕಣಿ–ಕಲ್ಲುಕುಣಿ–ಕಲ್ಕುಣಿ) ಬೆಟ್ಟ–ಗುಡ್ಡಕ್ಕೆ ಸಂಬಂಧಿಸಿದಂತೆ ಕುಂದೂರು, ಕುಂತೂರು, ಚಾರಿತ್ರಿಕ ಹಿನ್ನಲೆಗೆ ಸಂಬಂಧಿಸಿದಂತೆ ಕಲ್ಲುವೀರನಹಳ್ಳಿ, ಔಷದಿಯ ಸಸ್ಯಗಳ– ನೆಲಮಾಕನಹಳ್ಳಿ ಹಾಡ್ಯಕ್ಕೆ ಸಂಬಂಧಿಸಿದಂತೆ, ಹಾಡ್ಲಿ ಕೃಷಿಗೆ ಸಂಬಂಧಿಸಿದ ಬಸವ – ಬಸವನಪುರ ಕಸುಬು ಆಧಾರಿತ–ಅಗಸನಪುರ, ಮರಗಳಿಗೆ–ತಾಳವಾಡಿ, ಸಂಪತ್ತಿಗೆ ಸಂಬಂಧಿದಂತೆ ಧನಗೂರು, ದೇವರು–ದೇವತೆ ಹೆಸರಿಗೆ ಸಂಬಂಧಿಸಿದಂತೆ ರಾವಣಿ, ಬಳಪದ ಕಲ್ಲಿಗೆ ಸಂಬಂಧಿಸಿದ ಮಾಹಿತಿ ಬ್ಲಪ್, ಮುತ್ತೆತ್ತಿ–ಮುತ್ತತ್ತಿ, ನೇಗಿಲಿಗೆ ಸಂಬಂಧಿಸಿದಂತೆ ಸ್ಥಳದ ಮಾಹಿತಿ ತಿಳಿಸಿದ್ದಾರೆ.

"ಇತಿಹಾಸವನ್ನು ಅರಿಯದವ ಇತಿಹಾಸವನ್ನು ಸೃಷ್ಟಿಸಲಾರ "ಎಂಬ ಮಾತು ನಾಡಿನ ಸತ್ಪ್ರಜೆಯ ಮೇಲೆ ಅವಲಂಭಿತವಾಗಿರುತ್ತವೆ. ಪ್ರತಿಯೊಂದು ಸ್ಥಳನಾಮವು

ಆಯಾ ಕಾಲದ ಸ್ಥಳದ ಭೂತಕಾಲದ ಪಳೆಯುಳಿಕೆ ಇದ್ದಂತೆ ಇಂತಹ ಸ್ಥಳನಾಮಗಳನ್ನು ತೈಲೂರರು ತಮ್ಮ ಜಿಲ್ಲೆಯಲ್ಲಿ ತಾವೇ ಕ್ಷೇತಕಾರ್ಯ ಕೈಗೊಂಡು ಬಹು ಆಸಕ್ತಿಯಿಂದ ಅಲ್ಲಿನ ಬದುಕಿನ ಮೂಲ ಸೆಲೆ-ನೆಲೆಗಳನ್ನು ಪ್ರಾಕ್ ಚಾರಿತ್ರಿಕ ಹಾಗೂ ಚಾರಿತ್ರಿಕ ಸಾಕ್ಷ್ಯಗಳನ್ನು ಪ್ರಕೃತಿ ವೈಚಿತ್ರ್ಯ, ನಿರ್ದಿಷ್ಟ ಗುರುತು ಮುಂತಾದವುಗಳನ್ನು ನಿರೂಪಿಸುವ ಊರಿನ ಸ್ಥಳನಾಮ ಮತ್ತು ಮಹತ್ವವನ್ನು ತಮ್ಮ ಕೃತಿಗಳಲ್ಲಿ ದಾಖಲೆಗೊಳಿಸಿರುವುದು ಒಂದು ಸೃಜನಾತ್ಮಕ ಹಾಗೂ ಶ್ರಮದಾಯಕವಾದ ಕಾರ್ಯ ಎಂದು ಅಭಿಪ್ರಾಯ ಪಡಬಹುದಾಗಿದೆ.

ಅಡಿ ಟಿಪ್ಪಣಿ :-

೧. ತೈಲೂರು ವೆಂಕಟಕೃಷ್ಣ, ಮಂಡ್ಯ ಜಿಲ್ಲೆಯ ಸ್ಥಳ ನಾಮಗಳ ಅವಲೋಕನ, (ಮುನ್ನುಡಿಯಿಂದ), ಭಾನುಪ್ರಕಾಶನ ೨೦೦೪ ಪುಟಸಂಖ್ಯೆ iv

೨. ಅದೇ.. ಪು ...೧

೩. ಅದೇ.. ಪು ...೪

೪. ಅದೇ.. ಪು ...೬

೫. ಅದೇ.. ಪು ...೯

ಇ) ಬಿಡಿ ಬರಹಗಳು:- ಲೇಖನಗಳು

ಗ್ರಾಮೀಣ ಪರಿಸರದ ದಟ್ಟ ಪ್ರಭಾವದಲ್ಲಿ ಬೆಳೆದು ಬಂದ ಲೇಖಕರು ಅವರ ಸುತ್ತಮುತ್ತಲಿನ ಪರಿಸರವನ್ನು, ಅಲ್ಲಿಯ ಜನಪದಕಲೆಗಳನ್ನು ಜನರ ಜೀವನವನ್ನು ಚೆನ್ನಾಗಿ ಬಲ್ಲವರು. ಗ್ರಾಮೀಣ ಜನರ ಬದುಕು ಹಸನಾಗಬೇಕು, ಯುವಕರಲ್ಲಿ ಗಾಂಧಿತತ್ವ ಚಿಂತನೆಗಳು ಪ್ರೇರಿತವಾಗಬೇಕು. 'ಹಳ್ಳಿಯ ಉದ್ದಾರವೇ ರಾಷ್ಟ್ರದ ಉದ್ಧಾರ' ಎಂಬ ನಿಲುವನ್ನು ಹೊಂದಿ ಗ್ರಾಮೀಣ ಪ್ರದೇಶದ ಅದರಲ್ಲೂ ಮಂಡ್ಯ ಜಿಲ್ಲೆಯ ಜನಪದ ಕಲೆಗಳನ್ನು ಕುರಿತು, ಸ್ವಾತಂತ್ರ ಸಂಗ್ರಾಮಕ್ಕೆ ಮಂಡ್ಯ ಜಿಲ್ಲೆಯ ಕೊಡುಗೆ, ಜೊತೆಗೆ ಸ್ವಾತಂತ್ರ ಹೋರಾಟಗಾರರ ಇಂದಿನ ದಯನೀಯ ಪರಿಸ್ಥಿತಿಯನ್ನು ಕುರಿತಂತೆ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಲೇಖನಗಳು ಅಂದಿನ ವಾರ, ಪಾಕ್ಷಿಕ ಮತ್ತು ದೈನಿಕ ಪತ್ರಿಕೆಗಳಲ್ಲಿ ಸುಧಾ, ತರಂಗ ಕರ್ಮವೀರ ಮತ್ತು ಪ್ರಜಾವಾಣಿಯ ಕರ್ನಾಟಕ ದರ್ಶನ ಪತ್ರಿಕೆಗಳಲ್ಲಿ ಕಂಡು ಬಂದಿವೆ.

ಮಂಡ್ಯ ಜಿಲ್ಲೆಯಲ್ಲಿನ ಜನಪದ ಕಲೆಗಳನ್ನು ಕರ್ನಾಟಕದ ಜನತೆಗೆ ಪರಿಚಯ ಮಾಡಿಕೊಡುವುದು ಈ ಲೇಖನದ ಉದ್ದೇಶವಾಗಿದೆ. ಲಭ್ಯವಾಗಿರುವ ಪ್ರಕಾರ.

೧)ನಕ್ಕು ನಗಿಸುವ ಗಾರುಡಿ ಗೊಂಬೆಗಳು ೨)ಮರಗಾಲು ಹಾಕಿ ಹೊತ್ತು ಕುಣಿಯುವ ರಾಜ-ರಾಣಿಯರು ೩) ಭಾಗವಂತಿಕೆ ಮೇಳ ೪) ಬೆಂಕಿ ಭರಾಟೆಗಳು ೫)ಸೂತ್ರದ ಬೊಂಬೆಯಾಟ ೬)ಪೂಜಾಕುಣಿತ ಮತ್ತು ಕಲಾವಿದರು ೭)ಅಂಧರ ಮಕ್ಕಳ ಶಿಕ್ಷಣದ ಸ್ಥಿತಿ ೮) ಶಿಂಷಾನದಿ ಅಂದು-ಇಂದು ಒಂದು ಅವಲೋಕನ ೯)ಶಿವಪುರದ ಧ್ವಜಸತ್ಯಾಗ್ರಹ : ಒಂದು ನೆನಪು, ೧೦)ವಿನಾಶದತ್ತ ಹೊಯ್ಸಳ ಶಿಲ್ಪ ವೈಭವ ೧೧)ಕಾಯಕದಲ್ಲಿ ಸಾರ್ಥಕತೆ ಕಂಡ ಕರ್ಮಯೋಗಿ ೧೨) ಭ್ರಮಾಲೋಕದ ಭರಚುಕ್ಕಿ, ೧೩)ಅಳಿಯುತ್ತಿರುವ ಶ್ರೀರಂಗಪಟ್ಟಣದ ಐತಿಹಾಸಿಕ ಸ್ಮಾರಕಗಳು (ಪ್ರಜಾವಾಣಿ ವಾರ್ತೆ-೧೯೯೫) ಹೀಗೆ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಇವರ ಲೇಖನಗಳು ಕೇವಲ ಲೇಖನಗಳಾಗಿಯೇ ಉಳಿದಿಲ್ಲ, ಸರ್ಕಾರದ ಗಮನ ಸೆಳೆದು ಅವುಗಳಿಗೆ ಕಾಯಕಲ್ಪ ನೀಡಿದ್ದಾರೆ. ಹಲವಾರು ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ. ಅಧ್ಯಯನ ದೃಷ್ಟಿಯಿಂದ ಇವರ ಕೆಲವು ಲೇಖನಗಳನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

೧. ನಕ್ಕು ನಗಿಸುವ ಗಾರುಡಿ ಗೊಂಬೆಗಳು:-

ಪ್ರಸ್ತುತ ಲೇಖನದಲ್ಲಿ ಲೇಖಕರು 'ಗಾರುಡಿ ಗೊಂಬೆಗಳು', ಈ ಜನಪದ ಕಲೆಯ ವೈಶಿಷ್ಟ್ಯವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಮಂಡ್ಯ ಜಿಲ್ಲೆಯ ಅಪರೂಪದ ಕಲೆಗಳಲ್ಲಿ ಇದೂ ಒಂದು. ಶುದ್ಧ ಮನರಂಜನೆಯ ಗ್ರಾಮೀಣಕಲೆ, ಅವುಗಳ ವೇಷ ಭೂಷಣ, ವೈಯ್ಯಾರ ನಮ್ಮ ಜನಪದರ ರಸಿಕತೆಯ ಬದುಕಿನಕನ್ನಡಿ, ಅಳುವ ಕಂದನನ್ನು

ಸುಮ್ಮನಾಗಿಸುವ ಸಮ್ಮೋಹನ ಕಲೆ. ನಗುಮುಖದ ಮುಖವಾಡವನ್ನು ಹೊತ್ತು ಕುಣಿಯುವ ಈ ಕಲೆ ಒಳಗಿನ ನೋವನ್ನು ಮರೆಸಬಲ್ಲದು, ಎದುರಿಸಲೂ ಬಲ್ಲದೂ ಈ ಕಲೆ ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕು ಮುದಗಂದೂರು ಮತ್ತು ಪಾಂಡವಪುರ ತಾಲ್ಲೂಕಿನ ಲಕ್ಷ್ಮಿ ಸಾಗರದಲ್ಲಿ ಕಂಡು ಬರುತ್ತದೆ. ಆ ಊರಿನ ಕಷ್ಣೇಗೌಡ ಕುಟುಂಬದವರು ಈ ಕಲೆಯಲ್ಲಿ ನಿರತರಾಗಿದ್ದು, ಇವರ ಗಾರುಡಿ ಗೊಂಬೆಕುಣಿತ ಜಿಲ್ಲೆಯಾದ್ಯಂತ ಪ್ರಸಿದ್ಧಿಯಾಗಿದೆ. ಇದು ಹಾಸ್ಯಭರಿತ ಲೇಖನವಾಗಿದ್ದು, ನಗುಮುಖದ ಗಂಡು ಮತ್ತು ಹೆಣ್ಣು ಮುಖವಾಡ ಹೊತ್ತು ಹಾಸ್ಯ ರಂಜನೆಯಲ್ಲಿ ಕುಣಿಯುವ ನಗಿಸುವ ಕಲೆ, ವಿಶೇಷವಾಗಿ ಈ ಜನಪದ ಕಲೆಯನ್ನು ಹಳ್ಳಿಗಳ ಹಬ್ಬ, ಹರಿದಿನ ಜಾತ್ರೆಗಳಲ್ಲಿ ಮತ್ತು ಕಣದ ಕೆಲಸ ನಡೆಯುವಾಗ ಈ ಕಲೆ ಪ್ರದರ್ಶನವಾಗುತ್ತಿದ್ದು ಎಂಬುದನ್ನು ಲೇಖಕರು ತಿಳಿಸಿದ್ದಾರೆ.

೨. ಮರಗಾಲು ಹೊತ್ತು ಕುಣಿವ ರಾಜ–ರಾಣಿಯರು:–

ಈ ಲೇಖನದಲ್ಲಿ, ಈ ಕಲೆಯು ಕೃಷ್ಣ ರಾಜಪೇಟೆ ತಾಲ್ಲೂಕಿನ ಸಿಂಗನಹಳ್ಳಿಯ ಮರಗಾಲು ಕುಣಿತದವರ ಪ್ರದರ್ಶನ ಮತ್ತು ಅವರ ಜೀವನ ಶೈಲಿ ಮೈನವಿರೇಳಿಸುವಂತಿದೆ. ಕಾಲಿಗೆ ಮರಗಾಲು ಕಟ್ಟಿಕೊಂಡು ಕುಣಿಯುವ ಮತ್ತು ಕಲಾವಿದರು ರಾಜ–ರಾಣಿಯರ ವೇಷಧಾರಿಗಳಾಗಿ ಮರಗಾಲು ಹೆಜ್ಜೆ ಹಾಕುವ ಶೈಲಿಯು ರೋಮಾಂಚನವಾಗುವಂತೆ ಚಿತ್ರಿಸಿದ್ದಾರೆ. ಈ ಕಲೆಯು ಸಹಾ ಹಳ್ಳಿಗಳಲ್ಲಿ, ಹಬ್ಬಹರಿದಿನಗಳಲ್ಲಿ ಸಹಜವಾಗಿ ಪ್ರದರ್ಶಿತವಾಗುವ ಕಲೆಯಾಗಿದೆ ಎಂಬ ಅಂಶವನ್ನು ಲೇಖನದಲ್ಲಿ ವಿವರಿಸಿದ್ದಾರೆ.

೩. ಭಾಗವಂತಿಕೆ ಮೇಳ :–

ಲೇಖಕರು ಈ ಕಲೆಯ ಬಗ್ಗೆ ಪ್ರಸ್ತಾಪಿಸುತ್ತಾ, ಈ ಕಲೆಯು ನಾಗಮಂಗಲ ತಾಲ್ಲೂಕು, ಎಲೆಕೊಪ್ಪದ ಬಸವೇಗೌಡರ ತಂಡದ ಭಾಗವಂತಿಕೆ ಮೇಳವನ್ನು ಪರಿಚಯಿಸುತ್ತಾ, ಈ ಭಾಗವಂತಿಕೆ ತಂಡ ಪುರಾಣದ ಭಾಗವತದ ಸುಲಲಿತ ಕನ್ನಡ ಅನುವಾದದಿಂದ ಜನಸಾಮನ್ಯರಿಗೆ ಭಾಗವತದ ಮಹಿಮೆಯ ವಿಚಾರವನ್ನು ಹೇಳುವ ಕಲೆ. ಶ್ರೀಯುತರು ಈ ಕಲೆಯನ್ನು ತಮ್ಮ ಲೇಖನದಲ್ಲಿ ನವಿರಾಗಿ ಹೆಸರಿದ್ದಾರೆ.

೪. ಬೆಂಕಿಭರಾಟೆ :–

ಶ್ರೀಯುತರು ತಮ್ಮ ಲೇಖನದಲ್ಲಿ, ಈ ಕಲೆಯು ಮಂಡ್ಯ ಜಿಲ್ಲೆಯ ಪಾಂಡವಪುರ, ಮಳವಳ್ಳಿ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಕಂಡು ಬರುತ್ತದೆ ಎಂದು ತಿಳಿಸಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಗ್ರಾಮದ ಬೆಂಕಿ ಭರಾಟೆಯ ಮೂಗಣ್ಣ ಮತ್ತು ಚನ್ನೇಗೌಡರ ಚಮತ್ಕಾರದ ಕಲೆಯನ್ನು ವರ್ಣಿಸಿದ್ದಾರೆ. ಬೆಂಕಿ ಭರಾಟೆ ಕಲೆಯೊಂದಿಗೆ ಇದೇ ಕಲಾವಿದರು ನಡೆಸುವ ದೊಣ್ಣೆವರಸೆ, ಬಿಜಲಿ ವರಸೆ, ಕತ್ತಿವರಸೆಗಳನ್ನು ಸಹಾ ಲೇಖನದಲ್ಲಿ ವರ್ಣಿಸಿದ್ದಾರೆ. ಶ್ರೀಯುತರ ಲೇಖನದಲ್ಲಿ ಈ ಸಾಹಸದ ಜನಪದ ಕಲೆಗಳು ಹಿಂದಿನ ರಾಜ ಮಹಾರಾಜರ ಯುದ್ಧ ವ್ಯವಸ್ಥೆಯ ರೂಪಾಂತರ ಎಂದು ಹೇಳಿದ್ದಾರೆ. ಈ ಭಾಗ ಶ್ರೀರಂಗಪಟ್ಟಣದಲ್ಲಿ ಆಳಿದ ಮೈಸೂರು ಅರಸರ ಸೈನ್ಯದಲ್ಲಿ ಬಳಕೆಯಲ್ಲಿದ್ದ ಯುದ್ಧ ತಂತ್ರವೆಂದು ಬಿಂಬಿಸಿರುವುದು ಕಂಡು ಬಂದಿದೆ.

೫. ಸೂತ್ರದ ಬೊಂಬೆಯಾಟ:-

ಈ ಕಲೆಯು ಜನಪದ ರಂಗಭೂಮಿಯಲ್ಲಿ ಒಂದು ಚಮತ್ಕಾರಯುತವಾದ ಕಲೆ. ಅನೇಕ ಕಥಾ ಪ್ರಸಂಗಗಳೊಡನೆ ಮನರಂಜನೆಗಾಗಿ ಸೃಷ್ಟಿಗೊಂಡು ಬೆಳೆದು ಬಂದಿರುವ ಒಂದು ಪ್ರಾಚೀನಕಲೆ. ಜೀವಂತ ವೇಷಧಾರಿಗಳ ಬದಲಾಗಿ ವೇಷಕಟ್ಟಿದ ಬೊಂಬೆಗಳನ್ನು ಸೂತ್ರದ ಹಿಡಿತದಲ್ಲಿ ಆಡಿಸಿ ತೋರಿಸುವ ಸೂತ್ರಧಾರನ ಕೌಶಲ್ಯವೇ ಇಲ್ಲಿ ಪ್ರಧಾನವಾದುದು.

ನಾಗಮಂಗಲ ತಾಲ್ಲೂಕಿನ ನೆಲ್ಲಿಗೆರೆಯ ತಿಮ್ಮಪ್ಪಚಾರ್ಯರ ಸೂತ್ರದ ಬೆಂಬೊಯಾಟವನ್ನು ವರ್ಣಿಸಿದ್ದಾರೆ. ಈ ಸೂತ್ರದ ಬೊಂಬೆಯಲ್ಲಿ ರಾಮಾಯಣ, ಭಾರತ ಕಥೆಗಳಲ್ಲದೆ, ಕರಿ ಭಂಟನ ಕಾಳಗ ಎಂಬ ಜನಪದ ಕಥೆಯನ್ನು ಈ ಸೂತ್ರದ ಬೊಂಬೆಯಾಟದಲ್ಲಿ ತಿಮ್ಮಪ್ಪ ಚಾರ್ಯರು ತೋರ್ಪಡಿಸಿದ್ದಾರೆ ಎಂದು ಮತ್ತು ಸೂತ್ರದ ಬೊಂಬೆಗಳನ್ನು ತಯಾರಿಸುವ ಮರ, ಅದನ್ನು ಸಿದ್ಧತೆಗೊಳಿಸುವ ಬಗೆಯನ್ನು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ.

೬. ಪೂಜಾ ಕುಣಿತ ಮತ್ತು ಕಲಾವಿದರು :-

ಈ ಲೇಖನದಲ್ಲಿ ಲೇಖಕರು ಮಂಡ್ಯ ಜಿಲ್ಲೆಯ ಅನೇಕ ಜಾತ್ರೆ ಉತ್ಸವ ಹಬ್ಬಗಳಲ್ಲಿ ಪೂಜಾ ಕುಣಿತದ್ದೆ ಒಂದು ಮಹತ್ವವಾಗಿದೆ ಎಂದು ತಿಳಿಸಿದ್ದಾರೆ. ಪೂಜೆ ಎಂದರೆ ಒಂದು ಅಲಂಕೃತವಾದ ತಳಿ. ಬಿದಿರನ್ನು ಮತ್ತು ಅದರ ಹಚ್ಚೆಗಳನ್ನು ಚಚ್ಚೌಕ ರೂಪದಲ್ಲಿ ಜೋಡಿಸಿ ಮಾಡಿಕೊಳ್ಳಲಾಗುತ್ತದೆ. ಮಧ್ಯಭಾಗದಲ್ಲಿ ದೇವರ ಮುಖವಾಡವನ್ನು ಕಟ್ಟಿ ಎರಡೂ ಕಡೆಯೂ ತಳಿ ಉದ್ದಕ್ಕೆ ಬಣ್ಣದ ಸೀರೆಗಳನ್ನು ಇಳಿಬಿಟ್ಟು, ಆಭರಣ ಮತ್ತು ಹೂವಿನ ಹಾರಗಳಿಂದ ಅಲಂಕರಿಸುತ್ತಾರೆ. ಎಂಬ ಅಂಶವನ್ನು ತಿಳಿಸಿದ್ದಾರೆ. ಮತ್ತು ಪೂಜಾ ಕುಣಿತದಲ್ಲಿ ಅನೇಕ ಕಲಾವಿದರು ಅದ್ವಿತೀಯರಾಗಿದ್ದಾರೆ. ಮಳವಳ್ಳಿ ತಾಲ್ಲೂಕಿನ ತಳಗವಾದಿಯ ಚೀರ್ಕ್ಕಣಯ್ಯ, ಮದ್ದೂರು ತಾಲ್ಲೂಕಿನ ಕೊಕ್ಕರೆ ಬೆಳ್ಳೂರಿನ ಚನ್ನೇಶಗೌಡ,ಮದ್ದೂರಿನ ನಾರಾಯಣ ಮುಂತಾದವರ ಹೆಸರುಗಳನ್ನು ಉಲ್ಲೇಖಿಸಿದ್ದಾರೆ.

ಇವರು ಅಂತರಾಷ್ಟ್ರೀಯ ಮಟ್ಟಕ್ಕೂ ಅರ್ಹರು, ಬೊಂಬಾಯಿಯಲ್ಲಿ ನಡೆದ 'ಅಪಣಾ ಉತ್ಸವ್' ಕಾರ್ಯಕ್ರಮಕ್ಕೆ ಭಾಗವಹಿಸಲು ಈ ಕಲಾವಿದರ ಹೆಸರನ್ನು ಶಿಫಾರಸ್ಸು ಮಾಡಿ ಕಳುಹಿಸಿರುವುದನ್ನು ತಿಳಿಯಬಹುದಾಗಿದೆ.

೭. ಅಂಧ ಮಕ್ಕಳ ಸ್ಥಿತಿಗತಿ :-

ಇವುಗಳಲ್ಲದೆ ಆದಿಚುಂಚನಗಿರಿ ಟ್ರಸ್ಟ್ ವತಿಯಿಂದ ನಡೆಸುವ ರಮಣಶ್ರೀ ಅಂಧರ ಶಾಲೆಯ ಬಗ್ಗೆ ಕಿರು ಲೇಖನ ಬರೆದಿದ್ದಾರೆ. ರಾಮನಗರದ ಬಳಿ ತೆರೆದಿರುವ ಅಂಧರ ಶಾಲೆಗೆ ಭೇಟಿ ಕೊಟ್ಟು ಅ ಮಕ್ಕಳ ಜೊತೆ ಬೆರೆತು ಅವರ ಅನಿಸಿಕೆಗಳನ್ನು, ವಿದ್ಯಾಭ್ಯಾಸದ ಪ್ರಗತಿಯನ್ನು, ಈ ವ್ಯವಸ್ಥೆ ಮಾಡಿರುವ ಸಂಸ್ಥೆಯ ಬಗ್ಗೆ ಬೆಳಕು ಚೆಲ್ಲುವ ಅಂಶವನ್ನು ಲೇಖನದಲ್ಲಿ ಚಿತ್ರಿಸಿದ್ದಾರೆ.

೮. ಶಿಂಷಾನದಿ ಅಂದು ಇಂದು : ಒಂದು ಅವಲೋಕನ:-

ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಹಾದು ಹೋಗುವಾಗ ಮದ್ದೂರಿನ ಬಳಿ ಹರಿಯುವ ನದಿ, ಶಿಂಷಾನದಿ. ಈ ನದಿ ಮೂಲತಃ ಕುಣಿಗಲ್ ತಾಲ್ಲೂಕಿನಲ್ಲಿ ಜನ್ಮ ತಳೆದರೂ ಸಮೃದ್ಧವಾಗಿ ಹರಿಯುವುದು ಮದ್ದೂರು ತಾಲ್ಲೂಕಿನಲ್ಲಿ, ಹಿಂದೆ ಶಿಂಷಾ ನದಿ ಉಕ್ಕಿ ಹರಿಯುತ್ತಿತ್ತು. ಯಥೇಚ್ಛವಾದ ಮರಳು ಸಂಗ್ರಹವಾಗುತ್ತಿತ್ತು, ಬೇಸಿಗೆಕಾಲದಲ್ಲಿ ಮರಳಿನಲ್ಲಿ ಹೆಚ್ಚು ಹೆಚ್ಚು ಕಲ್ಲಂಗಡಿ, ಸೌತೆಕಾಯಿ ಬೆಳೆಯನ್ನು ಬೆಳೆಯುತ್ತಿದ್ದರು. ಅಲ್ಲಿಯ ಜನರು ಶಿಂಷಾ ನದಿದಡದಲ್ಲಿರುವ ಮರಳನ್ನು ಲೂಟಿ ಮಾಡುತ್ತಿರಲಿಲ್ಲ. ಶಿಂಷಾ ನದಿದಡದ ಹಳ್ಳಿಗಳಲ್ಲಿ ರಾಮನವಮಿ ಹಬ್ಬ ಆಚರಿಸಲು ಕಾರಣ ಇಲ್ಲಿಯ ಮುಸ್ಲಿಂ ಬಾಂಧವರು ರಸ್ತೆ, ಸಾರಿಗೆ ಸುಲಭವಲ್ಲದ ಕಾಲದಲ್ಲಿ ದೋಣಿ ಸಾಗಾಣಿಕೆ ಇತ್ತು, ವ್ಯಾಪಾರ ವಹಿವಾಟುಗಳು ನಡೆಯುತ್ತಿದ್ದವು. ನವಿಲೆಯ ಜನರು ಶಿಂಷಾ ತಟದಲ್ಲಿರುವ ವೈದ್ಯನಾಥಪುರಕ್ಕೆ ತೆಪ್ಪದಲ್ಲಿ ಬರುತ್ತಿದ್ದರು. ಹೀಗೆ ಸಮದ್ಧವಾಗಿ ಹರಿಯುತ್ತಿದ್ದ ಈ ನದಿಯಲ್ಲಿ ಇಂದಿನ ಜನರು ಹಣದ ಆಸೆಗಾಗಿ ಮರಳನ್ನು ಲೂಟಿ ಮಾಡಿ ನದಿತೀರದ ಪ್ರದೇಶಗಳಿಗೆ ಕೊರೆತ ಉಂಟಾಗುವಂತೆ ಮಾಡಿ ಜೊತೆಗೆ ವೈದ್ಯನಾಥಪುರದ ಸೇತುವೆ ಶಿಥಿಲವಾಗುವುದಕ್ಕೆ ಕಾರಣವಾಗಿದ್ದಾರೆ. ಆದ್ದರಿಂದ ಜಲಸಂಪತ್ತನ್ನು ನಾವು ಕಾಪಾಡಬೇಕು, ಪ್ರಾಕೃತಿಕ ಸಂಪತ್ತನ್ನು ಉಳಿಸಬೇಕೆಂಬ ಕರೆಯನ್ನು ನೀಡಿದ್ದಾರೆ.

೯. ಶಿವಪುರದ ಧ್ವಜ ಸತ್ಯಾಗ್ರಹ : ಒಂದು ನೆನಪು:-

ಈ ಲೇಖನದಲ್ಲಿ ಲೇಖಕರು ಅಂದು ಸ್ವಾತಂತ್ರ ಸಂಗ್ರಾಮದ ಹೋರಾಟದ ಸಂದರ್ಭದಲ್ಲಿ, ಈ ಸ್ಥಳದಲ್ಲಿ ಸಭೆ ನಡೆಸಿ ರಾಷ್ಟ್ರಧ್ವಜ ಹಾರಿಸಿದ ಚಿತ್ರಣವನ್ನು ಚಿತ್ರಿಸಿದ್ದಾರೆ. ಬೆಂಗಳೂರು-ಮೈಸೂರು ರಸ್ತೆಯಲ್ಲಿ ಮದ್ದೂರು ಬಳಿ ಇರುವ ಶಿವಪುರ ಗ್ರಾಮದಲ್ಲಿ ೧೯೩೮ರ ರಲ್ಲಿ 'ಧ್ವಜ ಸತ್ಯಾಗ್ರಹ' ನೆರವೇರಿತು. ಅಂದು ನಡೆದ ಬೃಹತ್ ಸಮಾವೇಶದಲ್ಲಿ ಅಂದಿನ ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಒತ್ತಾಯಿಸುವ ರಣಕಹಳೆ ಮೊಳಗಿತು. ಅಷ್ಟೇ ಅಲ್ಲ ಸ್ವಾತಂತ್ರ್ಯಕ್ಕಾಗಿ ನಿರಂತರವಾಗಿ ಹೋರಾಡಿದ ಅನೇಕ ನಿಸ್ವಾರ್ಥಿ ನಾಯಕರು ರೂಪುಗೊಂಡಿದ್ದು ಇಲ್ಲಿಯೇ, ತ್ರಿವರ್ಣ ಧ್ವಜದ ಸ್ಫೂರ್ತಿಯಡಿಯಲ್ಲಿ ಈ ನಾಯಕರು ನಡೆಸಿದ ಹೋರಾಟದಿಂದಲೇ ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯಾಯಿತು. ಈ ನೆನಪಿನಲ್ಲಿಯೇ ಮಂಡ್ಯ ಜಿಲ್ಲೆ ನೀಡಿದ ಕೊಡುಗೆ, ಅಲ್ಲಿನ ಹೋರಾಟಗಾರರಾದ ಎಚ್.ಕೆ. ವೀರಣ್ಣಗೌಡ, ಜೋಗಿಗೌಡ, ಇವರನ್ನು ಹೆಸರಿಸಿ, ಅವರ ನಿಸ್ವಾರ್ಥ ಸೇವೆ, ಇದರ ಕಟ್ಟಡ ವಿನ್ಯಾಸ, ಅದರ ಸ್ಥಾಪನೆ, ಕೆಂಗಲ್ ಹನುಮಂತಯ್ಯರಿಂದ ಉದ್ಘಾಟನೆ ಮತ್ತು ಅದರ ನಿರ್ವಹಣೆ, ಚಾರಿತ್ರಿಕ ಘಟನೆಯನ್ನು ಧ್ವನಿಸುವ ಮತ್ತು ಬೆಳಕಿನ ಸಂಯೋಜನೆ ವ್ಯವಸ್ಥೆಯೊಂದಿಗೆ ನಿರೂಪಿಸಬಹುದಾದಷ್ಟು ಕಥಾವಸ್ತು, ಅಲ್ಲಿಯ ಸ್ಥಾಪನೆಯ ಪ್ರತೀಕವಾಗಿ ಪಾನ ನಿರೋಧ, ಚರಕ, ಗ್ರಾಮ ಸುಧಾರಣೆ, ಗಾಂಧೀಜಿಯವರ ಆಶೋತ್ತರಗಳು ಹೀಗೆ ಹಲವು ಚಟುವಟಿಕೆಯ ತಾಣವಾಗಿದ್ದು, ಪ್ರವಾಸಿಗರ, ವಿದ್ಯಾರ್ಥಿಗಳ ಅರಿವನ್ನು ಹೆಚ್ಚಿಸಲು ಈ ಲೇಖನ ಉತ್ತಮವಾಗಿದೆ ಎಂದು ಅಭಿಪ್ರಾಯಪಡಬಹುದು.

೧೦. ವಿನಾಶದತ್ತ ಹೊಯ್ಸಳ ಶಿಲ್ಪ ವೈಭವ:-

'ಶಿಲೆಯಲ್ಲವೀ ಗುಡಿಯು ಕಲೆಯ ಬಲೆಯು' ಎಂಬ ಕುವೆಂಪುವಾಣಿಗೆ ಹೊಯ್ಸಳ ಕಾಲದ ದೇವಾಲಯಗಳು ಹೊರತಾಗಿಲ್ಲ, ಈ ಲೇಖನದಲ್ಲಿ ಲೇಖಕರು ಜಿಲ್ಲೆಯ ಹೊಸ ಬೂದನೂರು ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಹಾಗೂ ಸಾಂಸ್ಕೃತಿಕವಾಗಿ ಹೊಯ್ಸಳರ ಕಾಲದಲ್ಲಿ ವಿಜಂಭಿಸಿದ ಅನಂತಪದ್ಮನಾಭಸ್ವಾಮಿ ಮತ್ತು ಕಾಶಿ ವಿಶ್ವನಾಥ ದೇವಾಲಯಗಳು ಇಂದು ಅವನತಿಯತ್ತ ಸಾಗುತ್ತಿವೆ. ಹಿಂದೆ ಈ ಎರಡು ದೇವಾಲಯಗಳು ಸಾಂಸ್ಕೃತಿಕ ಪರಂಪರೆಗೆ ಹೆಗ್ಗುರುತಾದಂತಹವು ಮತ್ತು ಅಂದಿನ ವೈಷ್ಣವ ಮತ್ತು ಶೈವ ಧರ್ಮಸಾಮರಸ್ಯದ ಕೊಡುಗೆಯಾಗಿದ್ದವು ಎಂಬ ಅಂಶವನ್ನು ತಿಳಿಸುತ್ತಾ ಇಂದು ಈ ದೇವಾಲಯಗಳ ಸ್ಥಿತಿ ದುಸ್ತರವಾಗಿದೆ. ಈ ದೇವಾಲಯದಲ್ಲಿ ಅವ್ಯವಸ್ಥೆ ಎದ್ದು ಕಾಣುತ್ತಿದೆ, ಇದಕ್ಕೆ ಪುರಾತತ್ವ ಇಲಾಖೆ ಮತ್ತು ಸರ್ಕಾರ ಜೀರ್ಣೋದ್ಧಾರ ಕಾರ್ಯಕೈಗೊಳ್ಳಬೇಕೆಂದು ಲೇಖನದಲ್ಲಿ ಬಿಂಬಿಸಿದ್ದಾರೆ. ಈ ಲೇಖನದ ಪ್ರಸ್ತಾಪದಿಂದಾಗಿ ಈ ಎರಡೂ ದೇವಾಲಯಗಳು ಇಂದು ಜೀರ್ಣೋದ್ಧಾರಗೊಂಡಿವೆ. ಇವರ ಲೇಖನ ಲೇಖನವಾಗಿಯೇ ಉಳಿಯದೆ

ಉಪಕಾರಿಯಾಗುತ್ತದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಇದಕ್ಕೆ ನಿದರ್ಶನ ಅಂದಿನ ದೈನಿಕ ಪತ್ರಿಕೆ ಪ್ರಜಾವಾಣಿಯ ಕರ್ನಾಟಕ ದರ್ಶನದಲ್ಲಿ 'ನನಸಾದ ಮಿರ್ಜಾರ ಕನಸು' ಎಂಬ ಶೀರ್ಷಿಕೆಯ ಲೇಖನ ಪ್ರಕಟವಾಗಿರುವುದು ವಾಸ್ತವ ಸಂಗತಿಯಾಗಿದೆ.

೧೧. ಕಾಯಕದಲ್ಲಿ ಸಾರ್ಥಕತೆ ಕಂಡ ಕರ್ಮಯೋಗಿ:-

ಹಿಂದೊಮ್ಮೆ ಸೈನ್ಯದಲ್ಲಿದ್ದು ಹೋರಾಡಿ ಈಗ ತೀರಾ ಸಂಕಷ್ಟ ಸ್ಥಿತಿಯನ್ನೆದುರಿಸುತ್ತಿರುವ ಒಬ್ಬ ಸ್ವಾತಂತ್ರ ಹೋರಾಟಗಾರನ ದುಸ್ಥಿತಿಯ ಕಾಯಕ ನಿಷ್ಠೆಯನ್ನು ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಪ್ರಪಂಚದ ಎರಡನೇ ಮಹಾಯುದ್ಧದಲ್ಲಿ ಪಾಲ್ಗೊಂಡು, ನಿವೃತ್ತಿ ನಂತರ ವೈರ್‌ಮನ್, ಫೀಲ್ಡ್‌ಮಾನ್ ಕೆಲಸದಲ್ಲಿ ತೊಡಗಿ ಕಡೆಗೆ ಮಂಡ್ಯ ಸಭೆಯಲ್ಲಿ ಪೌರಕಾರ್ಮಿಕರ ವೃತ್ತಿಯಲ್ಲಿ ಸೇವೆ ಸಲ್ಲಿಸಿದರು. ಆದರೂ ಇವರಿಗೆ ಸರ್ಕಾರದಿಂದ ನೆರವು ಲಭಿಸಲಿಲ್ಲ, 'ಕಾಯಕವೇ ಕೈಲಾಸ' ಎಂಬ ವಚನದಂತೆ ಕಾಯಕ ಯಾವುದಾದರೇನು ಉದ್ದೇಶ ಒಳ್ಳೆಯದಾಗಿರಬೇಕು, ಪ್ರಾಮಾಣಿಕವಾಗಿರಬೇಕು. ಕೆಲಸದಲ್ಲಿ ಮೇಲುಕೀಳು ಎಂಬ ಭೇದಭಾವ ಸಲ್ಲದು, ಪಾಲಿಗೆ ಬಂದದ್ದು ಪಂಚಾಮೃತ ಎಂದು ತಿಳಿಯಬೇಕು, ಅದರಿಂದ ತನ್ನ ಮತ್ತು ದೇಶದ ಅಭಿವೃದ್ಧಿ ಅದೇ ಆದೀತು ಎನ್ನುವ ಪೊನ್ನಸ್ವಾಮಿ ಹೊಟ್ಟೆಪಾಡಿಗಾಗಿ ಚಮ್ಮಾರಿಕೆಯಲ್ಲಿ ತೊಡಗಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಈ ಪೊನ್ನಸ್ವಾಮಿಗೆ ತಪ್ಪಿಹೋಗಿರುವ ಸವಲತ್ತುಗಳನ್ನು ಸರ್ಕಾರ ಮಂಜೂರಾತಿ ಮಾಡಿಕೊಡಬೇಕೆಂಬ ನಿಲುವನ್ನು ತಿಳಿಸಿ ಈ ಸ್ವಾತಂತ್ರ್ಯ ಯೋಧನ ಬದುಕು ಹಸನಾಗಲೆಂದು ಹಾರೈಸಿದ್ದಾರೆ.

೧೨. ಭ್ರಮಾಲೋಕದ ಭರಚುಕ್ಕಿ :-

ಈ ಲೇಖನದಲ್ಲಿ ಲೇಖಕರು ಏಷ್ಯಾಖಂಡದಲ್ಲಿ ಪ್ರಥಮವಾಗಿ ವಿದ್ಯುತ್‌ಚ್ಛಕ್ತಿ ಉತ್ಪಾದನಾ ಕಾರ್ಯ ಪ್ರಾರಂಭಿಸಿದ್ದು, ಶಿಂಷಾ ಸ್ಥಳದ ಪರಿಚಯ ಮಾಡಿಕೊಡುತ್ತಾ ಅಲ್ಲಿಯ ಜಲಸಂಪತ್ತನ್ನು ಮನುಷ್ಯ ಹೇಗೆ ಬಳಸಿಕೊಳ್ಳಬೇಕೆಂಬ ಅಂಶವನ್ನು ಚಿತ್ರಿಸಿದ್ದಾರೆ. "ಅಂಧಂ ಬಲಂ ಜಲಂ ಚಾಹುಃ ಪ್ರಣೀತವ್ಯಂ ವಿಚಕ್ಷಣೈಃ". ಜಲಶಕ್ತಿಗೆ ಕಣ್ಣಿಲ್ಲ ಅದನ್ನು ವಿಚಕ್ಷಣೆಯಿಂದ ಬಳಸಿಕೊಂಡವನು ಜಾಣ ಎಂಬ ಉಕ್ತಿಯಂತೆ, ಪ್ರಪಂಚದಲ್ಲಿ ಜಲಶಕ್ತಿಯನ್ನು ವಿಚಕ್ಷಣೆಯಿಂದ ಬಳಸಿಕೊಂಡ ದೇಶಗಳು ಸಂಪದ್ಭರಿತವಾಗಿದೆ. ಭಾರತದಲ್ಲಿ ತಕ್ಕ ಮಟ್ಟಿಗೆ ಈ ಸಾಧನೆ ಆಗಿದ್ದರೂ ಇನ್ನೂ ಆಗಬೇಕಾಗಿದೆ ಎಂಬ ಅಂಶವನ್ನು ತಿಳಿಸಿದ್ದಾರೆ. ಜೋಗ್ ಜಲಪಾತವನ್ನು ನೋಡಿದ ವಿಶ್ವೇಶ್ವರಯ್ಯನವರು ವ್ಯರ್ಥವಾಗುತ್ತಿದ್ದ ಜಲಶಕ್ತಿಯನ್ನು ವಿಚಕ್ಷಣೆಯಿಂದ ಬಳಸಿಕೊಳ್ಳುವಂತಾಯಿತು. ೧೯೦೦ ರಲ್ಲಿ ಶಿವನ ಸಮುದ್ರದ ಬಳಿಯ ಬಳಪ ಅಥವಾ ಬ್ಲಫ್‌ನಲ್ಲಿ ಜಲವಿದ್ಯುದಾಗರದ ಕೆಲಸ

ಪ್ರಾರಂಭವಾದುದನ್ನು ತಿಳಿಸುತ್ತಾ ಜಲಸಂಪತ್ತನ್ನು ಉಳಿಸಿ, ಉತ್ತಮ ಸ್ಥಿತಿಯಲ್ಲಿ ಬಳಸಿಕೊಳ್ಳಬೇಕೆಂಬ ನಿಲುವು ಇವರ ಲೇಖನದಲ್ಲಿ ವ್ಯಕ್ತವಾಗಿದೆ.

೧೩. ಅಳಿಯುತ್ತಿರುವ ಶ್ರೀರಂಗಪಟ್ಟಣದ ಸ್ಮಾರಕಗಳು:-

ಈ ಲೇಖನದಲ್ಲಿ ಮೈಸೂರಿನ ಐತಿಹಾಸಿಕ ರಾಜಧಾನಿ, ಐತಿಹಾಸಿಕ ಕೇಂದ್ರವಾದ ಶ್ರೀರಂಗಪಟ್ಟದಲ್ಲಿನ ಸ್ವತ್ತುಗಳ ರಕ್ಷಣೆಯನ್ನು ಕುರಿತು ಕಾಳಜಿ ವ್ಯಕ್ತಪಡಿಸಿದ್ದಾರೆ. ಒಂದು ಕಾಲದಲ್ಲಿ ದಕ್ಷಿಣ ಭಾರತದ ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿ ಗಂಗರಸದಿಂದ ಮೊದಲ್ಗೊಂಡು ಹೊಯ್ಸಳರ ಮತ್ತು ವಿಜಯನಗರದ ಅರಸರಿಂದ ಅಭಿವದ್ಧಿಗೊಂಡು, ಮೈಸೂರು ಒಡೆಯರ ಕಾಲದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಭೂಮಿಕೆಯಾಗಿ, ಹೈದರ್ ಮತ್ತು ಟಿಪ್ಪು ಅವರ ಶೌರ್ಯದಿಂದಾಗಿ ಹೆಸರುವಾಸಿಯಾಗಿದ್ದ ಶ್ರೀರಂಗಪಟ್ಟಣದ ಐತಿಹಾಸಿಕ ಸ್ಮಾರಕಗಳು ಇಂದು ಹಾಳಾಗುತ್ತಿವೆ. ಮತ್ತು ವಿಕೃತಕೊಂಡಿವೆ. ದರಿಯಾದೌಲತ್, ಗುಂಬಜ್, ಡಂಜನ್, ರಾಕೆಟ್ ಕೋರ್ಟ್, ಕಬ್ಬನ್ ದಿಬ್ಬ, ಬ್ರಿಟಿಷ್ ಯೋಧರ ಸ್ಮಾರಕ ಸ್ಥಂಭಗಳು ಇಂದು ಹಾಳಾಗಿವೆ. ಈ ಬಗ್ಗೆ ಸರ್ಕಾರ, ಪುರಾತತ್ವ ಇಲಾಖೆ, ಕಾರ್ಯಕೈಗೊಳ್ಳಬೇಕು, ಜೊತೆಗೆ ಹೊಸಕಟ್ಟಡಗಳ ನಿರ್ಮಾಣದಲ್ಲಿ ಹಳೆಯ ಶೈಲಿ ರೂಪಿತವಾಗಬೇಕೆಂಬ ಅಶಯವನ್ನು ಈ ಲೇಖನದಲ್ಲಿ ಚಿತ್ರಿಸಿದ್ದಾರೆ.

೧೪. ವೈರಮುಡಿ ಉತ್ಸವ ಭಾವೈಕ್ಯತೆಯ ಸಂಕೇತ :-

ಈ ಲೇಖನದಲ್ಲಿ ಲೇಖಕರು ಪೌರಾಣಿಕ ಹಾಗೂ ಐತಿಹಾಸಿಕವಾಗಿ ಪ್ರಸಿದ್ಧವಾದ ಮೇಲುಕೋಟೆ ಸ್ಥಳದ ಬಗ್ಗೆ ಹೇಳುತ್ತಾ, ಅದು ಆಧ್ಯಾತ್ಮಿಕ, ಸಾಂಸ್ಕೃತಿಕ ತವರೂರು, ವಾಸ್ತುಶಿಲ್ಪ, ಮೂರ್ತಿಶಿಲ್ಪ, ಕೆರೆಕಾರಂಜಿ, ಗುಡಿಗೋಪುರ, ಕಲ್ಯಾಣಿಗಳ ಆಗರ, ಎತ್ತರ ಸ್ಥಳದಲ್ಲಿರುವ ಚೆಲುವನಾರಾಯಣಸ್ವಾಮಿ ಮತ್ತು ಯೋಗನರಸಿಂಹ ಸ್ವಾಮಿ ದೇವಾಲಯದ ಶಿಖರ ಬೆಟ್ಟಕ್ಕೆ ಕಿರೀಟ ಪ್ರಾಯವಾಗಿದೆ. ಇಲ್ಲಿ ಜರುಗುವ ಅನೇಕ ಉತ್ಸವಗಳಲ್ಲಿ ವೈರಮುಡಿ ಉತ್ಸವವು ಬಹುಪ್ರಾಚೀನವಾದುದು. ಈ ಕಿರೀಟ ಧಾರಣೆಗೊಳ್ಳುವ ಉತ್ಸವ ಮೂರ್ತಿ ರಾಮಪ್ರಿಯ, ಆದರ್ಶಪುರುಷನೆನಿಸಿದ ಶ್ರೀರಾಮನ ಪಟ್ಟಾಭಿಷೇಕ ಮತ್ತು ವೈರಮುಡಿ ಉತ್ಸವಕ್ಕೆ ಸಂಬಂಧಕಲ್ಪಿಸಲಾಗಿದೆ. ರಾತ್ರಿ ವೇಳೆಯಲ್ಲಿ ಜರುಗುವ ಈ ಉತ್ಸವ ಬಹಳ ವಿನೋದವಾಗಿರುತ್ತದೆ. ಜಾತಿ, ಮತ, ಪಂಥ ಎಂಬ ಭೇದ ಭಾವನೆಯಿಲ್ಲದೆ ರಾಷ್ಟ್ರೀಯ ಭಾವೈಕ್ಯತೆ ದೃಷ್ಟಿಯಿಂದಲೂ ಬಹಳ ಪರಿಣಾಕಾರಿಯಾಗಿದೆ ಎಂದು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

೧೫. ಮಳೆ, ಬೆಳೆ–ಹಬ್ಬ:–

ಗ್ರಾಮೀಣ ಪ್ರದೇಶದ ವಾತಾವರಣದಲ್ಲಿ ಬೆಳೆದ ತೈಲೂರು ವೆಂಕಟಕಷ್ಣ ರವರು ಸಾಂಸ್ಕೃತಿಕ ಚಟುವಟಿಕೆಗಳ ಸಂಘಟಕರಾಗಿ ಮತ್ತು ಲೇಖಕರಾಗಿ ಮಂಡ್ಯ ಪರಿಸರದಲ್ಲಿ ಹೆಚ್ಚು ಪರಿಚಿತರಾದವರು. ಜನಪದ ಕಲೆ ಮತ್ತು ಕಲಾತಂಡಗಳ ಪ್ರೋತ್ಸಾಹಕ್ಕೆ ಇವರದು ಎತ್ತಿದ ಕೈ, ಅಂತೆಯೇ ಪ್ರಕೃತಿಯ ಸಂರಕ್ಷಣೆಯ ಕಡೆಗೆ ಹೆಚ್ಚಿನ ಕಾಳಜಿ, ಪ್ರಕೃತಿಯಲ್ಲಿ ಜರುಗುವ ನೈಸರ್ಗಿಕ ಮಳೆ ಅದರಿಂದ ರೈತ ಬೆಳೆಯುವ ಬೆಳೆ, ಬೆಳೆಯಿಂದ ಬಾಳು ಸಮೃದ್ಧಿ ಹೊಂದಿ ಹಬ್ಬ ಹರಿದಿನಗಳನ್ನು ರೈತಾಪಿ ವರ್ಗ ಹೇಗೆ ಆಚರಿಸುತ್ತವೆ ಎಂಬ ಅಂಶವನ್ನು ಲೇಖಕರು ಈ ಲೇಖನದಲ್ಲಿ ವಿವರಿಸಿದ್ದಾರೆ. ಅದರ ಹಿನ್ನೆಲೆಯಲ್ಲಿ ಈ ಲೇಖನವನ್ನು ಇಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ.

ಒಂದು ವರ್ಷಕ್ಕೆ ಇಪ್ಪತ್ತೇಳು ಮಳೆಯೆಂದು ಪಂಚಾಗ ಹೇಳಿದಂತೆ ನಮ್ಮ ಮಣ್ಣಿನ ಮಕ್ಕಳೂ ಅದನ್ನೇ ಹೇಳುತ್ತಾರೆ. ಪ್ರಕೃತಿಯ ಒಡನಾಡಿಯಾಗಿಯೇ ಬೆಳೆದು ಬಂದ ನಮ್ಮ ಜನಪದರು ಯಾವ ಯಾವ ಮಳೆ ಹೇಗೇಗೆಂದು ಬಹು ನವಿರಾಗಿ ಹಾಗೂ ಅನುಭವಾತ್ಮಕವಾಗಿ ಹೇಳುತ್ತಾರೆ.ಹದವಾದ ಮಳೆ, ಹಿತವಾದ ಬೆಳೆಯಾದರೆ ಅವರಿಗೂ ಸಂತೃಪ್ತಿ, ನಾಡಿಗೂ ಸಂತೃಪ್ತಿ.

ಇಲ್ಲಿ ಲೇಖಕರು ಪ್ರಕೃತಿಯ ಒಡನಾಡಿಯಲ್ಲಿ ಕಾಯಕ ಹಾಗೂ ಅನುಭವವನ್ನು ಪಡೆದುಕೊಂಡ ಜನಪದರ ಕೆಲವು ಆಚಾರ–ವಿಚಾರಗಳನ್ನು ಸಂಗ್ರಹಿಸಿ ತಮ್ಮ ಲೇಖನದಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದಾರೆ.

ಉಗಾದಿ ಹೊತ್ತಿಗೆ ಹೊನ್ನೇರು ಕಟ್ಟಬೇಕು ಆಗ ಮುಂಗಾರು ಆರಂಭ, ರೇವತಿ, ಅಶ್ವಿನಿ ಮಳೆಗಳು ಬೀಳಬೇಕು. ಹೊಲಕ್ಕೆ ಬಿತ್ತನೆ ಚೆಲ್ಲಬೇಕು. ಅಶ್ವಿನಿ ಮಳೆಗೆ ತೆಂಗಿನ ಫಲ ಕಮ್ಮಿ ಎಂತಲೂ ಅದರ ಹಳ್ಳುಗಳು ಉದುರುತ್ತವೆ ಎಂತಲೂ ನಂಬಿಕೆ ಇದೆ.

ಭರಣಿ ಮಳೆಯಲ್ಲಿ ರೈತನಿಗೆ ಕುಣಿವ ಮನಸ್ಸು, 'ಭರಣಿ ಮಳೆ ಹೂದ್ರೆ ಧರಣಿಯೆಲ್ಲಾ ಸೌಖ್ಯ' ಎಂಬುದು ಅವರ ನಂಬಿಕೆ. ಈ ಮಳೆಯ ಹಿಂದೆಯೇ ಕೃತಿಕೆ, ರೋಹಿಣಿ ಮಳೆಗಳು ತಪ್ಪದೆ ಆಗಿಬಿಟ್ಟರಂತೂ ಭೂಮಿಯೆಲ್ಲಾ ಹಸಿರುಮಯ ಎಷ್ಟೋ ಮಳೆಗಳು ಕೈಕೊಟ್ಟು ಜ್ಯೇಷ್ಟದಲ್ಲಿ ಮೃಗಶಿರ ಮಳೆಯಾದರೂ ಮಣ್ಣಿನ ಮಕ್ಕಳು ಎದೆಗುಂದದೆ ಉತ್ತು ಬಿತ್ತಲು ಆರಂಭಿಸುತ್ತಾರೆ. ಎಂಬ ವಿಷಯ ಚರ್ಚಿತವಾಗಿದೆ.

ಆರಿದ್ರ ಮಳೆ ಅದ್ದೂರಿ ಬೆಳೆ, ಆದರೆ ಅದು ಗುಡುಗಬಾರದು, ಗುಡುಗಿದರೆ ಆರು ಮಳೆ ಬಾರವು ಎನ್ನುವುದು ವಾಡಿಕೆ, ಮುಂದೆ ಪುನರ್ವಸು ಇದಕ್ಕೆ ಚಿಕ್ಕ ಹುಸ್ಲ ಎಂತಲೂ. ಪುಷ್ಯ ಇದಕ್ಕೆ ದೊಡ್ಡ ಹುಸ್ಲು ಎಂತಲೂ ಕರೆಯುತ್ತಾರೆ. ಈ ಮಳೆಗಳ ಹೆಸರಿನಲ್ಲಿ ಹುಸ್ಲು ಹಬ್ಬವನ್ನು ಕೆಲವೆಡೆ ಆಚರಿಸುತ್ತಾರೆ.

ಉಪವಾಸದ ಹಬ್ಬ ಮಾಡ್ಕಂಡು ಅವರೆ ಬೆಳೆ ನೋಡಬೇಕು, ಶ್ರಾವಣ ದಲ್ಲಾಗುವ ಅಸ್ಲೆ ಮಳೆ ಎಂತಲೂ ಕರೆಯುತ್ತಾರೆ. ಇದು ಭಾರಿ ಮಳೆ, ಅಸ್ಲೆ ಮಳೆ ಹೂದು ಸಸಲು ಬೆಟ್ಟ ಹತ್ತಬೇಕು ಅಂತಾರೆ. ಮಳೆಯ ನೀರು ಬೆಟ್ಟಗುಡ್ಡಗಳಿಂದ ಹರಿದು ಬರುತ್ತಿದ್ದಂತೆ ತುಂಬಿದ ಹಳ್ಳಕೊಳ್ಳಗಳಿಂದ ಸಣ್ಣ ಮೀನುಗಳು ಬೆಟ್ಟದ ನೀರಿನಲ್ಲಿ ಈಜಬೇಕಂತೆ. ಅಸ್ಲೆ ಮಳೆಗೆ ಬತ್ತದ ಹೊಟ್ಟು.

ಮಕ್ಕೆ(ಮುಖ) ಮಳೆಯನ್ನು ಗಂಡು ಮಳೆ ಎನ್ನುತ್ತಾರೆ. ಈ ಮಳೆ ಜಡಿ ಹಿಡಿದು, ಮಡಕೆ ಬಾಡು ಉಳೀಬೇಕು ಕೆಲವಡೆ ಮಕ್ಕೆ ಹಬ್ಬವನ್ನು ಅದ್ದೂರಿಯಾಗಿ ಮಾಡುತ್ತಾರೆ. ಉಬ್ಬೆ ಮಳೆಯಂತೂ ಹುಯ್ದೆ ಹೋದ್ರೆ ಗುಬ್ಬಚ್ಚಿ ತಲೆಯೂ ನೆನೆಯಾಕಿಲ್ಲ ಹೂದ್ರೆ ಉಚ್ಚೆದ್ದು ಕೋಡಿಹರಿಬೇಕು.

ಉತ್ತರೆ ಮಳೆ ಹುಳ್ಳಿ ಹಾಕುವ ಮಳೆ, ಭಾರಿ ಬಿಸಿಲು, ಉತ್ತರೆಮಳೆ ಹೂದು ಉತ್ತೆತ್ತು ನೀರಿಗೆ ಮುಳ್ಗಬೇಕು, ಇನ್ನೇನು ಗೌರಿಹಬ್ಬ ಎಲ್ಲೆಲ್ಲೂ ಗರಿಗರಿ, ಗೌರಿಹೊತ್ಗೆ ಗಡ್ಗೆ ಮುಳ್ಗಬೇಕು. ಹಸ್ತದ ಮಳೆ ಹೋದ್ರೆ ಹೆತ್ತವ್ವ ಹಿಟ್ಟು ಕೊಡೋಕಿಲ್ಲ ಅಂತಾರೆ – ಹೂದ್ರೆ ಊಟಕ್ಕೆ ಬರವಿಲ್ಲ, ನಾನು ಹೂದೆ ಹುಯ್ತೀನಿ ಅಂತ ರೈತನಿಗೆ ಭಾಷೆ ಕೊಟ್ಟಿದೆಯಂತೆ, ಹೊಡೆ ಬಿಡುವ ಕಾಲ.

ಇನ್ನೂ ಚಿತ್ತೆ ಮಳೆ ಇದನ್ನು ಕುಂಡ್ ಮಳೆ ಅಂತಾರೆ ಎಲ್ಲಿ ಬೀಳ್ತೋ ಅಲ್ಲೆ ಹುಯ್ಕೊಳೋದು. ಈ ಕೇರಿಗೆ ಬಿದ್ರೆ ಇನ್ನೊಂದು ಕೇರಿಗೆ ಇಲ್ಲ. ಇಷ್ಟೊತ್ತಿಗೆ ಮಾರ್ಲಮಿ ಹಬ್ಬ ಮಾರ್ಲಮಿ ಹೊತ್ಗೆ ಮಾನುದ್ದವೆಲ್ಲ ಹೊಡೆ.

ಸ್ವಾತಿ ಮಳೆಯಂತೂ ಸರಿಯಾಗಿ ಹಿಡಿದ್ರೆ ಏಲ್ತಿನಂದ್ರೂ ಬುಡೋಕಿಲ್ಲ, ವಿಶಾತಿ ಮಳೆಗೆ ಹುಳುಜಾತಿ ಸಾಯ್ತುವೆ, ಮುದ್ಗುರಿಗಳು ಸಾಯೋಕಾಲ, ಇಪ್ಪನೇರಳೆ ಸೊಪ್ಪನಂತೂ ಹಾರಿಸಿ ಚೆನ್ನಾಗಿ ಒಣಗಿಸಿ ಹುಳಿನ ತಟ್ಟೆಗೆ ಹಾಕಬೇಕು ದೀವಳಿಗೆ ಬಂತು, ವಾಡೆ ಮೂಡೆಯೆಲ್ಲ ಖಾಲಿ, ಮಳೆವಸಿ ಹೆಚ್ಚು ಕಮ್ಮಿಯಾದ್ರೂ ದಿವಾಳಿ ಹಬ್ಬವೇ, ಇಷ್ಟೊತ್ಗೆ ತೆನೆ ಕೆಂಪೇರಬೇಕು ಎಲ್ಲೆಲ್ಲೂ ಹಸಿಕಾಯಿ, ಕುಂಬಳಕಾಯಿ ಬಂತು ಹೊಸರಾಗಿ ಕಿರ್ ದೀವಳಿಗೆಗೆ ಮೆದೆ ಹಾಕಬೇಕು. ದೊಡ್ಡ ದೀವಳಿಗೆಗೆ ಅವರೆಕಾಯಿ ತಿನ್ನಬೇಕು.

ಅನುರಾಧ ಮಳೆಗೆ ಕಣದಲ್ಲಿ ರಾಗಿ ಕೆಚ್ಚೊಯ್ತದೆ, ಮುಂದೆ ಮಾರ್ಗಶಿರ, ಮಾಘಚಳಿಗೆ ಮುನ್ನ ಬೀಳುವ ಮಳೆ, ಪುಷ್ಯದಲ್ಲಿ ಬರುವ ಜೇಷ್ಠ, ಮೂಲ, ಪೂರ್ವಾಷಾಡ ಮತ್ತು ಉತ್ತರಾಷಾಡ ಮಳೆಗಳು ಅಷ್ಟಕಷ್ಟೆ, ಭತ್ತದ ಕೊಯ್ಲುಹೋದ್ರೆ ಕೆಲ್ಸ ಕೇಡು, ಮಾಘಚಳಿ, ಹೊಸ ಕಣ, ಹೊಸ ಭತ್ತ, ಸಂಕ್ರಾಂತಿ ಬಂತು ಮೋಟಿ ಹಾಕಬೇಕು ಸುಗ್ಗಿಯೋ ಸುಗ್ಗಿ.

ಶಿವರಾತ್ರಿಲೂ ಕಣದ ಕೆಲಸ, ಉಗಾದಿ ಹೊತ್ಗೆ ಮೇಟಕಿತ್ತು ಹಬ್ಬ ತಂದ್ಕಬೇಕು, ಆ ಅವಧಿಯಲ್ಲೂ ಶ್ರವಣ, ಧನಿಷ್ಟ, ಶತಭಿಷ, ಪೂರ್ವಾಭಾದ್ರ, ಉತ್ತರಭಾದ್ರ ಮಳೆಗಳು ಆದ್ರೆ ಆಗಬಹುದು, ಹೋದ್ರೆ ಹೋಗಬಹುದು. ಕಡು ಬೇಸಿಗೆ ಕಾಲ ಗ್ರಾಮದೇವತೆಗಳ ಹಬ್ಬವೇ ಹಬ್ಬ ಸಿಂಗಾರ ಆಗಬೇಕು, ಬಂಗಾರ ತೊಡಬೇಕು ಎಂಬ ಮಳೆ ಬೆಳೆ ಹಬ್ಬದ

ವಿಷಯಗಳನ್ನು ಗ್ರಾಮದ ಹಿರಿಯ ವ್ಯಕ್ತಿಯನ್ನು ಸಂಪರ್ಕಿಸಿ ಅವರ ಅಂತರಾಳದ ಅನುಭವವನ್ನು, ಗಾದೆಯ ತುಣುಕುಗಳನ್ನು ಈ ಲೇಖನದಲ್ಲಿ ವಿವರಿಸಿರುವುದು ಒಂದು ಉತ್ತಮ ಸಂಗತಿಯಾಗಿದೆ.

೧೬. ಆರ್ಥಿಕವಾಗಿ ಹಿಂದುಳಿದರೂ, ಸಾಂಸ್ಕೃತಿಕವಾಗಿ ಮುನ್ನಡೆದ ಕೃಷ್ಣರಾಜ ಪೇಟೆ:-

ಈ ಲೇಖನದಲ್ಲಿ ಲೇಖಕರು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಪಕ್ಷಿನೋಟವನ್ನು ತಿಳಿಸಿರುವುದು ಕಂಡು ಬರುತ್ತದೆ. ಕೃಷ್ಣರಾಜ ಪೇಟೆ ತಾಲ್ಲೂಕಿನ ನೀರಾವರಿ ರಹಿತಭೂಮಿಯ ವಿಸ್ತೀರ್ಣತೆಯನ್ನು, ಕೃಷ್ಣರಾಜಪೇಟೆಗೆ ಹಿಂದೆ ಇದ್ದ ಹೆಸರು, ಅವರ ನಿಷ್ಪತ್ತಿ, ಮತ್ತು ಅಲ್ಲಿ ಹರಿಯುವ ಹೇಮಾವತಿ ನದಿಯ ವಿವರಣೆಯನ್ನು ನೀಡಿದ್ದಾರೆ. ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಕಂಡು ಬರುವ ಬೆಟ್ಟಗುಡ್ಡಗಳಾದ, 'ಬೆಳ್ಳಿಬೆಟ್ಟ, ಬೆಳ್ಳಿಬೆಟ್ಟದಲ್ಲಿ ಚಿನ್ನಬೆಳ್ಳಿ ತೆಗೆದಹಾಗೆ' ಎಂಬ ಗಾದೆಯ ವಿವರ ಇವುಗಳ ಜೊತೆಗೆ ಅಲ್ಲಿ ಕಂಡು ಬರುವ ದೇವಾಲಯಗಳಾದ ಹೊಸ ಹೊಳಲಿನ ಶ್ರೀ ಲಕ್ಷ್ಮಿ ನಾರಾಯಣ ಸ್ವಾಮಿ ದೇವಸ್ಥಾನ, ಸೋಮನಾಥಪುರದ ದೇವಸ್ಥಾನ, ಇವುಗಳ ನಿರ್ಮಾಣದ ರಚನೆ ಮತ್ತು ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯವನ್ನು ಕ್ರಿ.ಶ. ೧೧೨೧ ರಲ್ಲಿ ಹೊಯ್ಸಳ ರಾಜ ಒಂದನೆಯ ನರಸಿಂಹನ ಕಾಲದಲ್ಲಿ ಬಮ್ಮವ್ವೆ ನಾಯಕಿತಿ ಎಂಬುವಳು ಕಟ್ಟಿಸಿದಳು. ಅಲ್ಲಿಯ ಬೋದಿಗೆಯಲ್ಲಿರುವ ಮದನ ಬಾಲಕಿಯರ ಸುಂದರ ವಿಗ್ರಹಗಳು, ಆ ದೇವಾಲಯದ ವಿಶೇಷಗಳನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಇವುಗಳಲ್ಲದೆ ಹೇಮಾವತಿ ದಡದಲ್ಲಿರುವ ತ್ರಯಂಭಕೇಶ್ವರಿ, ಕಲ್ಲಳ್ಳಿಯ ಬೃಹತ್ ವರಾಹಾನಾಧ, ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ಗುಡಿ, ತೊಣಚಿ ಗ್ರಾಮದಲ್ಲಿರುವ ಶಿವದೇವಾಲಯಗಳು ಮತ್ತು ಅಲ್ಲಿ ನಡೆಯುವ ಜಾತ್ರಾವಿಶೇಷತೆಯ ಬಗ್ಗೆ ವಿವರಿಸಿದ್ದಾರೆ.

ಕೆ.ಆರ್. ಪೇಟೆ ತಾಲ್ಲೂಕಿನ ಪ್ರಾಕೃತಿಕ ಸನ್ನಿವೇಶ ಬಹಳ ರಮಣೀಯ, ಗಿರಿಯ ಮೇಲೆ ಇರುವ ಕಲ್ಯಾಣ, ವೆಂಕಟರಮಣ ಸ್ವಾಮಿ ದೇವಾಲಯದ ಬಳಿ ಹರಿಯುವ ಹೇಮಾವತಿನದಿ, ಗಜರಾಜಗಿರಿ ಪ್ರಶಸ್ತ ತಾಣಗಳ ಬಗ್ಗೆ ಅಲ್ಲಿನ ಗವಿಮಠದ ವಿಶೇಷತೆಯ ಬಗ್ಗೆ ಮತ್ತು ಅಲ್ಲಿನ ಆರ್ಥಿಕಾಭಿವೃದ್ಧಿಗೊಳಿಸುವ ಲಾಭದಾಯಕ ಬೆಳೆಯಾದ ರೇಷ್ಮೆ ಕೃಷಿ ಮತ್ತು ರೇಷ್ಮೆ ಹುಳುಗಳ ಬಿತ್ತನೆ ಕೇಂದ್ರದ ವಿವರಣೆ ಮತ್ತು ಅನುವಂಶಿಕ ಕಸುಬುಗಳಾದ ಕುಂಬಾರಿಕೆ, ಇಟ್ಟಿಗೆ ತಯಾರಿಕೆ, ಚರ್ಮ ಕೈಗಾರಿಕೆ, ಕಮ್ಮಾರಿಕೆ ಹಾಗೂ ಮರಗೆಲಸದವರು ತಮ್ಮ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇವರಿಗೆ ಸರ್ಕಾರ ಟ್ರೈಜಂ ಯೋಜನೆ ಯಡಿಯಲ್ಲಿ ಪ್ರೋತ್ಸಾಹ ನೀಡಬೇಕೆಂಬ ಆಶಯವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

೧೭. ಗ್ರಾಮ ಸ್ವರಾಜ್ಯ ಎತ್ತಸಾಗಿದೆ :-

ಈ ಲೇಖನದಲ್ಲಿ ಲೇಖಕರು ಗಾಂಧೀಜಿಯವರ ವಿಚಾರಧಾರೆಯನ್ನು ಇಂದಿನ ಪೀಳಿಗೆ ಅಗತ್ಯವಾಗಿ ಅಳವಡಿಸಿಕೊಳ್ಳಬೇಕೆಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಗಾಂಧೀಜಿಯವರ ವಿಚಾರಧಾರೆಗಳು ಬಹಳ ಸುಲಭ ಹಾಗೂ ಪರಿಣಾಮಕಾರಿಯಾಗಿರುತ್ತವೆ. ಅದು ಸಹಜ ಹಾಗೂ ಸರಳವಾದ ಬದುಕಿಗೆ ಕೊಂಡೊಯ್ಯುತ್ತದೆ. ಕುಟುಂಬ, ಸಮಾಜ, ದೇಶವನ್ನು ಒಂದು ಸಮಾಜ, ದೇಶವನ್ನು ಒಂದು ಸಮಸ್ಥಿತಿಯಲ್ಲಿಡುತ್ತವೆ. ಆದರೆ ದುರದೃಷ್ಟವಶಾತ್ ಸ್ವಾತಂತ್ರ್ಯ ನಂತರ ಗಾಂಧಿ ತತ್ವವನ್ನು ಗಾಳಿಗೆ ತೂರಿ ಗ್ರಾಮ ಸ್ವರಾಜ್ಯ ಎಂಬ ಮುಖ್ಯವಾಹಿನಿಗೆ ಹೋಗದೆ ದೇಶವನ್ನು ಸಂಕಷ್ಟಸ್ಥಿತಿಗೆ ನೂಕಿದಂತಾಗಿದೆ.

ಈ ನಿಟ್ಟಿನಲ್ಲಿ ಲೇಖಕರು ಸ್ವಾತಂತ್ರ್ಯ ನಂತರ ತಮ್ಮ ತಾಲ್ಲೂಕಿನ ಹಳ್ಳಿಗಳು ಗಾಂಧೀ ವಿಚಾರ ತತ್ವ ಪ್ರತಿಪಾದನೆಗಳನ್ನು ಅಳವಡಿಸಿಕೊಳ್ಳದೆ ಸಂಕಷ್ಟಕ್ಕೆ ಒಳಗಾದ ಚಿತ್ರಣವನ್ನು ನೀಡಿದ್ದಾರೆ. ೧೯೭೦-೭೫ ರ ಅವಧಿಯಲ್ಲಿ ಮದ್ದೂರು 'ಬಯಲು ಸೀಮೆಯ ನಾಡು' ಎಂದು ಹೆಸರಾಗಿತ್ತು ಆಗ ಅದೊಂದು ಪಟ್ಟಣ ಎನ್ನುವುದಕ್ಕಿಂತ ಒಂದು ದೊಡ್ಡ ಹಳ್ಳಿ ತರವೇ ಇತ್ತು. ತೋಟ, ತಡಿಕೆ, ಜಾನುವಾರು, ನದಿತೀರ ಅದೆಲ್ಲ ಸಹಜವಾಗಿ ಸುಂದರವಾಗಿ ಕಾಣಬರುತ್ತಿದ್ದವು. ಇವತ್ತು ಮದ್ದೂರಿಗೆ ನಗರೀಕರಣದ ಮುಖವಾಡವನ್ನು ಹೊದ್ದಿಸಿ, ಕೆಸರು ಗದ್ದೆಯಲ್ಲಿ ಕಾಂಕ್ರೀಟ್ ಕಾಡು ಬೆಳಸಿ, ಹೆದ್ದಾರಿ ಮತ್ತಿತ್ತರ ಕಾಮಗಾರಿಗಳನ್ನು ನಡೆಸಲಾಗಿದೆ. ಬೆಂಗಳೂರನ್ನು ಮಹಾನಗರ ಮಾಡಲು ನದಿಯ ಪಾತ್ರವೇ ಅಸ್ತವ್ಯಸ್ತವಾಗಿದೆ ಎಂಬ ಅಂಶಗಳನ್ನು ವಿವರಿಸಿದ್ದಾರೆ.

ಲೇಖಕರು ಹಳ್ಳಿಗಳ ಸ್ಥಿತಿಗಳ ಬಗ್ಗೆ ವಿವರಿಸುತ್ತಾ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕಾಣಬರುವ ಸಾರ್ವಜನಿಕ ಜಾಗಗಳಾದ ಗೋಮಾಳ, ಗುಂಪು ತೋಪು, ದೇವರ ಕೊಡುಗೆ, ಸ್ಮಶಾನ, ಹುಲ್‌ಬನಿ, ಸೊಪ್ಪಿನ ಮಡಿ ಇತ್ಯಾದಿ ಪರಂಪರಾನುಗತವಾಗಿ ಬಂದವುಗಳನ್ನು ಇಂದಿನ ರಾಜಕಾರಣಿಗಳು ಹೇಗೆ ಹಾಳು ಮಾಡುತ್ತಿದ್ದಾರೆ ಎಂಬ ನಿದರ್ಶನವನ್ನು ನೀಡಿದ್ದಾರೆ.

ಇವುಗಳಲ್ಲಿ ಜೊತೆಗೆ ಭಾರತವನ್ನು ಕೈಗಾರಿಕಾ ದೇಶವನ್ನಾಗಿ, ಅದರಲ್ಲಿಯೂ ಸಾಫ್ಟ್‌ವೇರ್ ದೇಶವನ್ನಾಗಿ ಮಾಡುವ ಸಂಭ್ರಮ ಮತ್ತು ಆತುರದಲ್ಲಿ ಹಳ್ಳಿಗಳನ್ನು ಮೂಲೆಗುಂಪು ಮಾಡುವ ಹುನ್ನಾರಗಳನ್ನು ನಾವು ಕಾಣಬಹುದಾಗಿದೆ. ಹಳ್ಳಿಗಳಲ್ಲಿ ಫ್ಯಾನ್, ಪೋನ್, ಲೈಟ್, ಟಿ.ವಿ. ಇತ್ಯಾದಿಗಳು ಆಧುನಿಕ ಸಾಮಾಗ್ರಿಗಳು ಕಾಣಸಿಗುತ್ತವೆ ನಿಜ ಆದರೆ ಅಲ್ಲಿನ ಜೀವನ ಮಟ್ಟ ಸುಧಾರಣೆಯನ್ನು ಕಾಣುವ ಬದಲಾಗಿ ದಿನೇ ದಿನೇ ಪಾತಾಳಕ್ಕೆ ಇಳಿಯುತ್ತದೆ ಕಾರಣ ಯಾವುದೇ ಕೃಷಿ ನೀತಿ ಇಲ್ಲವಾಗಿರುವುದು. ಈಗಾಗಲೇ ಅನ್ನಕ್ಕಾಗಿ ಅನ್ಯದೇಶಗಳನ್ನು ಅವಲಂಬಿಸುವ ಸನ್ನಿವೇಶ ದೇಶದಲ್ಲಿ ಸೃಷ್ಟಿಯಾಗಿದೆ. 'ಗ್ರಾಮೀಣಭಾರತ' ಎಂಬ ಪದಕ್ಕೆ ದ್ರೋಹ ಎಸಗಿದಂತಾಗಿದೆ.

ಇಂದು ವಿಶ್ವವು ಗಾಂಧೀಜೀಯವರ ಸತ್ಯ, ಅಹಿಂಸೆ, ಶ್ರಮದಾನ, ಸರಳ ಜೀವನ ಇತ್ಯಾದಿ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಹಾಗೂ ಅವರ ಆರ್ಥಿಕ ನೀತಿಯ ಆಕಾರದ ಮೇಲೆ ನಿಲ್ಲಬೇಕು, ಆರ್ಥಿಕತೆಯ ಇನ್ನೊಂದು ಮುಖ ವ್ಯಕ್ತಿಯ ಪ್ರಾಮಾಣಿಕ ಶ್ರಮ ಎಂಬ ಗಾಂಧಿ ತತ್ವಗಳನ್ನು ಇಂದಿನ ಯುವ ಪೀಳಿಗೆ ಅರ್ಥಮಾಡಿಕೊಳ್ಳಬೇಕು ಎಂಬ ಅಂಶಗಳನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

'ಸರಳ ಜೀವನ ಮತ್ತು ಉದಾತ್ತ ಭಾವನೆ' ಈ ಭೂಮಿಯಲ್ಲಿ ಹುಟ್ಟಿದ ಮಹರ್ಷಿಗಳಿಂದ ಹಿಡಿದು ಗಾಂಧೀಜಿಯವರೆಗೆ ನಡೆದು ಬಂದಿದೆ. ಇದು ನಮ್ಮ ಸಮಾಜಕ್ಕೆ, ಸಂಸ್ಕೃತಿಗೆ ಪರಿಸರಕ್ಕೆ, ಹೊಂದಿಕೊಂಡಿದೆ. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರನಾಶ, ಹವಾಮಾನದ ಏರುಪೇರು, ಆರ್ಥಿಕ ಮುಗ್ಗಟ್ಟು ಮುಂತಾದವುಗಳಿಗೆ ಕಾರಣವಾಗುತ್ತದೆ. ದಿನ ಬೆಳಗಾದರೆ ನಗರಗಳ ಎಗ್ಗಿಲ್ಲದ ಬೆಳವಣಿಗೆಯತ್ತ ಗಮನ ಹರಿಸುತ್ತಿದ್ದರೆ ಗ್ರಾಮಗಳ ಸ್ಥಿತಿ ಮತ್ತಷ್ಟು ಶೋಚನೀಯವಾಗುತ್ತದೆ. ಬಡತನ ನಿರ್ಮೂಲನವು ಗಾಂಧೀಜಿಯವರ ಮತ್ತೊಂದು ತುಡಿತವಾಗಿತ್ತು. ಇಂದು ಅಮಾಯಕ ಜನರನ್ನು ರೊಚ್ಚು, ಆವೇಶ, ಸಮಾಜ ವಿರೋಧಿ ಚಟುವಟಿಕೆಗಳಿಗೆ ಹುರುದುಂಬಿಸುವಂತಿದೆ ಎಂಬ ಚಿತ್ರಣವನ್ನು ನೀಡಿದ್ದಾರೆ.

ಒಟ್ಟಾರೆ ಭಾರತದ ಸರ್ವತೋಮುಖ ಏಳಿಗೆಯಾಗಬೇಕಾದರೆ ಗಾಂಧಿ ತತ್ವಗಳನ್ನು ಜನಮನದಲ್ಲಿ ಪೋಷಿಸಿ, ಬೆಳಸಿ, ಅನುಷ್ಠಾನಕ್ಕೆ ತಂದು ಸಶಕ್ತ ಸನ್ನಿವೇಶದಲ್ಲಿ ಅವುಗಳನ್ನು ಈಡೇರಿಸುವುದು ಅತ್ಯಗತ್ಯವಾಗಿದೆ. ಕೃಷಿ ಮತ್ತು ಗ್ರಾಮೋದ್ಯಗಗಳಿಗೆ ಮತ್ತೆ ಜೀವ ತುಂಬ ಬೇಕಾಗಿದೆ. ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಬೇಕಾಗಿದೆ. ಇವುಗಳ ಜೊತೆಗೆ ಗ್ರಾಮ ಸಮಾಜದ ನಂಬಿಕೆಗಳು, ಐಕ್ಯತೆ ಗಟ್ಟಿಯಾಗಬೇಕಾದರೆ ಗಾಂಧಿಪ್ರೇರಿತ ತತ್ವಚಿಂತನೆಗಳು ಅಗತ್ಯವಾಗಿದೆ ಎಂಬ ಆರೋಗ್ಯ ಪೂರ್ಣ ಅಂಶಗಳನ್ನು ಈ ಲೇಖನದಲ್ಲಿ ವಿವರಿಸಿದ್ದಾರೆ.

೧೮. ರಾಮಾಯಣದ ಸಿದ್ದೇಗೌಡರು :-

ಈ ಲೇಖನದಲ್ಲಿ ಲೇಖಕರು ಮಂಡ್ಯ ಜಿಲ್ಲೆಯಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ 'ಸೀತಾಸುತ' ಎಂಬ ಕಾವ್ಯ ನಾಮದಿಂದ ಪರಿಚಿತವಾದ 'ಸಿದ್ದೇಗೌಡರ' ಬದುಕು ಬರಹದ ಬಗ್ಗೆ ವಿವರಗಳನ್ನು ನೀಡಿದ್ದಾರೆ.

ಹಳ್ಳಿಯಲ್ಲಿ ಹುಟ್ಟಿ ಬೆಳೆದು ಗಾಂಧೀಜಿ ಅಧ್ಯಕ್ಷತೆಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿ ಸಾಬರಮತಿ ಆಶ್ರಮ, ಹಿಮಾಲಯದಲ್ಲಿ ಸುಳಿದಾಡಿ ಸಂಸ್ಕಾರ ಪಡೆದು ವಿದ್ಯಾಭ್ಯಾಸವನ್ನು ಪೂರೈಸಿ, ಸರಕಾರಿ ಹುದ್ದೆಯನ್ನು ಹಿಡಿದು ರಾಜಕಾರಣದ ಆಸೆ ತೊರೆದ ತಮ್ಮನ್ನು ಕನ್ನಡ ಸಾರಸ್ವತ ಜಗತ್ತಿಗೆ ಅರ್ಪಿಸಿಕೊಂಡ ಗೌಡರ ಹಿನ್ನೆಲೆಯ ಬಗ್ಗೆ ಸುಧೀರ್ಘವಾಗಿ ತಮ್ಮ ಲೇಖನದಲ್ಲಿ ವಿವರಿಸಿರುವುದನ್ನು ಕಾಣಬಹುದು.

ಸಿದ್ದೇಗೌಡರು ಮಂಡ್ಯ ತಾಲ್ಲೂಕು ಸಮೀಪದ ಹನಕೆರೆ ಸಮೀಪದ ಕಚ್ಚಿಗೆರೆ ಗ್ರಾಮದಲ್ಲಿ ೧೫-೦೭-೧೯೦೦ ರಲ್ಲಿ ಜನಿಸಿದರು. ಸುಮಾರು ಎಂಟನೇ ವಯಸ್ಸಿಗೆ

ನೆರೆಯ ಹನಕೆರೆಯಲ್ಲಿ ಕೂಲಿ ಮಠಕ್ಕೆ ಸೇರ್ಪಡೆ. ಮರಳು ಮೇಲೆ ಅಕ್ಷರಾಭ್ಯಾಸ ಹಳ್ಳಿಯಲ್ಲಿ ನಾಟಕ ಕಲಿಸುವುದು. ಮಿಕ್ಕರೆ ಪುಟ್ಟಯ್ಯ ಇವರ ಪ್ರಥಮ ಗುರುಗಳು ಸಮಯ ಸಿಕ್ಕಾಗ ರಾಗಿ ಬೀಸುವುದು ಕನ್ನಡ ಮತ್ತು ಇಂಗ್ಲೀಷ್ ಎರಡು ಭಾಷೆಯ ಪಾಠ ಆಗುತ್ತಿತ್ತು.ಮುಂದೆ ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡಿದರು. ನಂತರ ಎಂಟು ರೂಪಾಯಿ ಸ್ಕಾಲರ್ ಶಿಪ್ ಪಡೆದು ಎರಡು ವರ್ಷದ ಇಂಗ್ಲೀಷ್ ಲೋಯರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ೧೯೨೩ ರಲ್ಲಿ ಗೌಡರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದ ಸಂದರ್ಭದಲ್ಲಿ ಅವರಲ್ಲಿ ಸ್ವರಾಜ್ಯದ ಕಲ್ಪನೆ ಹುಟ್ಟಿತು. ೧೯೨೦ ರಲ್ಲಿ ಖಾದಿ ಮುದವೇಡಕರ್ ಕೃಷ್ಣರಾವ್ ಮೈಸೂರಿಗೆ ಬಂದು ಭಾಷಣ ಮಾಡಿದ ಸಂದರ್ಭದಲ್ಲಿ ಅವರ ಪ್ರಭಾವಕ್ಕೆ ಒಳಗಾಗಿ ಅಂದಿನಿಂದ ಅವರು ಸಹ ಖಾದಿ ಬಟ್ಟೆಯನ್ನು ಧರಿಸುವ ಚಿಂತನೆ ಮಾಡಿದರು ಎಂಬ ಅಂಶ ಇವರ ಲೇಖನದಲ್ಲಿ ವ್ಯಕ್ತವಾಗಿದೆ.

ಮುಂದೆ ಸಿದ್ದೇಗೌಡರು ಸಾಬರಮತಿ ಆಶ್ರಮಕ್ಕೆ ಹೋದ ಸಂದರ್ಭಗಳನ್ನು ತಿಳಿಸುತ್ತಾ ಅವರ ಕೆಲಸದ ಬಗ್ಗೆ ವಿವರಣೆ ನೀಡಿದ್ದಾರೆ. ಗೌಡರು ಸಾಬರಮತಿ ಆಶ್ರಮಕ್ಕೆ ಕಾಲಿಟ್ಟಾಗ ಅಲ್ಲಿದ್ದ ಕಾಳೇಕರ್ ಸಂತೋಷದಿಂದ ಒಪ್ಪಿ ಇವರಿಗೆ ಕೆಲಸ ನೀಡಿದರು. ಅದರಲ್ಲಿ ಒಂದು ಕೋಣೆ ಇವರದಾಯಿತು. ನಂತರ ಇವರ ಕೆಲಸವನ್ನು ಪರೀಕ್ಷಿಸಲು ಅನೇಕ ಪರೀಕ್ಷೆಗಳು ನಡೆದವು.ನಂತರ ಇವರ ಆಶ್ರಮದಲ್ಲಿದ್ದ ಗಾಂಧೀಜಿಯವರನ್ನು ಭೇಟಿ ಮಾಡಿ ಅಲ್ಲಿಯ ಆಶ್ರಮ ಜೀವನ, ಗಾಂಧೀಜಿಯವರ ಒಡನಾಟ ಗೌಡರ ಬದುಕಿನಲ್ಲಿ ಮರೆಯಲಾಗದ ಅನುಭವ. ಬದುಕಿನ ನೀತಿ, ನಿಯಮ, ಶಿಸ್ತು ಪಾಲನೆ ಎಲ್ಲವೂ ಅವರನ್ನು ಹಿಡಿಸಿದವು. ಅಲ್ಲಿಯೂ ಅವರಿಗೆ ಸಿಕ್ಕಿದ್ದು ಮುಖ್ಯವಾಗಿ ಭಂಗಿ, ನಂತರ ಗಾಂಧೀಜಿಯವರಿಗೆ ದಿನ ನಿತ್ಯ ಬರುತ್ತಿದ್ದ ಟಪಾಲನ್ನು ತರುವುದು ಸಂಜೆ ಪ್ರಾರ್ಥನೆಗೆ ಮುಂಚೆ ಊಟ ಮುಗಿಸುವುದು, ನಂತರ ಗರಡಿ ಕೆಲಸದಲ್ಲಿ ನಿರತರಾಗಿರುತ್ತಿದ್ದರು ಎಂಬ ಅಂಶಗಳನ್ನು ಚಿತ್ರಿಸಿದ್ದಾರೆ.

ನಂತರ ಸಿದ್ದೇಗೌಡರು ಆಶ್ರಮ ಬಿಟ್ಟು ಹಿಮಾಲಯಕ್ಕೆ ಭೇಟಿ ನೀಡಿದ ಸಂದರ್ಭ ಮತ್ತು ಮರಳಿ ಮನೆಗೆ ಬಂದ ಸಂದರ್ಭವನ್ನು ವಿವರಿಸುತ್ತಾ ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಎಳೆ-ಎಳೆಯಾಗಿ ವಿವರಿಸಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ 'ಓದೋ ಹುಡುಗ' ಎಂಬ ಕಥೆಯನ್ನು ರಚಿಸಿ ಈ ಕೃತಿಯಲ್ಲಿ ದೇಶ ಸೇವೆಗೆ ವಿದ್ಯಾರ್ಥಿಗಳನ್ನು ಮನವೊಲಿಸುವ ಪ್ರಾಮಾಣಿಕ ಪ್ರಯತ್ನವನ್ನು ತಿಳಿಸಿದ್ದಾರೆ. ಬೇಲೂರುಸೋಮನಾಥ ಪುರದ ದೇವಾಲಯಗಳ ಅವಸ್ಥೆಯನ್ನು ಕಂಡು ಆ ಹಿನ್ನಲೆಯಲ್ಲಿ ಬರೆದದ್ದೆ 'ಕಲಾಕಲಿಗಳ ಕರೆ' ಎಂಬ ಕೃತಿ, ಮಹಾವೀರತ್ಯಾಗಿ ಎಂಬ ಆದರ್ಶ ಪುರುಷನನ್ನು ಸೃಷ್ಟಿಸಿಕೊಂಡು ಗ್ರಾಮ ಕಾಪಾಡಲು ಆತನ ಕುಟುಂಬದ ದುರಂತ ಕಥೆಯನ್ನೇ ಆಧರಿಸಿದುದ್ದು 'ಭ್ರಷ್ಟಾಚಾರಕ್ಕೆ ಬಲಿ' ಈ ಕೃತಿಯಲ್ಲಿ ಬರಗಾಲದಲ್ಲಿಯೂ ಭ್ರಷ್ಟತೆ ಹೇಗೆ ಸಂಚು ನಡೆಸುತ್ತದೆ ಎಂಬುವುದನ್ನು ಚಿತ್ರಿಸಲಾಗಿದೆ.

ಸಿದ್ದೇಗೌಡರು ಮೇಲ್ಕಾಣಿಸಿದ ಕೃತಿಗಳ ಜೊತೆಗೆ ತಮ್ಮ ಚಿತ್ತವನ್ನು ರಾಮಾಯಣದ ಕಡೆಗೆ ಹರಸಿದರು ಈ ಅವಧಿಯಲ್ಲಿ ಅವರ ಚಿಂತನೆ, ಮಂಥನ ಅಹೋರಾತ್ರಿ ನಡೆದವು. ಭಗವದ್ಗೀತೆ, ರಾಮಾಯಣಕ್ಕೆ ಹೆಚ್ಚು ಹತ್ತಿರವಾದರು ಜೊತೆಗೆ ಸಾಬರಮತಿ ಆಶ್ರಮದಲ್ಲಿ ತುಳಸಿ ರಾಮಾಯಣದ ಪರಿಚಯ ವಾಗಿರುವುದರಿಂದ ಬಂಗಾಳ ಭಾಷೆಯಲ್ಲಿದ್ದ ಕೃತಿಗಳನ್ನು, ಕನ್ನಡ ಭಾಷಾಂತರವನ್ನು ಓದಿದರು. ನಂತರ ಆಲೋಚನಾ ಪ್ರವೃತ್ತರಾಗಿ 'ವಾಲ್ಮೀಕಿ ವಿರಚಿತ ರಾಮಾಯಣ' ಎಂಬ ಮಹಾಕಾವ್ಯವನ್ನು ಸುಧೀರ್ಘವಾಗಿ ಓದಿ ಅರ್ಥೈಸಿಕೊಂಡರು. ಗೌಡರಿಗೆ ಸೀತೆಯ ಬಗ್ಗೆ ಹಿಮಾಲಯದಷ್ಟು ಗೌರವ, ಈಕೆಯ ಬಗ್ಗೆ ಗೌಡರು ಕೊಡುವ ವ್ಯಾಖ್ಯಾನ ಬಹಳ ಉತ್ಕೃಷ್ಟವಾಗಿದೆ ಆದ್ದರಿಂದಲೇ ಸಿದ್ದೇಗೌಡರು 'ಸೀತಾಸುತ' ಆಗಿದ್ದಾರೆ ಎಂಬ ಅಂಶವನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಸೀತಾಸುತರ ರಾಮಾಯಣೇತರ ಗ್ರಂಥಗಳಲ್ಲಿ 'ಹಿರೋಷಿಮಾ' ಒಂದು ಮೇಲ್ಮಟ್ಟದ ಗ್ರಂಥ, ಈಕೃತಿಯಲ್ಲಿ ಗದ್ಯ, ಪದ್ಯ ವಚನ ರೂಪಗಳಲ್ಲಿ ಭಾಷಾ ಶೈಲಿ ಪ್ರತಿಪಾದನಾ ಕ್ರಮಗಳು ವೈವಿಧ್ಯವನ್ನು ತಳೆದಿವೆ ಹಳಗನ್ನಡ, ಹೊಸಗನ್ನಡಗಳು ಬೇರೆ ಬೇರೆಯಾಗಿಯೂ ಸಮ್ಮಿಶ್ರವಾಗಿ ಬಂದಿವೆ. ಈ ದೃಷ್ಟಿಯಿಂದ ಹಿರೋಷಿಮಾ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಳ್ಳುವ ಗ್ರಂಥ, ಇದು ಗದ್ಯವಾದರೂ ಪದ್ಯ ಗ್ರಂಥ ಪದ್ಯದ ದಾಟಿ ನಡುನಡುವೆ ವಾಕ್ಯಗಳಲ್ಲಿ ಮಿಂಚುತ್ತದೆ. ಭಾಷಾ ಶೈಲಿಯಂತೂ ಹಳಗನ್ನಡ ಹೊಸಗನ್ನಡಗಳ ಸಮ್ಮಿಶ್ರಣವಾಗಿದೆ ಎಂಬ ಅಂಶಗಳನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಎರಡನೇ ಮಹಾಯುದ್ದದಲ್ಲಿ ಜಪಾನ್ ದೇಶದ 'ಹಿರೋಷಿಮಾ' ನಗರದ ಮೇಲೆ ಅಮೇರಿಕನ್ನರು ಅಣುಬಾಂಬುಗಳನ್ನು ಎಸೆದರ ಪರಿಣಾಮವಾಗಿ ಉಂಟಾದ ಘೋರ ಅನರ್ಥಗಳನ್ನು, ಅದರ ಭೀಕರತೆ ಪ್ರಾಣಹಾನಿಗಳನ್ನು, ಅಂತಹ ಕಾರ್ಯವನ್ನು, ರೌದ್ರವನ್ನು ಜಗತ್ತು ಕಂಡಿರಲಿಲ್ಲ. ಅಣುಬಾಂಬಿನ ವಿಧ್ವಂಸಕ ಸಾಮರ್ಥ್ಯದೆದುರು ದಿಕ್ಕು ತೋರದೆ ಜಪಾನ್ ದೇಶವು ಮರು ಮಾತಿಲ್ಲದೆ ಮಿತ್ರ ಪಕ್ಷಕ್ಕೆ ಶರಣಾದ ಸಂಗತಿ, ಪ್ರಕೃತಿಯು ಸೃಷ್ಟಿಸಿದ್ದನ್ನು ಬಳಸಿಕೊಂಡು ಮಾನವ ಸಮಾಜವು ತನ್ನ ಸೌಖ್ಯ ಸ್ಥಿತಿಯನ್ನು ಕಂಡು ಕೊಳ್ಳವಂತಹದ್ದು ಹೀಗಿರುವಾಗ ಸೃಷ್ಟಿ ಸ್ಥಿತಿಗಳೆರಡನ್ನು ಮಾರಕಾಸ್ತ್ರಗಳಿಂದ ಸುಟ್ಟು ಬೂದಿ ಮಾಡುವುದು ಮನುಷ್ಯನಿಗೆ ಸಲ್ಲದು. ಅಣುಬಾಂಬುಗಳ ಬಳಕೆ ಮನುಷ್ಯ ಜಾತಿಯ ನೈತಿಕ ಅಧಃ ಪತನವೆಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ

ಇದರ ಜೊತೆಗೆ ಸಿದೇಗೌಡರು ಕೃಷ್ಣರಾಜಸಾಗರ ಮತ್ತು ಅದರ ನೀರಾವರಿ ಸಮಸ್ಯೆಗಳ ಬಗ್ಗೆ ಮತ್ತು ಸೂಚ್ಯವಾಗಿ ತಾಂತ್ರಿಕ ಸಮಸ್ಯೆಗಳನ್ನೊಳಗೊಡಂತೆ ಸುಮಾರು ಮುನ್ನೂರು ಪುಟಗಳಿಗೂ ಮೀರಿದ ವರದಿಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಸಲ್ಲಿಸಿದರು.ಇದರ ಪರಿಣಾಮವಾಗಿ 'ದೇವಗಂಗೆ ಕಾವೇರಿ ರಾಮಾಯಣ' ಕೃತಿ ಹೊರ ಬರಲು ಕಾರಣವಾಯಿತು. ಈ ಕೃತಿ ಪೌರಾಣಿಕ, ಸಾಂಸ್ಕೃತಿಕ ಹಿನ್ನಲೆಯನ್ನು ವಿವರಿಸಿರುವುದಲ್ಲದೆ ಕಾವೇರಿ ವಿವಾದದ ಬಗ್ಗೆ ಮಂಡ್ಯ ಜಿಲ್ಲೆಗೆ, ಕರ್ನಾಟಕ ಸರ್ಕಾರಕ್ಕೆ ದಿಕ್ಸೂಚಿಯಾಗಿದೆ ಎಂಬ ಅಂಶವನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಲೇಖಕರು ತಮ್ಮ ಲೇಖನದಲ್ಲಿ ಸಿದ್ದೇಗೌಡರಿಂದ ರಚಿತವಾದ 'ಶ್ರೀ ಶಾರದಾ ಗೃಹಿಣಿ ವಿದ್ಯಾಲಯದ' ದ ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. 'ಸೀತಾಸುತ'ರ ಕನಸ್ಸಿನ 'ಶ್ರೀ ಶಾರದಾ ಗೃಹಿಣಿ ವಿದ್ಯಾಲಯ' ಒಬ್ಬ ಸ್ವಾತಂತ್ರ್ಯ ಪ್ರೇಮಿಯ ಮನದಾಳವನ್ನು ತಿಳಿಸುತ್ತದೆ. ದೇಶೋದ್ಧಾರವಾಗಬೇಕಾದರೆ ಸ್ತ್ರೀ ಶಿಕ್ಷಣ ಅತ್ಯಗತ್ಯ, ಆಕೆಗೆ ಕೊಡಬೇಕಾದ ಶಿಕ್ಷಣವೆಂದರೆ ಸಂಕ್ಷಿಪ್ತ ಭೂ ವಿವರಣೆ, ಜಗತ್ತಿನ ಇತಿಹಾಸ ಹೆಚ್ಚಾಗಿ ಭಾರತ ದೇಶದ ಚರಿತ್ರೆ, ತತ್ವಶಾಸ್ತ್ರ, ಪಾಕಶಾಸ್ತ್ರ, ಕುಶಲಕಲೆ, ಕಾಮಶಾಸ್ತ್ರ, ಗೃಹ ಶೃಂಗಾರಶಾಸ್ತ್ರ, ಸರ್ವ ವ್ಯವಹಾರವು ಮೂವತ್ತು ವರ್ಷ ವಯಸ್ಸಿಗೆ ಮೀರಿದ ವಿವಾಹವಾಗಿರುವ ಸ್ತ್ರೀ ಉಪಾಧ್ಯಾಯರಿಂದಲೇ ಅಂಥ ಊರ್ಮಿಳಾ ವಿದ್ಯಾಲಯ ಗಳು ನಡೆಯಬೇಕು ಎಂಬ ಉಪಯುಕ್ತ ಅಂಶಗಳನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ದೇಶ ಮತ್ತು ಜಗತ್ತಿನ ಆಗು ಹೋಗುಗಳ ಬಗ್ಗೆ ಗೌಡರ ಚಿಂತನೆಗಳನ್ನು ಮಹಾತ್ಮರ ಮತ್ತು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿದವರ ಬಗ್ಗೆ ಇರುವ ಗೌರವ ಮತ್ತು ಭಕ್ತಿ ಭಾವನೆಗಳನ್ನು ರಾಮಾಯಣದಲ್ಲಿ ಪುರುಷ ಪಾತ್ರಗಳು ಹೆಬ್ಬೊತ್ತಿಗೆಯನ್ನು ಸರ್ದಾರ್‌ವಲ್ಲಭ ಬಾಯಿ ಪಟೇಲರಿಗೆ, ರಾಮಾಯಣದಲ್ಲಿರುವ ಸ್ತ್ರೀ ಪಾತ್ರಗಳು ಎಂಬ ಹೊತ್ತಿಗೆಯನ್ನು ಮೈಸೂರು ಮಹಾರಾಣಿ ಲಕ್ಷ್ಮಮ್ಮಣ್ಣಿ ಯವರಿಗೆ, ನವೀನ ದೃಷ್ಟಿಯಲ್ಲಿ ವಾಲ್ಮೀಕಿ ರಾಮಾಯಣನವನ್ನು ಸರ್.ಎಂ, ವಿಶ್ವೇಶ್ವರಯ್ಯನವರಿಗೆ ಹೀಗೆ ಮಹಾತ್ಮರ ಬಗ್ಗೆ ರಚಿತವಾದ ಜೀವನ ಚರಿತ್ರೆ ಸಂಗ್ರಹಗಳನ್ನು ಜೊತೆಗೆ 'ಕುಣಿಯೋಣ ಬಾ ಚೆನ್ನಿ' ಕವನ ಸಂಗ್ರಹದಲ್ಲಿ 'ತಮ್ಮ ನಲ್ಲೆ ಅರಗಿಣಿಯಲ್ಲ ಕರಿಗಿಣಿ' ಎಂದು ತಮಾಷೆಯಾಗಿ ಹೇಳಿ ಆ ಕಪ್ಪು ತಮಗೆ ಒಪ್ಪೆಂದು ಸಾರುತ್ತಾರೆ ಎಂಬ ಅಂಶಗಳನ್ನು ಲೇಖಕರು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಅಧ್ಯಾಯ -೪

ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ತೈಲೂರು ವೆಂಕಟಕೃಷ್ಣರವರು

ಕರ್ನಾಟಕದ ಎಲ್ಲಾ ಸಾಮ್ರಾಜ್ಯಗಳು ಸಾಹಿತ್ಯ, ಧರ್ಮ, ಕಲೆ, ಸಾಂಸ್ಕೃತಿಕ ಅರ್ಥವ್ಯವಸ್ಥೆಗಳ ಪ್ರಗತಿಗೆ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕೊಡುಗೆ ನೀಡಿದೆ. ಇಂಥ ಭವ್ಯ ಸಂಸ್ಕೃತಿ ಸಂಪನ್ನತೆಯನಾಡಿನಲ್ಲಿ ಮಿಳಿತವಾಗಿರುವ ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ದೃಷ್ಟಿಯಿಂದ ಅಧ್ಯಯನ ಮಾಡಬಹುದಾಗಿದೆ.

ಮಂಡ್ಯ ಜಿಲ್ಲೆ ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿದೆ. ರಾಜ್ಯದಲ್ಲಿ ಸದ್ಯಕ್ಕಿರುವ ೨೯ ಜಿಲ್ಲೆಗಳಲ್ಲಿ ಒಂದಾಗಿದೆ. ಜಿಲ್ಲೆಯ ಅಧಿಕ ಭಾಗ ಮಟ್ಟಸ ಬಯಲುಗಳಿಂದ ಕೂಡಿದ್ದು ಸಣ್ಣ ಪುಟ್ಟ ಬೆಟ್ಟಗಳು, ಗುಡ್ಡಗಳು, ಹೆಚ್ಚು ಎತ್ತರವಲ್ಲದ ಗಿರಿಶ್ರೇಣಿಗಳು ಅಲ್ಲಲ್ಲಿ ಕಂಡು ಬರುತ್ತವೆ. ಈ ಜಿಲ್ಲೆ ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ, ನಾಗಮಂಗಲ ಮತ್ತು ಕೃಷ್ಣರಾಜಪೇಟೆ ಎಂಬ ಏಳು ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಜಿಲ್ಲೆಯಲ್ಲಿ ಹಲವಾರು ನದಿಗಳು ಹರಿಯುತ್ತವೆ. ಮನೋಹರವಾದ ಗಗನ ಚುಕ್ಕಿ, ಭರಚುಕ್ಕಿ ಶಿಂಷಾ ಜಲಪಾತಗಳು ಕಂಗೊಳಿಸಿವೆ. ಹೀಗೆ ಐತಿಹಾಸಿಕವಾಗಿ, ಪೌರಾಣಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ಛಾಪನ್ನು ಮಂಡ್ಯ ಜಿಲ್ಲೆ ಮೂಡಿಸಿದೆ.

ತೈಲೂರು ವೆಂಕಟಕೃಷ್ಣರವರು ಈ ಜಿಲ್ಲೆಯ ಗ್ರಾಮೀಣ ಕುಟುಂಬದಲ್ಲಿ ಜನಿಸಿದ ವ್ಯಕ್ತಿಯಾದರೂ. ತಮ್ಮ ಪರಿಸರದ ಹಿನ್ನೆಲೆಯಲ್ಲಿ ಅಲ್ಲಿನ ಹಾಗೂ ಹೋಗುಗಳನ್ನು ಚೆನ್ನಾಗಿ ಬಲ್ಲವರು, ಮೂಲತಃ ಕಷಿಕರಾಗಿದ್ದ ಇವರು ಸಾಂಸ್ಕೃತಿಕ ಕಲೆಗಳ ಬಗ್ಗೆ ಹೆಚ್ಚು ಆಸಕ್ತಿಯನ್ನು ಹೊಂದಿದ್ದವರು. ಗ್ರಾಮೀಣರ ಬದುಕು ತುಂಬಾ ಸರಳವಾದದ್ದು. ಈ ಸರಳವಾದ ಬದುಕಿನಲ್ಲಿ ಹಿಂದಿನ ತಲೆಮಾರಿನ ಆಚಾರ-ವಿಚಾರ, ಆಚರಣೆಗಳು, ಹಬ್ಬಹರಿದಿನಗಳು, ಜಾತ್ರೆ, ಹೀಗೆ ಎಲ್ಲವೂ ಒಳಗೊಂಡು ಗ್ರಾಮೀಣರ ಬದುಕು ಹಸನಾಗಬೇಕೆಂದು ಕನಸುಕಂಡವರು. ಈ ನಿಟ್ಟಿನಲ್ಲಿ ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿ ಹಳ್ಳಿಗೆ ಹಿಂದಿರುಗಿ ಈ ಚಟುವಟಿಕೆಗಳಲ್ಲಿ ಕಾರ್ಯಪ್ರವೃತ್ತರಾದರು.

ಮಂಡ್ಯ ಜಿಲ್ಲೆಯು ಸಾಂಸ್ಕೃತಿಕವಾಗಿ ಬಹಳಷ್ಟು ಮುಂದುವರಿದಿದೆ. ರಾಷ್ಟ್ರ ಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಚಟುವಟಿಕೆಗಳಲ್ಲಿ ಭಾಗವಹಿಸುವ ಖ್ಯಾತಿ ಬೆಳೆಸಿಕೊಂಡಿದೆ ಎಂದರೆ ತಪ್ಪಾಗಲಾರದು ಈ ಜಿಲ್ಲೆಯ ಜನಪದ ಕಲೆಗಳಾದ ಗಾರುಡಿ ಕುಣಿತ, ಸೂತ್ರದ ಬೊಂಬೆಯಾಟ, ಸಿಡಿ ಉತ್ಸವ, ಪಂಡಿರಿಭಜನೆ, ಪಂಜುಕೋಲಾಟ, ಬೆಂಕಿ ಭರಾಟೆ, ಮೂಡಲಪಾಯ ಯಕ್ಷಗಾನ, ಪಟದಕುಣಿತ, ಭಾಗವಂತಿಕೆ, ಸೋಮನ

ಕುಣಿತ, ಪೂಜೆ ಕುಣಿತ, ಕೋಲಾಟಗಳು ಇತ್ಯಾದಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಪರಿಚಯಿಸಲಾಗಿದೆ.

ಈ ನಿಟ್ಟಿನಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಆಸಕ್ತಿಯನ್ನು ಇವರು ಪ್ರೌಢಶಾಲೆಯಲ್ಲಿಯೇ ರೂಢಿಸಿಕೊಂಡವರು. ವಿದ್ಯಾಭ್ಯಾಸದ ನಂತರ ಈ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿ ಜಿಲ್ಲೆಯ ಜನಪದ ಕಲೆಗಳನ್ನು ಮತ್ತು ಕಲಾವಿದರನ್ನು ಕರ್ನಾಟಕದ ಜನತೆಗೆ ಪರಿಚಯಿಸಿದರು.

ತೈಲೂರರು ಜಿಲ್ಲೆಯ ಜನಪದ ಕಲೆಗಳ ಪುನರುತ್ಥಾನ ಕಾರ್ಯಕ್ಕೆ ಚಾಲನೆ ನೀಡಿದರು ಎಂದರೆ ತಪ್ಪಾಗಲಾರದು. ೧೯೭೧-೭೨ ರಲ್ಲಿ ಈ ಚಟುವಟಿಕೆಗಳನ್ನು ಸಂಘಟಿಸಲು ಪ್ರಾರಂಭಿಸಿದರು. ಊರಿನಲ್ಲಿದ್ದ ಹಳೆಯ ತಲೆಮಾರುಗಳ ಹಿರಿಯರನ್ನು ಕೂಡಿಸಿ ಅವರಿಗೆ ವಿಳ್ಳೇದಲೆ ಅಡಿಕೆ ಕೊಟ್ಟು ಅವರಿಂದ ಜನಪದ ಗೀತೆಗಳನ್ನು, ಹಾಡುಗಳನ್ನು ಹಾಡಿಸಿದ್ದಾರೆ. ಆಗಿನ ಕಾಲದಲ್ಲಿ ಅವರ ಪ್ರತಿಭೆಗೆ ಬೆಲೆ ಇರಲಿಲ್ಲ. ಅವರು ಹಣಕ್ಕಾಗಿ ಎಂದು ಹಾತೊರೆದವರು ಅಲ್ಲ ಅವರಿಗೆ ಪ್ರೋತ್ಸಾಹ ಕೊರತೆಯಿತ್ತು ಹೀಗೆ ತೈಲೂರರು ಅವರನ್ನು ಗುರ್ತಿಸಿ ಅವರ ಪ್ರತಿಭೆಯನ್ನು ಹೊರಚೆಲ್ಲುವ ಕೆಲಸಕ್ಕೆ ಕೈ ಹಾಕಿದರು.

೧೯೭೨-೭೩ ರಲ್ಲಿ ಶತಾಯುಷಿ ಸಿದ್ದಾಬೋವಿ ಅವರನ್ನು ಗುರ್ತಿಸಿ ಶ್ರೀ ಹೆಚ್.ಎಲ್. ನಾಗೇಗೌಡರ ಸಮ್ಮುಖದಲ್ಲಿ ಗೌರವಿಸಲಾಯಿತು. ಅಂದು ಹರಿಜನರಲ್ಲಿ ಹುದುಗಿದ್ದ ರಂಗಮಂಟಪದ ಚಪ್ಪರ ಹಾಕುವ ಕಲೆಯನ್ನು ಗುರ್ತಿಸಿ, ಅವರ ಪ್ರತಿಭೆಯನ್ನು ಹೊರೆಗೆಳೆಯುವ ಪ್ರಯತ್ನ ಮಾಡಿದರು.

೧೯೭೪ ರಲ್ಲಿ ತೈಲೂರರು ನಶಿಸಿಹೋಗುತ್ತಿದ್ದ ಜನಪದ ಕಲೆಯನ್ನು ಸುಸ್ಥಿತಿಗೆ ತರಲು ಆಲೋಚನೆಮಾಡಿದರು. ಇದರ ಪರಿಣಾಮವಾಗಿ ಸ್ವಂತ ಊರಾದ ತೈಲೂರು ಗ್ರಾಮದಲ್ಲಿ 'ಮದ್ದೂರು ತಾಲ್ಲೂಕು ಜನಪದ ಕಲಾಮೇಳ'ವನ್ನು ಸಂಘಟಿಸಲು ಶ್ರಮಿಸಿದರು. ಇದಕ್ಕೆ ಪ್ರೇರಣೆಯಾದುದು ನಾಡಿನ ಪ್ರಸಿದ್ಧ ಜಾನಪದ ವಿದ್ವಾಂಸರಾದ ಶ್ರೀ ಹೆಚ್.ಎಲ್. ನಾಗೇಗೌಡರ ನನ್ನೂರು ಕೃತಿ. ಈ ಕೃತಿಯ ಅಭ್ಯಾಸದ ಪರಿಣಾಮವಾಗಿ ಇದರಲ್ಲಿ ಈ ಚಟುವಟಿಕೆಗಳ ಬಗ್ಗೆ ಹೆಚ್ಚು ಆಸಕ್ತಿ ಉಂಟಾಯಿತು. ಈ ಕೃತಿಯಲ್ಲಿ ಚಿತ್ರಿತವಾಗಿರುವ ಕಾರ ಹುಣ್ಣಿಮೆ ಹಬ್ಬದಲ್ಲಿ ದನಗಳನ್ನು ಬೆದರಿಸುವ ಚಿತ್ರಣವು ಇವರನ್ನು ಮನಸೂರೆಗೊಂಡಿತು. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಜನಪದ ಸಾಹಿತ್ಯ ಅಗತ್ಯ ಇದನ್ನು ಉಳಿಸಿಬೆಳೆಸಬೇಕೆಂಬ ನಿಲುವನ್ನು ಹೊಂದಿದ್ದ ಇವರು ಸ್ವತಃ ತೈಲೂರಿನಲ್ಲಿ ಎತ್ತಿನಗಾಡಿ ಓಟದ ಸ್ಪರ್ಧೆಯನ್ನು ಏರ್ಪಡಿಸಿದರು. ಈ ಸ್ಪರ್ಧೆ ಗ್ರಾಮೀಣ ಸಂಸ್ಕೃತಿ ಬಿಂಬಿಸುವ ಅಪ್ಪಟ ಗ್ರಾಮೀಣ ಕ್ರೀಡೆಯಾಗಿದೆ. ಎತ್ತಿನಗಾಡಿಯೇ ರೈತರ ಜೀವಾಳ ಈ ಸ್ಪರ್ಧೆಯಲ್ಲಿ ಬಹುತೇಕ ಮಂದಿ ಭಾಗವಹಿಸಿ ಬಹುಮಾನವನ್ನು ಪಡೆದರು. ಕೇವಲ ದುಡಿಮೆಗೆ ಸೀಮಿತವಾಗಿದ್ದ ಹಳ್ಳಿಯಲ್ಲಿ ಒಂದು ಗ್ರಾಮೀಣ ಕ್ರೀಡೆಗಳನ್ನು ಸಂಘಟಿಸಿ, ಅವರಲ್ಲಿ ಈ ಚಟುವಟಿಕೆಯ ಬಗ್ಗೆ ಆಸಕ್ತಿಯನ್ನು ಮೂಡಿಸಿರುವುದು ಕಂಡು ಬರುತ್ತದೆ. ನಾಡು-

ನುಡಿ ಜಲ, ಸಂಸ್ಕೃತಿ, ಕಲೆ ಇತ್ಯಾದಿಗಳ ಬಗ್ಗೆ ಅಭಿಮಾನ ಹೊಂದಿದ್ದ ತೈಲೂರರು, ಹಳ್ಳಿಯ ಯುವಕರು ಒಟ್ಟಾಗಿ ಸೇರಿ ಹಳ್ಳಿಯ ಉದ್ಧಾರಕ್ಕೆ ಶ್ರಮಿಸಬೇಕೆಂಬ ಆಲೋಚನೆಯನ್ನು ಕೈಗೊಂಡು ಕಾರ್ಯಪ್ರವೃತ್ತರಾದರು. ಈ ನಿಟ್ಟಿನಲ್ಲಿ ಹಳ್ಳಿಯ ಯುವಕರನ್ನು ಒಟ್ಟುಗೂಡಿಸಿ ೧೯೭೫ ರಲ್ಲಿ ತೈಲೂರಿನಲ್ಲಿ 'ಕನ್ನಡ ಯುವಕ ಸಂಘ'ವನ್ನು ಸ್ಥಾಪಿಸಿದರು. ಜೊತೆಗೆ ಹಳ್ಳಿಯ ಯುವಕರು ವಿದ್ಯಾವಂತ ರಾಗಬೇಕೆಂಬ ಉದ್ದೇಶದಿಂದ, ಅವರಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ಪ್ರವೃತ್ತಿಯಿಂದ ಒಂದು ಗ್ರಂಥಾಲಯವನ್ನು ಸಹ ಊರಿನವರ ಸಹಕಾರದಿಂದ ಸ್ಥಾಪಿಸಿದರು. ಇಂದು ಆ ಸಂಘವು ಕ್ರಿಯಾಶೀಲವಾಗಿ ಚಟುವಟಿಕೆಯಿಂದ ಕೂಡಿದೆ. ಜೊತೆಗೆ ಸುಸಜ್ಜಿತವಾದ ಗ್ರಂಥಭಂಡಾರವು ಓದುಗರಿಗೆ ಒಂದು ಕೊಡುಗೆಯಾಗಿದೆ.

೧೯೭೫ ರಿಂದ ೧೯೮೫ ರವರೆಗೆ ತೈಲೂರರು ಈ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ಈ ವೇಳೆಯಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿದರೂ ಈ ಚಟುವಟಿಕೆಗಳ ಬಗ್ಗೆ ಹೆಚ್ಚು ಆಸಕ್ತಿ ತಳೆದಿದ್ದಾರೆ. ಇದಕ್ಕೆ ನಿದರ್ಶನವೆಂದರೆ ಜನಪದ ಕಲಾಕ್ಷೇತ್ರಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಆಯೋಜಿಸಿದ್ದು, 'ದೀಪಾವಳಿಯಲ್ಲಿ ದನಗಳನ್ನು ಕೆಣಕಬ್ಯಾಡ' ಎಂಬ ಗಾದೆಯಂತೆ ಎತ್ತಿನ ಗಾಡಿ ಓಟದ ಸ್ಪರ್ಧೆಯಲ್ಲದೆ ಇತರ ಕಲೆಗಳ ಸಾಂಸ್ಕೃತಿಕ ಸ್ಪರ್ಧೆಯನ್ನು ಏರ್ಪಡಿಸಿದರು. ವಯೋಮಿತಿ ಇಲ್ಲದೆ ಎಲ್ಲರೂ ಭಾಗವಹಿಸಿದ್ದು ವಿಶೇಷವಾಗಿತ್ತು. ಮಾರ್ಚ್ ಅಂತ್ಯದ ತಿಂಗಳಿನಲ್ಲಿ ನಡೆಯುವ ತೈಲೂರಮ್ಮ ದೇವಿಯ ಉತ್ಸವ ಮತ್ತು 'ಸಿಡಿ ಉತ್ಸವ' ವನ್ನು ಚಿತ್ರೀಕರಣ ನಡೆಸಿರುವುದು, ಇದರ ಜೊತೆಜೊತೆಗೆ ಹಳ್ಳಿಹಳ್ಳಿಗೆ ಭೇಟಿನೀಡಿ ಜನಪದ ಗೀತೆಗಳನ್ನು ಸಂಗ್ರಹಿಸಿದ್ದಾರೆ. ಜಾನಪದ ವಿದ್ವಾಂಸರಾದ ಶ್ರೀ ಹೆಚ್.ಎಲ್. ನಾಗೇಗೌಡರ ಮಾರ್ಗದರ್ಶನದಲ್ಲಿ ಜನಪದಗೀತೆ ಸಂಗ್ರಹಣ ಕಾರ್ಯದಲ್ಲಿ, ಜನಪದ ಕಲಾವಿದರ ಧ್ವನಿ ಸುರುಳಿಗಳ ಸಂಗ್ರಹ ಕಾರ್ಯಕ್ರಮ 'ಸಿರಿಗಂಧ' ಚಿತ್ರೀಕರಣದಲ್ಲಿ ಸಹಾಯಕರಾಗಿ, ಹಬ್ಬ ಹರಿದಿನಗಳ ಜಾತ್ರೆಗಳ ಉತ್ಸವ ಮುಂತಾದ ಕಾರ್ಯಕ್ರಮಗಳನ್ನು ಉತ್ತಮವಾಗಿ ಆಯೋಜಿಸಿರುವುದು ಕಂಡು ಬಂದಿದೆ.

೧೯೮೦ ರಿಂದ ೧೯೮೩ ರವರೆಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾದ ಶ್ರೀ ಹೆಚ್.ಎಲ್. ನಾಗೇಗೌಡರ ಜೊತೆಯಲ್ಲಿ ಸೇರಿ, ಜನಪದ ಹಾಡುಗಳ ಧ್ವನಿಮುದ್ರಣ ಸಂಗ್ರಹಕಾರ್ಯದಲ್ಲಿ ತೊಡಗಿದ್ದಾರೆ. ಮಡಿಕೇರಿ ಭಾಗದ ಪೊನ್ನಂಪೇಟೆ ಮುಂತಾದ ಪ್ರದೇಶಗಳಿಂದ ಹಿಡಿದು ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನವರೆಗೆ ಸಂಚರಿಸಿ ಅಲ್ಲಿರುವ ಜನಪದ ಕಲೆಗಳ ಬಗ್ಗೆ ಮಾಹಿತಿಯನ್ನು ಕಲೆಹಾಕುವ ಸಂಗ್ರಹಕಾರ್ಯದಲ್ಲಿ ಭಾಗಿಯಾಗಿದ್ದಾರೆ. ಜೊತೆಗೆ ಮಂಡ್ಯ ಜಿಲ್ಲೆಯಲ್ಲಿ ಜರುಗಿದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಏರ್ಪಡಿಸಿದ್ದ ಜಾನಪದ ಕ್ಷೇತ್ರ ಕಾರ್ಯಕರ್ತರ ಶಿಬಿರದಲ್ಲಿ ಪಾಲ್ಗೊಂಡು ತಮ್ಮದೇ ಆದ ಕಾರ್ಯಗಳನ್ನು ನಿರ್ವಹಿಸಿದ್ದಾರೆ.

ಇವುಗಳ ಜೊತೆ ಜೊತೆಯಲ್ಲಿ ತೈಲೂರರು ೧೯೭೫ ರಿಂದ ೮೫ ರವರೆಗೆ ರೇಡಿಯೋ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಬಾನುಲಿಯಲ್ಲಿ ಇವರು ಹಲವಾರು ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಅದರಲ್ಲೂ ಗ್ರಾಮೀಣ ಜನತೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೆಚ್ಚು ಒತ್ತು ನೀಡಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ 'ಉಂಡು ಹೋದ-ಕೊಂಡು ಹೋದ', ಚಂದ್ರಿ, ಚೆಲುವ, ಮುಂತಾದವು. ಈ ಕಾರ್ಯಕ್ರಮ ಹಾಸ್ಯಪ್ರಧಾನವಾಗಿದ್ದು ಹಳ್ಳಿಯಲ್ಲಿಯೇ ನಡೆಯುವ ಕಥಾವಸ್ತುವನ್ನು ಒಳಗೊಂಡತಹದ್ದು. ಹೀಗೆ ಗ್ರಾಮೀಣ ಜನರಿಗೆ ಅವರು ದುಡಿಯುವ ದುಡಿಮೆ ಬಗ್ಗೆ, ಅವರ ಸಂಪ್ರದಾಯಗಳ ಬಗ್ಗೆ, ಆಚರಣೆಗಳನ್ನು ಆಚರಿಸುವ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ರೇಡಿಯೊ ಪ್ರಸಾರದಲ್ಲಿ ಬಿತ್ತರಿಸುವ ಮೂಲಕ ಜನತೆಯ ಸಂಬಂಧವನ್ನು ಉತ್ತಮ ಪಡಿಸಿದ್ದಾರೆ.

೧೯೮೫ರಲ್ಲಿ ಕರ್ನಾಟಕ ಜಾನಪದ ಪರಿಷತ್ತಿನ ಐದನೇಯ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ನಡೆಸಿಕೊಟ್ಟಿದ್ದಾರೆ. ಈ ವೇಳೆಯಲ್ಲಿ ತೈಲೂರರು ಈ ಕಾರ್ಯಕ್ರಮದ ರೂವಾರಿಯಾಗಿ ಅಚ್ಚುಕಟ್ಟಾಗಿ ಆಯೋಜಿಸಿದುದ್ದು ಗಮನಾರ್ಹವಾದುದಾಗಿದೆ. ಜಾನಪದ ಸಂಸ್ಥಾಪನಾ ಕಾರ್ಯದರ್ಶಿಯಾಗಿ, ಕರ್ನಾಟಕದ ಜನಪದ ಮೇಳವನ್ನು ಉತ್ತಮವಾಗಿ ಸಂಘಟಿಸಿ ಸೇವೆಸಲ್ಲಿಸಿದ್ದಾರೆ. ೧೯೮೬ ರಲ್ಲಿ ಮೇಲ್ಕಂಡ ಜಿಲ್ಲಾ ಜಾನಪದ ಪರಿಷತ್ತಿನ ಅಡಿಯಲ್ಲಿ ಮದ್ದೂರಿನಲ್ಲಿ 'ಅಖಿಲ ಕರ್ನಾಟಕ ಜನಪದ ಕಲಾಮೇಳ'ವನ್ನು ಸಂಘಟಿಸಿದರು. ಮಂಡ್ಯ ಜಿಲ್ಲೆಯ ಬಹುತೇಕ ಕಲಾವಿದರನ್ನು ಪ್ರೋತ್ಸಾಹಿಸಿದ್ದಾರೆ. ಈ ಸಂಬಂಧ ಮಿತ್ರರೊಡನೆ ಸಂಪಾದಿಸಿ ಹೊರ ತಂದ ಕೃತಿ 'ಬದುಕು', ಈ ಸಂಚಿಕೆಯಲ್ಲಿ ಇವರು ಪ್ರಧಾನ ಪಾತ್ರ ವಹಿಸಿದ್ದಾರೆ. ಜಿಲ್ಲೆಯಲ್ಲಿ ಆಧುನಿಕ ಕಾಲದಲ್ಲಿ ನಶಿಸಿಹೋಗುತ್ತಿದ್ದ ಜನಪದ ರಂಗಭೂಮಿಯು ಮೆಲ್ಲ ಮೆಲ್ಲನೆ ಪುನಃ ಗರಿಕೆದರಿಕೊಳ್ಳುವ ಪರಿಸ್ಥಿತಿಯನ್ನು ತಮ್ಮ ಲೇಖನ ಕೃತಿಯಲ್ಲಿ ತಿಳಿಸಿರುವುದು ಗಮನಾರ್ಹವಾದುದು.

ಜಿಲ್ಲೆಯ ಜನಪದ ಕಲಾವಿದರೊಡನೆ ಉತ್ತಮ ಸಂಬಂಧವನ್ನು ಹೊಂದಿ ಈ ಕಲೆಯನ್ನು ಬೆಳೆಸುವಲ್ಲಿ ಹೆಚ್ಚು ಪ್ರೋತ್ಸಾಹ ನೀಡಿದ್ದಾರೆ. ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾದ ತೈಲೂರರು ತಮ್ಮ ಲೇಖನಗಳಲ್ಲಿ ಈ ಕಲೆಗಳ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಪ್ರಮುಖವಾಗಿ ಮಂಡ್ಯ ತಾಲ್ಲೂಕು ಮುದಗಂದೂರು, ಪಾಂಡವಪುರ ತಾಲ್ಲೂಕಿನ ಲಕ್ಷ್ಮೀಸಾಗರದ ಕಷ್ಣೇಗೌಡರು, ಕೆ.ಆರ್.ಪೇಟೆ ತಾಲ್ಲೂಕಿನ ಸಿಂಗನಹಳ್ಳಿ ತಂಡದವರು, ಎಲೆಕೊಪ್ಪದ ಬಸವೇಗೌಡರು, ಇವರೆಲ್ಲರ ಕಲೆಯ ಪ್ರದರ್ಶನವನ್ನು ತಮ್ಮ ಲೇಖನಗಳಲ್ಲಿ ಬಿಂಬಿಸಿ ಈ ನಾಡಿನ ಜನತೆಗೆ ಪರಿಚಯಿಸಿದ್ದಾರೆ. ಪೂಜಾಕುಣಿತದಲ್ಲಿ ರಾಷ್ಟ್ರಪ್ರಶಸ್ತಿಯನ್ನು ಪಡೆದ ಕೆ. ಬೆಳ್ಳೂರಿನ ಚನ್ನೇಶ, ತಳಗವಾದಿಯ ಚೀರ್‍ನಣಯ್ಯ ಇವರ ಪ್ರತಿಭೆಯನ್ನು ಗುರ್ತಿಸಿ ಬೊಂಬಾಯಿಯಲ್ಲಿ ನಡೆದ ಅಪಣಾ ಉತ್ಸವ ಕಾರ್ಯಕ್ರಮಕ್ಕೆ ಭಾಗವಹಿಸಲು ಶಿಫಾರಸ್ಸು ಮಾಡಿರುವುದು ಈ ಚಟುವಟಿಕೆಗಳ ಬಗ್ಗೆ ಇವರಿಗಿದ್ದ ಆಸಕ್ತಿಯನ್ನು ಬಿಂಬಿಸುತ್ತದೆ.

ತೈಲೂರರು ೧೯೯೨-೯೩ ರಲ್ಲಿ ಹಂಪಿ ಕನ್ನಡ ವಿಶ್ವ ವಿದ್ಯಾನಿಲಯ ಹಮ್ಮಿಕೊಂಡಿದ್ದ 'ಗ್ರಾಮ ದೇವತೆಗಳು ಮತ್ತು ಗ್ರಾಮ ಕಲೆಗಳ' ಸಮೀಕ್ಷೆ ಕಾರ್ಯದಲ್ಲಿ ಮಂಡ್ಯ ಜಿಲ್ಲೆಯ ಪ್ರತಿನಿಧಿಯಾಗಿದ್ದುಕೊಂಡು ಜಿಲ್ಲೆಯಲ್ಲಿ ಸುತ್ತಾಡಿ ಈ ಬಗ್ಗೆ ಮಾಹಿತಿಯನ್ನು ಒದಗಿಸಿಕೊಟ್ಟಿದ್ದಾರೆ. ಇವರಿಗೆ ಈ ಜಾನಪದ ಕ್ಷೇತ್ರದಲ್ಲಿ ಆಸಕ್ತಿ ಇರುವುದರಿಂದ ಜನಪದ ಕಲಾವಿದರಿಗೆ ನೀಡುವ ಮಾಸಾಸನ ನೀಡುವುದರ ಸಂದರ್ಶಕರಾಗಿ ಕೆಲಸ ನಿರ್ವಹಿಸಿದ್ದಾರೆ.

ಈ ನಡುವೆ ಪ್ರಾಚೀನ ಸ್ಮಾರಕ ಸಂರಕ್ಷಣೆಯ ಬಗ್ಗೆ ಜೊತೆ ಜೊತೆಯಲ್ಲಿ ಕೆಲಸ ಮಾಡಿದ್ದಾರೆ. ಕೋಟೆ, ಕೊತ್ತಲು, ಪ್ರದೇಶಗಳನ್ನು ಕಂಡರೆ ವಿಶೇಷವಾದ ಆಸಕ್ತಿ ಇವರಿಗಿತ್ತು. ೧೯೯೧ ರಲ್ಲಿ ಹೊಸಬೂದನೂರು ಗ್ರಾಮದಲ್ಲಿ ಶಿಥಿಲಾವಸ್ಥೆಗೆ ಒಳಗಾಗಿದ್ದ ದೇವಾಲಯದ ಬಗ್ಗೆ 'ವಿನಾಶದತ್ತ ಹೊಯ್ಸಳ ಶಿಲ್ಪ ವೈಭವ' ಎಂಬ ಲೇಖನವನ್ನು ಬರೆದು ಅದರ ಬಗ್ಗೆ ಪುರಾತತ್ವ ಇಲಾಖೆಯ ಗಮನ ಸೆಳೆದಿದ್ದಾರೆ (೧೯೯೧-ನ.೨. ಪ್ರ.ವಾಕ. ದರ್ಶನ) ಜೊತೆಗೆ ಆ ಊರಿನ ಹಿರಿಯರೊಬ್ಬರು ಹೇಳಿದ 'ಬರಿ ಊರಿನ ಚಿತ್ರಣ ಪಡೆದರೆ ಏನೂ ಪ್ರಯೋಜನವಿಲ್ಲ ಅದರ ಜೀರ್ಣೋದ್ಧಾರ ಮಾಡಬೇಕು' ಎಂಬ ಮಾತಿನಂತೆ ಆ ಇಲಾಖೆಯ ಗಮನ ಸೆಳೆದಿದ್ದಾರೆ. ಇದಲ್ಲದೆ ೧೯೯೮ ರಲ್ಲಿ ಮಂಡ್ಯ ಜಿಲ್ಲೆಯಾದ್ಯಂತ 'ಸ್ಮಾರಕ ಉಳಿಸಿ-ಸಂಸ್ಕೃತಿ ಬೆಳಸಿ' ಕಾರ್ಯ ಯೋಜನೆಯನ್ನು ಹಮ್ಮಿಕೊಂಡು ನಿರಂತರವಾಗಿ ಶ್ರಮಿಸಿದ್ದಾರೆ.

ಹೀಗಾಗಿ ತೈಲೂರರು ಪ್ರಾಚ್ಯ ವಸ್ತು ಮತ್ತು ಪುರಾತತ್ವ ಇಲಾಖೆಯ ಜೊತೆ ನಿರಂತರ ಸಂಪರ್ಕವಿಟ್ಟುಕೊಂಡು ಬಂದಿದ್ದಾರೆ. ಪ್ರಾಚೀನ ಸ್ಮಾರಕ ಮತ್ತು ದೇವಾಲಯಗಳು, ಕೆರೆಗಳ ಸಂರಕ್ಷಣೆ, ಗೋಸಂಪತ್ತು ಇವುಗಳ ಬಗ್ಗೆ ಹೆಚ್ಚು ಕಾಳಜಿಯನ್ನು ಹೊಂದಿದ್ದಾರೆ. ಇವುಗಳ ಸಂರಕ್ಷಣೆಯ ಬಗ್ಗೆ ಮತ್ತು ೧೫ ರಿಂದ ೨೦ ದೇವಾಲಯಗಳ ಸಂರಕ್ಷಣೆ ಕಾರಣ ಕರ್ತರಾಗಿದ್ದಾರೆ. ಕೇಂದ್ರ ಪುರಾತತ್ವ ಇಲಾಖೆ, ರಾಜ್ಯ ಪುರಾತತ್ವ ಇಲಾಖೆ. ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡ ಇವರು, ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟಿನ ಜೊತೆಗೆ ಸಂಪರ್ಕ ಇಟ್ಟುಕೊಂಡಿದ್ದಾರೆ. ಕರ್ನಾಟಕ ಇತಿಹಾಸ ಆಕಾಡೆಮಿಯ ಸಂಪರ್ಕ ಹೊಂದಿ, ಅದರ ಸದಸ್ಯರಾಗಿ ಅಲ್ಲಿಯ ವಾರ್ಷಿಕ ಸಮ್ಮೇಳನಗಳಲ್ಲಿ ಭಾಗವಹಿಸಿ ಅಲ್ಲಿಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅಂಶಗಳನ್ನು ನೀಡಿದ್ದಾರೆ.

ತೈಲೂರರು ೧೯೯೮ ರಲ್ಲಿ ಮಂಡ್ಯ ಜಿಲ್ಲಾ ಪ್ರಾಚೀನ ಸ್ಮಾರಕಗಳ ಒಕ್ಕೂಟದ ಅಧ್ಯಕ್ಷರಾದರು. ಇವರ ಅಧಿಕಾರದ ಅವಧಿಯಲ್ಲಿ ಸುಮಾರು ೧೫ ರಿಂದ ೨೦ ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ. ಅವುಗಳೆಂದರೆ ಹೊಸಬೂದನೂರಿನ ಹೊಯ್ಸಳ ದೇವಾಲಯ, ಆತಗೂರಿನ ಗಂಗರ ಕಾಲದಲ್ಲಿ ನಿರ್ಮಾಣವಾಗಿದ್ದ ಚಲ್ಲೇಶ್ವರ ದೇವಾಲಯ, ಕೃಷ್ಣರಾಜಪೇಟೆ ಸಿಂಧಘಟ್ಟದ ಹೊಯ್ಸಳ ಶೈಲಿಯ ಸಂಗಮೇಶ್ವರ ದೇವಾಲಯ, ಪಾಂಡವಪುರ ತಾಲ್ಲೂಕು ಹರವು ಗ್ರಾಮದ ವಿಜಯನಗರ ಶೈಲಿಯ ರಾಮಚಂದ್ರ ದೇವಾಲಯ, ಕೆ. ಆರ್. ಪೇಟೆ ತಾಲ್ಲೂಕಿನ ಭಾರತೀಪುರದ ಕೇಶವ ದೇವಾಲಯ,

ಅಘಲಯದ ಮಲ್ಲೇಶ್ವರ ದೇವಾಲಯಗಳು ಹೀಗೆ ಹಲವು ದೇವಾಲಯಗಳ ಜೀರ್ಣೋದ್ಧಾರ ಕಾರ್ಯಕ್ಕೆ ಪ್ರಮುಖ ಪಾತ್ರ ವಹಿಸಿದ್ದಾರೆ ಇದರ ಜೊತೆಗೆ 'ಅಳಿಯುತ್ತಿರುವ ಶ್ರೀರಂಗಪಟ್ಟಣದ ಐತಿಹಾಸಿಕ ಸ್ಮಾರಕಗಳು' ಎಂಬ ಲೇಖನವನ್ನು ಬರೆದು, ಇಲಾಖೆಯ ಗಮನ ಸೆಳೆದು ಅಲ್ಲಿನ ಸ್ಮಾರಕಗಳ ಸಂರಕ್ಷಣೆಗೆ ಮುಂದಾದರು. ಸರ್ಕಾರ ಮತ್ತು ಇಲಾಖಾವತಿಯಿಂದ ಶ್ರೀರಂಗಪಟ್ಟಣದಲ್ಲಿ ನಿರ್ಮಾಣವಾದ ಜಿಲ್ಲಾ ವಸ್ತು ಸಂಗ್ರಹಾಲಯಕ್ಕೆ ಮೂಲ ಕಾರಣ ಕರ್ತರಾಗಿದ್ದಾರೆ.

'ಕರ್ನಾಟಕ ಸಂಸ್ಕೃತಿ ಮತ್ತು ಪರಂಪರೆ ಇಲಾಖೆ' ವತಿಯಿಂದ ಪ್ರಾಚೀನ ಸ್ಮಾರಕ ಸಂರಕ್ಷಣೆ ದೆಸೆಯಲ್ಲಿ, ಸಭೆ ಸಮಾರಂಭಗಳನ್ನು ಮತ್ತು ಚರ್ಚಾಗೋಷ್ಠಿ ಗಳನ್ನು ಮದ್ದೂರು ತಾಲ್ಲೂಕಿನ ಅರುವನಹಳ್ಳಿ ಗ್ರಾಮದಲ್ಲಿ ಏರ್ಪಡಿಸಿದ್ದರು. ಅದು ಜಿಲ್ಲೆಯ ಶಾಸನಗಳ ತವರೂರು ಎನ್ನಬಹುದು. ಶಾಸನಗಳ ಕಾರ್ಯಗಾರದ ಬಗ್ಗೆ ಸ್ಮಾರಕಗಳನ್ನು ಉಳಿಸುವ ಜಾಗೃತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಈ ಒಂದು ಸಂಪರ್ಕದಿಂದ 'ಮಂಡ್ಯ ಜಿಲ್ಲೆಯ ದೇವಾಲಯಗಳು ಒಂದು ಸಮೀಕ್ಷೆ' ಎಂಬ ಸಂಶೋಧನಾ ಗ್ರಂಥ ಪ್ರಕಟವಾಗುತ್ತಿದೆ. ಈ ಗ್ರಂಥದಲ್ಲಿ ಬರೀ ದೇವಾಲಯಗಳ ಕಲ್ಲು ಕಟ್ಟಡಗಳಿಗೆ ಸೀಮಿತವಾಗದೆ ಜನಜೀವನ, ಸಂಸ್ಕೃತಿ, ಭಾಷೆ, ನಡವಳಿಕೆಗಳು ಮುಂತಾದ ವಿಷಯಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ. ಇತ್ತೀಚಿನ ಬೆಳವಣಿಗೆಯಲ್ಲಿ ಮದ್ದೂರು ತಾಲ್ಲೂಕು ಮಾದನಾಯಕನಹಳ್ಳಿ ಕೆರೆ ಏರಿ ವ್ಯಾಪ್ತಿಯಲ್ಲಿರುವ ಒಂದು ಸಾವಿರ ವರ್ಷದ ಹಳೆಯ ಪ್ರಾಚೀನ ದೇವಾಲಯದ ಜೀರ್ಣೋದ್ಧಾರಕ್ಕೆ ೧೩ ನೇ ಹಣಕಾಸು ಯೋಜನೆಯಡಿ ಅನುದಾನ ಪಡೆಯಲು ರಾಜ್ಯ ಪುರಾತತ್ವ ಇಲಾಖೆಗೆ ಈ ಮಾಹಿತಿಯನ್ನು ಸೇರಿಸಿದ್ದಾರೆ.

ಇದಕ್ಕೂ ಮುನ್ನ ತೈಲೂರರು ೧೯೮೫ ರಿಂದ ೧೯೯೫ ರವರೆಗೆ 'ಕರ್ನಾಟಕ ಗಮಕ ಕಲಾ ಪರಿಷತ್ತಿ'ನ ಮಂಡ್ಯ ಜಿಲ್ಲಾ ಪರಿಷತ್ತಿನ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದ್ದಾರೆ. ೧೯೯೧ ರಲ್ಲಿ ಜಿಲ್ಲೆಯಲ್ಲಿ 'ಅಖಿಲ ಕರ್ನಾಟಕ ಗಮಕ ಸಮ್ಮೇಳನ'ವನ್ನು ನಡೆಸಿದರು. ಈ ಕಾರ್ಯಕ್ರಮದಲ್ಲಿ ರಾಜ್ಯದಲ್ಲಿನ ಹೆಸರಾಂತ ಗಮಕಿಗಳನ್ನು ಕರೆಸಿ ವಾಚನ ಮಾಡಿಸಿದ್ದಾರೆ. ಸಾಹಿತ್ಯದ ಜೊತೆಗೆ ಪ್ರಕೃತಿ, ದೇವಾಲಯಗಳ ಸಂರಕ್ಷಣೆ, ಕೆರೆಗಳ ಸಂರಕ್ಷಣೆ ಇತ್ಯಾದಿ ವಿಷಯಗಳ ಬಗ್ಗೆ ಗಮನಹರಿಸಿದ್ದಾರೆ.

೧೯೯೫ ರಲ್ಲಿ ತೈಲೂರರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ಇವರ ಅವಧಿಯಲ್ಲಿ ಅದುವರೆಗೆ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಗೆ ಸೀಮಿತವಾಗಿದ್ದ ಜಿಲ್ಲಾ ಸಾಹಿತ್ಯ ಚಟುವಟಿಕೆಗಳನ್ನು ಹೋಬಳಿ ಮಟ್ಟಕ್ಕೆ ಕೊಂಡೊಯ್ದು ಹೋಬಳಿ ಘಟಕಗಳನ್ನಾಗಿ ವಿಸ್ತರಿಸಿದರು.

ಈ ಚಟುವಟಿಕೆ ಇಡೀ ಕರ್ನಾಟಕದಲ್ಲಿ ಪ್ರಥಮ ಕಾರ್ಯವಾಯಿತು. 'ಪ್ರಕೃತಿ ಉಳಿಸಿ-ಸಂಸ್ಕೃತಿ ಬೆಳಸಿ' ಎಂಬ ಕಾರ್ಯಕ್ರಮ ಹಾಕಿಕೊಂಡು ಸಾಹಿತ್ಯ ಕೃಷಿಯ ಜೊತೆಗೆ ಸಂಸ್ಕೃತಿಯ ಬೆಳವಣಿಗೆಗೆ ಕಾರಣೀಭೂತರಾದರು. ಈ ಚಟುವಟಿಕೆಗಳನ್ನು ಪಾಂಡವಪುರ

ತಾಲ್ಲೂಕಿನ ಹರವು ಗ್ರಾಮದ ದೇವರ ಕಾಡುಗಳಲ್ಲಿ ಹಮ್ಮಿ ಕೊಳ್ಳಲಾಗಿತ್ತು. ಇದರ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿ ಅರಣ್ಯ ಇಲಾಖೆಯಿಂದ ಸಹಾಯದೊಡನೆ ಗಿಡ, ಸಸಿಗಳನ್ನು ನೆಡುವ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿದ್ದರು. ಅರೆತಿಪ್ಪೂರಿನಲ್ಲಿ, ಕೊಕ್ಕರೆ ಬೆಳ್ಳೂರಿನಲ್ಲಿ ಪ್ರಕೃತಿ ಮತ್ತು ಪಕ್ಷಿ ಸಂಕುಲಗಳಿಗೆ ಸಂಬಂಧಿಸಿದಂತೆ ಚರ್ಚಾಗೋಷ್ಠಿ ಕಾರ್ಯಕ್ರಮ ಏರ್ಪಡಿಸಿದ್ದಾರೆ.

ಸಾಹಿತ್ಯ ಪರಿಷತ್ತು, ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಯೋಗ ದೊಂದಿಗೆ ಜಿಲ್ಲಾ ಉರ್ದು ಶಿಕ್ಷಕರನ್ನು ಕಾರ್ಯಾಗಾರಕ್ಕೆ ಆಹ್ವಾನಿಸಿ ಅವರಿಗೆ ಕನ್ನಡ ಭಾಷಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಇವರ ಅವಧಿಯಲ್ಲಿ ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ 'ಬಿ. ವೆಂಕಟಚಾರ್ಯ' ಅವರ ಕೃತಿಗಳ ಬಗ್ಗೆ ಚರ್ಚೆ, ವಿಚಾರ ಗೋಷ್ಠಿ ಸಮ್ಮೇಳನವನ್ನು ಏರ್ಪಡಿಸಿದ್ದಾರೆ. ಜೊತೆಗೆ ಜಿಲ್ಲೆಯಲ್ಲಿ ಪಂಪ ಪ್ರಶಸ್ತಿಗೆ ಭಾಜನರಾದ ಎ.ಎನ್.ಮೂರ್ತಿರಾಯರು, ಪು.ತಿ.ನರಸಿಂಹಚಾರ್, ಕೆ.ಎಸ್.ನರಸಿಂಹಸ್ವಾಮಿ ಇವರನ್ನು ಕರೆಸಿ ರೈತ ಸಭಾಂಗಣದಲ್ಲಿ ೧೯೯೭ ರಲ್ಲಿ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಿ ಅವರ ಕಾವ್ಯ ಕೃತಿಗಳನ್ನು ಓದುವಂತೆ ಪ್ರೇರೇಪಿಸಿದ್ದಾರೆ.

ಮಾನವೀಯ ದೃಷ್ಟಿಯಿಂದ ಮಂಡ್ಯ ಬಂದಿಖಾನೆಯಲ್ಲಿ ವಿಚಾರಣಾಧೀನ ಕೈದಿಗಳಿಗೆ ನೈತಿಕ ಕಥೆಗಳು, ಮಹಾಕಾವ್ಯಗಳಲ್ಲಿನ ತತ್ವಗಳು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಸಿದ್ಧ ವಿದ್ವಾಂಸರಾದ ಜಿ. ನಾರಾಯಣ, ಶ್ರೀ.ಹೆಚ್.ಎಲ್.ನಾಗೇಗೌಡರು, ಡಾ॥ ಸಿ. ಬಂದಿಗೌಡರು ಮತ್ತು ಕನ್ನಡ ಮತ್ತು ಸಂಸ್ಕೃತ ವಿದ್ವಾಂಸರಾದ ಶಂಕರನಾರಾಯಣ ಭಟ್ಟರು ಮೊದಲಾದವರಿಂದ ಬಂದಿಖಾನೆ ಕೈದಿಗಳಿಗೆ ಬೋಧನೆ ಮಾಡಿಸಿ ಅವರ ಮನಃ ಪರಿವರ್ತನೆಗೆ ಪಾತ್ರರಾಗಿದ್ದಾರೆ. ೧೯೯೯ ರಿಂದ ೨೦೦೩ ರವರೆಗೆ ಮಂಡ್ಯ ಜಿಲ್ಲಾ ಗೆಝೆಟಿಯರ್ ಸಲಹಾ ಮಂಡಳಿಯ ಸದಸ್ಯರಾಗಿ. ಮಂಡ್ಯ ಜಿಲ್ಲೆಯ ಪ್ರಾಕೃತಿಕ ಸಂಪತ್ತು, ಸಾಹಿತ್ಯ ಸಂಸ್ಕೃತಿ, ಸಾಂಸ್ಕೃತಿಕ ಇತಿಹಾಸದ ಜೊತೆಗೆ ಚಾರಿತ್ರಿಕ ಮಹತ್ವದ ಪ್ರವಾಸಿ ತಾಣಗಳು ಮುಂತಾದ ಅಸಂಖ್ಯಾತ ವಸ್ತು ವಿಷಯಗಳ ಬಗ್ಗೆ ಮಾಹಿತಿಯನ್ನು ಇತರ ಸದಸ್ಯರ ಜೊತೆಗೂಡಿ ಒದಗಿಸಿದ್ದಾರೆ.

ಶ್ರೀಯುತರು ೨೦೦೫ ರಿಂದ ೨೦೦೮ ರವರೆಗೆ ರಾಷ್ಟ್ರೀಯ ಹಸ್ತಪ್ರತಿ ಅಭಿಯಾನ ಯೋಜನೆಯಡಿಯಲ್ಲಿ ಮಂಡ್ಯ ಜಿಲ್ಲಾ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಕಾರ್ಯದಲ್ಲಿ ಇಡೀ ಜಿಲ್ಲೆಯಾದ್ಯಂತ ಹಸ್ತಪ್ರತಿಗಳ ಸಮೀಕ್ಷೆ ನಡೆಸಿ ಬಹುಪಾಲು ಮನೆಗಳ ಪೆಟ್ಟಿಗೆಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳನ್ನು ಈಚೆಗೆ ತೆಗೆಸಿ ಶ್ರೀ ಭಾನುಪ್ರಕಾಶ ಶರ್ಮರವರೊಡನೆ ಚರ್ಚಿಸಿ ಇವುಗಳನ್ನು ಸಂರಕ್ಷಣೆ ಮಾಡಲು ಮೇಲುಕೋಟೆ ಸಂಸ್ಕೃತಿ ಅಕಾಡೆಮಿಗೆ ಕಳುಹಿಸಿ ಅದರ ಸಮಗ್ರ ಮಾಹಿತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ.

೨೦೦೬ ರಿಂದ ೨೦೦೮ ರವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ ಜೊತೆಗೆ 'ಎಪಿಗ್ರಾಫಿಯಾ ಆಫ್ ಕರ್ನಾಟಕ ಇನ್ ಮಂಡ್ಯ' ಡಿಸ್ಟ್ರಿಕ್ಟ್ ೨೦೦೬–೨೦೦೭ರ ಆವೃತ್ತಿಗೆ ಇವರು ಸದಸ್ಯರಾಗಿದ್ದು ಸರ್ಕಾರಕ್ಕೆ ಮತ್ತು ಸ್ಥಳೀಯ ಜನಕ್ಕೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಿಕೊಂಡು ಬಂದಿದ್ದಾರೆ.

ಒಟ್ಟಾರೆಯಾಗಿ ತೈಲೂರು ವೆಂಕಟಕೃಷ್ಣರವರು ಮಂಡ್ಯ ಜಿಲ್ಲಾ ಸಾಂಸ್ಕೃತಿಕ ಚಟುವಟಿಕೆಗಳನ್ನು ಜಿಲ್ಲೆಯಾದ್ಯಂತ ಸಂಚರಿಸಿ ಸಂಘಟಿಸಿದ್ದಾರೆ. ಜನಪದ ಕಲಾವಿದರ ಒಡನಾಟವನ್ನು ಹೊಂದಿ ಅವರ ಬದುಕು, ಅವರು ಪ್ರದರ್ಶಿಸುವ ಕಲೆ, ಅವರ ಆರ್ಥಿಕ ಸ್ಥಿತಿಗತಿ ಮತ್ತು ಪ್ರಕೃತಿ ಪ್ರೇಮ, ಸ್ಮಾರಕಗಳ ಉಳಿವಿಗಾಗಿ ನೀಡಿದ ಒತ್ತಾಸೆಗಳು ಮತ್ತು ಗ್ರಾಮೀಣ ಕಲೆಗಳನ್ನು ಇಡೀ ಕರ್ನಾಟಕದ ಜನತೆಗೆ ಪರಿಚಯಿಸುವುದು, ಇವರ ಒಂದು ಉತ್ತಮವಾದ ಶ್ರಮದಾಯಕ ಹಾಗೂ ಸೃಜನಾತ್ಮಕ ಕಾರ್ಯವಾಗಿದೆ ಎಂದು ಅಭಿಪ್ರಾಯ ಪಡಬಹುದು.

ಉಪಸಂಹಾರ

'ತೈಲೂರು ವೆಂಕಟಕೃಷ್ಣ ಅವರ ಕೃತಿಗಳು' ಎಂಬ ಶೀರ್ಷಿಕೆಯಡಿಯಲ್ಲಿ ಅವರ ಕಾದಂಬರಿಗಳನ್ನು ಮತ್ತು ಸಂಶೋಧನಾ ಗ್ರಂಥಗಳನ್ನು ಕುರಿತು ವಿಸ್ತೃತವಾಗಿ ಅಧ್ಯಯನ ಮಾಡಲಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವೆಂಕಟಕೃಷ್ಣರವರ ಕೃತಿಗಳು ಖ್ಯಾತಿಯನ್ನು ತಂದುಕೊಟ್ಟಿವೆ. ಅವರು ರಚಿಸಿದ ಕಾದಂಬರಿಗಳಾದ ಅಗ್ನಿಕುಂಡ, ಸಮ್ಮಿಳನ, ಪಾರ್ವತಿ ಹಾಗೂ ಸಂಶೋಧನಾ ಗ್ರಂಥಗಳಾದ ಮಂಡ್ಯ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ಮಂಡ್ಯಜಿಲ್ಲೆಯ ಸ್ಥಳನಾಮಗಳ ಅವಲೋಕನ ಗ್ರಂಥಗಳ ವಿಶೇಷತೆಯನ್ನು ಗುರ್ತಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಅದಕ್ಕೆ ಅನುಗುಣವಾಗುವಂತೆ ಕಾದಂಬರಿಗಳಲ್ಲಿ ಕಥಾವಸ್ತು, ಸನ್ನಿವೇಶರಚನೆ, ಪಾತ್ರಚಿತ್ರಣ, ವರ್ಣನೆ, ನಿರೂಪಣೆ ಶೈಲಿ (ಭಾಷೆ –ಅಭಿವ್ಯಕ್ತಿ– ಕಥನಕೌಶಲ) ಜೀವನದೃಷ್ಟಿ ಮತ್ತು ಸಂಶೋಧನಾ ಗ್ರಂಥದಲ್ಲಿ ಸಂಸ್ಕೃತಿ ಅಧ್ಯಯನ, ಸ್ಥಳನಾಮಗಳ ಅಧ್ಯಯನ ಬಿಡಿಬರಹಗಳು, ಲೇಖನಗಳು ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ತೈಲೂರು ವೆಂಕಟಕೃಷ್ಣ ರವರು ಹೀಗೆ ಅಧ್ಯಯನಗಳಾಗಿ ವಿಭಾಗಿಸಿಕೊಂಡು ಆಯಾ ಅಧ್ಯಾಯದ ವಿಷಯಗಳನ್ನು ಸಾಕಷ್ಟು ವಿಸ್ತೃತವಾಗಿ ಪರಿಶೀಲಿಸಲಾಗಿದೆ. ಪ್ರಾರಂಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ ತೈಲೂರು ವೆಂಕಟಕೃಷ್ಣರವರ ಜೀವನ ಮತ್ತು ಅವರ ಸಾಹಿತ್ಯ ಕೃಷಿಯ ಬಗ್ಗೆ ವಿವರಿಸಲಾಗಿದೆ.

ಬಹಳಷ್ಟು ವಿಸ್ತಾರವಾದ ಇವರ ಕಾದಂಬರಿಗಳಲ್ಲಿನ ಕಥಾವಸ್ತುವನ್ನು ಹತ್ತನ್ನೆರಡು ಪುಟಗಳಲ್ಲಿ ಸಂಕ್ಷಿಪ್ತವಾಗಿ ಚಿತ್ರಿಸುವ ಪ್ರಯತ್ನವೆಂದು ತಿಳಿಯಬಹುದು. ಇವರ ಕಾದಂಬರಿಗಳಲ್ಲಿ ಹತ್ತಾರು ಘಟನೆಗಳು, ಸನ್ನಿವೇಶಗಳು, ಕೃತಿಯುದ್ದಕ್ಕೂ ಹರಡಿಕೊಂಡಿರುವುದಲ್ಲದೆ ಒಂದರ ಘಟನೆಯ ನಂತರ ಮತ್ತೊಂದು ಘಟನೆ ಸರಪಳಿಯೋಪಾದಿಯಲ್ಲಿ ಸಾಗಿದ್ದು ಒಂದಕ್ಕೊಂದು ಸಂಬಂಧದಿಂದ ಎಣೆದು ಕೊಂಡಿದೆ. ಹಾಗಾಗಿ ಮುಖ್ಯವಾದ ಐದು ಘಟನೆಗಳನ್ನು ಮಾತ್ರ ಸನ್ನಿವೇಶ ರಚನೆಯ ಹಿನ್ನಲೆಯಲ್ಲಿ ಅಧ್ಯಯನ ಮಾಡಲಾಗಿದ್ದು ಅವು ಹೇಗೆ ಇತರ ಘಟನೆಗಳಿಗೆ ಕಾರಣವಾಗುತ್ತಾ ಸಾಗಿವೆ ಎಂಬುವುದನ್ನು ಮತ್ತು ಅವುಗಳಿಂದಾದ ಪರಿಣಾಮಗಳ ಬಗೆಗೂ ಚರ್ಚಿಸಲಾಗಿದೆ.

ಕಾದಂಬರಿಗಳಲ್ಲಿ ನಡೆಯುವ ಎಲ್ಲಾ ಘಟನೆಗಳಿಗೆ ಅಲ್ಲಿ ಬರುವ ಪಾತ್ರಗಳು ಕೇಂದ್ರಬಿಂದುವಾಗಿವೆ. ಪಾತ್ರಗಳು ಕಾದಂಬರಿಗಳಲ್ಲಿ ಮೂಲ ಆಗುವುದರಿಂದ ಅಲ್ಲಿ ಬರುವ ಎಲ್ಲಾ ಪಾತ್ರಗಳನ್ನು ಕುರಿತು ಚರ್ಚಿಸುವ ಬದಲು ಪ್ರಾತಿನಿಧಿಕವಾಗಿ ಕೆಲವು ಮುಖ್ಯ ಪಾತ್ರಗಳ ಗುಣ–ಸ್ವಭಾವಗಳನ್ನು ವಿಸ್ತಾರವಾಗಿ ಚಿತ್ರಿಸಲಾಗಿದೆ. ಇದಲ್ಲದೆ ಇವರ ಕಾದಂಬರಿಗಳಲ್ಲಿ ಬರುವ ಪಾತ್ರಗಳ ಸಾದೃಶ್ಯ–ವೈದೃಶ್ಯಗಳನ್ನು ಗುರುತಿಸುವ ಪ್ರಯತ್ನವೂ ಇದೆ. ಹಳ್ಳಿಗಳಲ್ಲಿನ ಸ್ಥಿತಿಗತಿ, ಬರಗಾಲದ ಬವಣೆಯಲ್ಲಿ ಬದುಕನ್ನು ಸಾಗಿಸುವ ಚಿತ್ರಣ ಕ್ಲಿಷ್ಟ ಕಾಲಗಳಲ್ಲಿ ಉಂಟಾಗುವ ಸಮಸ್ಯೆಗಳು ಮನುಷ್ಯ ಸಂಬಂಧದ ಸ್ಥಾಪನೆ. ಮನುಷ್ಯ

ಸಂಬಂಧದ ಅವನತಿ, ಜೀವನದ ನಿರ್ಭರತೆ, ಬಡವರ ಬವಣೆ, ಅಲ್ಲಿಯ ಸಾಮಾಜಿಕ ಜೀವನ ಮತ್ತು ಅವರು ಆಚರಿಸುವ ಹಬ್ಬ ಹರಿದಿನಗಳ ವಿವರಣೆ ಗ್ರಾಮ ಸಮಾಜದ ನಂಬಿಕೆಗಳು ಅದರ ಹಿಂದಿರುವ ಶೋಷಣೆ, ಅಜ್ಞಾನ, ಮೂಢನಂಬಿಕೆಗಳನ್ನು ಗುರ್ತಿಸಲಾಗಿದೆ. ಒಂದು ಕೃತಿಯ ಯಶಸ್ಸಿಗೆ ಕಾರಣವಾದ ತಂತ್ರವಿನ್ಯಾಸ, ಭಾಷೆ, ವರ್ಣನೆ, ನಿರೂಪಣೆ ಶೈಲಿಯನ್ನು ಲೇಖಕರು ಎಷ್ಟರ ಮಟ್ಟಿಗೆ ಬಳಸಿಕೊಂಡಿದ್ದಾರೆ. ಎಂಬುವುದರ ಪ್ರಸ್ತಾಪದೊಂದಿಗೆ ಅವುಗಳ ಹಿನ್ನಲೆಯಲ್ಲಿ ಕಾದಂಬರಿಕಾರರ ಧೋರಣೆ, ಮತ್ತು ಜೀವನದೃಷ್ಟಿಯನ್ನು ಗುರ್ತಿಸಲಾಗಿದೆ.

ಸಂಶೋಧನಾ ಗ್ರಂಥಗಳಲ್ಲಿ ಮಂಡ್ಯ ಜಿಲ್ಲೆಯ ಸಂಸ್ಕೃತಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಶಾಸನ ದೇವಾಲಯ ಸಂಸ್ಕೃತಿ ವಾಸ್ತುಶಿಲ್ಪ, ಮೂರ್ತಿ ಶಿಲ್ಪ, ಐತಿಹ್ಯ, ಅಗ್ರಹಾರ ಮತ್ತು ಮಠಗಳು, ಸಾಹಿತ್ಯ ಧರ್ಮ ಮತ್ತು ಚಿತ್ರಕಲೆ, ಜಾನಪದ ಅಂಶಗಳನ್ನು, ಮಂಡ್ಯ ಜಿಲ್ಲೆಯ ಬಹುತೇಕ ಹಳ್ಳಿಗಳಿಗೆ ಭೇಟಿಕೊಟ್ಟು ಕ್ಷೇತ್ರಕಾರ್ಯ ಕೈಗೊಂಡು ಹಳ್ಳಿಗಳ ಹೆಸರು ಹಿನ್ನೆಲೆ (ವ್ಯುತ್ಪತ್ತಿ) ನಿಷ್ಪತ್ತಿ, ಅವು ಧ್ವನಿಸುವ ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನು ಬಿಡಿಸಿ ನಿರೂಪಿಸುವುದರ ಅಧ್ಯಯನದ ಜೊತೆಗೆ ಅವರ ಲೇಖನಗಳು, ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸಲು ಅವರು ಹೇಗೆ ಕಾರಣ ಕರ್ತರಾಗಿದ್ದರು ಎಂಬ ಅಂಶವನ್ನು ಇಲ್ಲಿ ವಿವರಿಸಲಾಗಿದೆ.

ಒಟ್ಟಾರೆಯಾಗಿ ವೆಂಕಟಕೃಷ್ಣರವರ ಕೃತಿಗಳಲ್ಲಿ ಒಂದಾದ ಅಗ್ನಿಕುಂಡ ಕಾದಂಬರಿ ಬರಗಾಲದಲ್ಲಿ ಬೆಂದು ಬಸವಳಿದ ಜನತೆಗೆ ಪರಿಹಾರವೆಂಬಂತೆ ಈ ಬರಗಾಲದ ಪರಿಸ್ಥಿತಿಗೆ ನಾವು ಗ್ರಾಮ ಸಮಾಜದ ಐಕ್ಯತೆ ಗಟ್ಟಿಯಾಗಲು ಗಾಂಧಿ ಪ್ರೇರಿತ ತತ್ವ ಚಿಂತನೆಗಳನ್ನು ಅಳವಡಿಸಿಕೊಳ್ಳದಿರುವುದು ಕಾರಣವಾಗಿದೆ ಎಂಬ ಅಂಶವನ್ನು ತಿಳಿಸಿ ಹಳ್ಳಿಗಳ ಪುನರುತ್ಥಾನಕ್ಕೆ ಗಾಂಧಿ ತತ್ವ ಮಾರ್ಗವೇ ಪರಿಹಾರ ಎಂಬ ಆರೋಗ್ಯ ಪೂರ್ಣ ತತ್ವ ಚಿಂತನೆಗಳನ್ನು ಪ್ರತಿಪಾದಿಸುವ ಕೃತಿಯಾಗಿದೆ. ಇದರ ಜೊತೆಗೆ ಇತರ ಕೃತಿಗಳು ಕೈಜೋಡಿಸಿವೆ. ಪಾತ್ರಗಳ ಸಂಖ್ಯೆ ಬಹಳಷ್ಟಿದರೂ ಅವುಗಳಲ್ಲಿರುವ ಅನನ್ಯ ವಿಶಿಷ್ಟತೆ ಸಂಕೀರ್ಣವೂ, ಸಮೃದ್ಧವೂ, ಸಮರ್ಥವೂ ಆದ ಕಥಾ ಸಂವಿಧಾನ–ವಿಶಿಷ್ಟವಾದ ಆಡುನುಡಿ, ಗ್ರಾಂಥಿಕ ರೂಪಗಳಿಂದ ತುಂಬಿದ ಧ್ವನಿ ಪೂರ್ಣ ಸಂಭಾಷಣೆ, ಅನುಭವ ಶ್ರೀಮಂತಿಕೆ, ಬೌದ್ಧಿಕತೆಯ ಹೊಳಪು–ಇವು ಇವರ ಕೃತಿಗಳ ಕಲಾತ್ಮಕ ಔನ್ನತ್ಯಕ್ಕೆ ಮೂಲ ಕಾರಣಗಳಾಗಿವೆ.

ಇಷ್ಟಾಗಿಯೂ ಈ ಅಧ್ಯಯನ ಅಂತಿಮವಲ್ಲ ಎಂದು ತಿಳಿದಿರಬೇಕಾದ ವಿಚಾರ. ವೆಂಕಟಕೃಷ್ಣರವರ ಪ್ರತಿಭೆಯ ಸೃಷ್ಟಿ ಅದರ ಅಧ್ಯಯನಕ್ಕೆ ಅಂತಿಮ ತೆರೆಯನ್ನು ಎಳೆಯಲಾರದು ಎಂಬುದು ಬಹುಶಃ ಎಲ್ಲರೂ ಒಪ್ಪಿಕೊಳ್ಳುವ ಸಂಗತಿ ಎಂದುಕೊಂಡಿದ್ದೇನೆ.

ಆಕರ ಗ್ರಂಥಗಳು

೧. ತೈಲೂರು ವೆಂಕಟಕೃಷ್ಣ : ಅಗ್ನಿಕುಂಡ
ಭಾನುಪ್ರಕಾಶನ
ನಂ. ೨೯೫೮ ನೆಹರು ನಗರ
ಮಂಡ್ಯ. ೧೯೭೪, ೨೦೦೬.

೨. ತೈಲೂರು ವೆಂಕಟಕೃಷ್ಣ : ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ
ಭಾನುಪ್ರಕಾಶನ
ನಂ. ೨೯೫೮, ನೆಹರು ನಗರ
ಮಂಡ್ಯ. ೧೯೯೨.

೩. ತೈಲೂರು ವೆಂಕಟಕೃಷ್ಣ : ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ
ಭಾನುಪ್ರಕಾಶನ
ನಂ. ೨೯೫೮ ನೆಹರು ನಗರ
ಮಂಡ್ಯ. ೨೦೦೪-೨೦೦೮-೨೦೦೯.

೪. ತೈಲೂರು ವೆಂಕಟಕೃಷ್ಣ : ಪಾರ್ವತಿ
ಶ್ರೀರಾಮ ಪ್ರಕಾಶನ
ಮಂಡ್ಯ. ೧೯೭೬-೨೦೦೯.

೫. ತೈಲೂರು ವೆಂಕಟಕೃಷ್ಣ : ಸಮ್ಮಿಳನ
ನಾಗರತ್ನ ಪ್ರಕಾಶನ
ಶಂಭೂನಹಳ್ಳಿ
ಮಂಡ್ಯ ತಾಲ್ಲೂಕು. ೧೯೭೫-೨೦೦೯.

ಪರಾಮರ್ಶನ ಗ್ರಂಥಗಳು

೧. ಅಮೂರ ಜಿ.ಎಸ್. : ಕನ್ನಡ ಕಾದಂಬರಿಗಳ ಬೆಳವಣಿಗೆ
ಬೆಂಗಳೂರು ವಿಶ್ವ ವಿದ್ಯಾನಿಲಯ
ಬೆಂಗಳೂರು-೧೯೮೩

೨. ಅಮೂರ ಜಿ.ಎಸ್. : ಕನ್ನಡ ಕಥನ ಸಾಹಿತ್ಯ
ಕಾದಂಬರಿ
(ವಿಸ್ತೃತ, ಪರಿಷ್ಕೃತ ಆವೃತ್ತಿ)
ಸಪ್ನ ಬುಕ್ ಹೌಸ್,
೩ನೇ ಮುಖ್ಯ ರಸ್ತೆ, ಗಾಂಧೀನಗರ
ಬೆಂಗಳೂರು-೯, ೨೦೦೬.

೩. ಕರ್ನಾಟಕ ಸರ್ಕಾರ : ಎಪಿಗ್ರಾಫಿಯಾ ಆಫ್ ಕರ್ನಾಟಕ
ಸಂಪುಟ ೬ ಮತ್ತು ೭
ಕರ್ನಾಟಕ ಸರ್ಕಾರ.

೪. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಮತ್ತು ಸಾಹಿತ್ಯ
ದರ್ಶನ
ಮನೋಹರ ಗ್ರಂಥಮಾಲೆ,
ಧಾರವಾಡ ೧೯೯೬.

೫. ಗಿರಡ್ಡಿ ಗೋವಿಂದರಾಜ : ಕಾದಂಬರಿ ವಸ್ತು ಮತ್ತು ತಂತ್ರ
ಸ್ನೇಹ ಪ್ರಕಾಶನ
ಮಂಗಳೂರು-೧೯೮೨.

೬.	ವಿಶ್ವಕೋಶ	:	ಕನ್ನಡ ವಿಷಯ ವಿಶ್ವಕೋಶ ಸಂಪುಟ–೨. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.
೭.	ಶೇಷಗಿರಿರಾವ್ ಎಲ್.ಎಸ್.	:	ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು–೨೦೦೬.
೮.	ಸುಮತೀಂದ್ರನಾಡಿಗ	:	ವಿಮರ್ಶೆಯ ದಾರಿಯಲ್ಲಿ ಕರ್ನಾಟಕ ಬುಕ್ ಏಜೆನ್ಸಿ ಗಾಂಧೀನಗರ, ಬೆಂಗಳೂರು.